Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–19 | ಸಂಚಿಕೆ–8 | ಫೆಬ್ರವರಿ 17–23, 2025 | ಪುಟ 16 | ರೂ.10/–
Volume-19 | Issue-8 | February 17-23, 2025 | Pages:16 | Price: 10/-

ರೈತ-ಕೃಷಿ ಕೂಲಿಕಾರರ ವಿಧಾನಸೌಧ ಚಲೋ:



ಭೂ ಸಂಪತ್ತಿನ ಕಾರ್ಪೋರೇಟ್ ಲೂಟಿ ಹಿಮ್ಮೆಟ್ಟಿಸಲು

ಬೃಹತ್ ಧರಣಿ

ಬಜೆಟ್: ಕೃಷಿಯ ನಿರ್ಲಕ್ಷ್ಯ

ಅಮೇರಿಕಾವನ್ನು ಮಹಾನ್ ಗೊಳಿಸಲು ಭಾರತದ ಧಾವಂತ



ಮೆಟ್ರೋ ಪ್ರಯಾಣ ದರ ವಿಪರೀತ ಏರಿಕೆ

ಬಜೆಟ್ ಎಂಬ ಪ್ರಜಾಪ್ರಭುತ್ವದ ಸಾಧನ



ಬಜೆಟ್, ಬಜೆಟ್–ಈಗ ಬಜೆಟ್ ಗಳ ಬಗ್ಗೆಯೇ ಚರ್ಚೆ. ಆದರೆ ಬಜೆಟ್ ನ ಬಾಧೆಗೆ ಒಳಗಾದವರು ಇದಾವುದರ ಪರಿವೆಯೇ ಇಲ್ಲದೆ, ರೈತರು ತಂತಮ್ಮ ಹೊಲ ಗದ್ದೆಗಳಲ್ಲಿ ದುಡಿಯುತ್ತಿರುತ್ತಾರೆ. ಕೂಲಿಕಾರರು ಈ ಹೊಲಗಳಲ್ಲಿ ಅಥವಾ ಕಂಟ್ರಾಕ್ಟರ್ ಗಳ ಬಳಿ ಕೂಲಿ ನಾಲಿ ಮಾಡುತ್ತಾ ಬೆವರು ಹರಿಸುತ್ತಿರುತ್ತಾರೆ. ಬಜೆಟ್ ಎಂದರೇನು, ಇದು ಹುಟ್ಟಿದ್ದು ಹೇಗೆ, ರಾಜ ಸಭೆ ಎಂಬ ಆರಂಭದ ಪಾರ್ಲಿಮೆಂಟ್, ರಾಜಪ್ರಭುತ್ವದ ವಿರುದ್ಧ ಸಂಘರ್ಷದಲ್ಲಿ ಹುಟ್ಟಿದ ಬಜೆಟ್, 1689ರಲ್ಲಿ ಬ್ರಿಟನ್‌ನಲ್ಲಿ ವಿಶ್ವದ ಮೊದಲ ಬಜೆಟ್. . . ಹೀಗೆ ಬಜೆಟ್ ಕುರಿತ ಐತಿಹಾಸದ ಪುಟಗಳನ್ನು ತೆರೆದಿಟ್ಟಿದ್ದಾರೆ ಜಿ.ಎನ್.ನಾಗರಾಜ್ ಅವರು.

ಭಾಗ 14

ಜಿ.ಎನ್. ನಾಗರಾಜ್

ಬಜೆಟ್, ಬಜೆಟ್–ಈಗ ಬಜೆಟ್ ಗಳ ಬಗ್ಗೆಯೇ ಚರ್ಚೆ. ಕೆಲ ದಿನಗಳ ಹಿಂದೆ ಕೇಂದ್ರ ಬಜೆಟ್ ಬಗ್ಗೆ ಚರ್ಚೆ. ಇನ್ನು ಮುಂದೆ ಕೆಲವೇ ದಿನಗಳಲ್ಲಿ ರಾಜ್ಯ ಬಜೆಟ್ ಬಗ್ಗೆ ಚರ್ಚೆ. ಪ್ರತಿ ವರ್ಷ ಫೆಬ್ರವರಿ, ಮಾರ್ಚ್ ತಿಂಗಳು ಎಂದರೆ ಬಜೆಟ್ ಚರ್ಚೆಯೇ. ಸಂಸತ್, ವಿಧಾನಸಭೆಗಳ ಒಳಗೆ, ಹೊರಗೆ ಮಾಧ್ಯಮಗಳು, ಪತ್ರಿಕೆಗಳಲ್ಲಿ ಮಾತ್ರವಲ್ಲ, ಹೋಟೆಲ್, ಕಾಫಿ ಕ್ಲಬ್‌ಗಳಲ್ಲಿ, ಬಾರ್ ಗಳಲ್ಲಿ ಕೂಡಾ. ಮಧ್ಯಮ ವರ್ಗದ ಜನರೂ ಬಜೆಟ್ ಬಗ್ಗೆ ಚರ್ಚಿಸುತ್ತಾರೆ. ಬಜೆಟ್ ಮಂಡನೆಯನ್ನು ಎಲ್ಲರಿಗಿಂತ ಬಹಳ ಕಾತರದಿಂದ, ಸೂಕ್ಷ್ಮವಾಗಿ ಪರಿಶೀಲಿಸುವ ಮತ್ತೊಂದು ವರ್ಗವಿದೆ. ಕಾರ್ಪೊರೇಟ್ ಕಂಪನಿಗಳ ಬಂಡವಾಳಗಾರರು, ಷೇರುದಾರರು. ಬಜೆಟ್ ಮಂಡನೆ ಇನ್ನೂ ಆಗುತ್ತಿರುವಾಗಲೇ ಷೇರು ಮಾರುಕಟ್ಟೆಯಲ್ಲಿ ಏಳು, ಬೀಳುಗಳಾಗುತ್ತಿರುತ್ತವೆ. ಅವುಗಳ ಪರಿಣಾಮವಾಗಿ ಹಲವು ಬೃಹತ್ ಕಾರ್ಪೊರೇಟ್ ಗಳ ಸಂಪತ್ತಿನ ಏರುಪೇರು, ಈ ಕಂಪನಿಗಳ ಷೇರು ಕೊಂಡ ಹಲವು ಜನರು ಹೊಸ ಕನಸುಗಳನ್ನು ಕಾಣತೊಡಗುತ್ತಾರೆ ಅಥವಾ ಅವರ ಹಳೆ ಕನಸುಗಳು ಭಗ್ನಗೊಳ್ಳುವ ಪರಿಸ್ಥಿತಿಯೂ ಉಂಟಾಗುತ್ತದೆ. ಷೇರು ಮಾರುಕಟ್ಟೆಯ ಪ್ರತಿಕ್ರಿಯೆಯನ್ನು ಬಜೆಟ್ ಮಂಡಿಸಿದವರು ಬಹಳ ಕಾತರದಿಂದ ಗಮನಿಸುತ್ತಿರುತ್ತಾರೆ. ತಕ್ಷಣವೇ ಬಜೆಟ್‌ನಲ್ಲಿ ತಿದ್ದುಪಡಿ ತರುವ ಭರವಸೆಗಳನ್ನು ನೀಡುತ್ತಾರೆ. ಒಮ್ಮೆ ಬಜೆಟ್ ಮಂಡಿಸಿದ ಅರ್ಥ ಮಂತ್ರಿಯೇ ಸ್ವತಃ ಷೇರು ಮಾರುಕಟ್ಟೆಗೆ ಓಡಿ ಹೋಗಿ ವಿವರಣೆ ಕೊಡುವ, ಸಮಾಧಾನ ಮಾಡುವ ಪ್ರಸಂಗವನ್ನೂ ನೋಡಿದ್ದೇವೆ.

ಆದರೆ ಅಷ್ಟೇಯೇ!

ಈ ಚರ್ಚೆಗಳಲ್ಲಿ ಅಪರೂಪಕ್ಕೆ ಅಲ್ಲೊಮ್ಮೆ ಇಲ್ಲೊಮ್ಮೆ ಬಜೆಟ್ ಕೋಟ್ಯಾಂತರ ಜನರ ಬದುಕಿನಲ್ಲಿ ಉಂಟು ಮಾಡುವ ಅಲ್ಲೋಲ ಕಲ್ಲೋಲಗಳ ಬಗ್ಗೆ ಕೆಲ ಮಾತುಗಳು ಇಣುಕುತ್ತವೆ. ಆದರೆ ಬಜೆಟ್ ನ ಈ ಬಾಧೆಗೆ ಒಳಗಾದವರು ಇದಾವುದರ ಪರಿವೆಯೇ ಇಲ್ಲದೆ ರೈತರು ತಂತಮ್ಮ ಹೊಲ ಗದ್ದೆಗಳಲ್ಲಿ ದುಡಿಯುತ್ತಿರುತ್ತಾರೆ. ಕೂಲಿಕಾರರು ಈ ಹೊಲಗಳಲ್ಲಿ ಅಥವಾ ಕಂಟ್ರಾಕ್ಟರ್ ಗಳ ಬಳಿ ಕೂಲಿ ನಾಲಿ ಮಾಡುತ್ತಾ ಬೆವರು ಹರಿಸುತ್ತಿರುತ್ತಾರೆ. ಕಾರ್ಪೊರೇಟ್ ಕಂಪನಿಗಳ ಇತರ ಕೈಗಾರಿಕೆಗಳ ಮಾಲಿಕರು ಬಜೆಟ್‌ನ ವಾಕ್ಯ ವಾಕ್ಯವನ್ನೂ, ಅಂಕಿ ಅಂಕಿಗಳನ್ನೂ ಕಾತರದಿಂದ ಪರಿಶೀಲನೆಗೊಳಪಡಿಸುತ್ತಿದ್ದರೆ, ಅವರದೇ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರು ಬಜೆಟ್ ನ ಪರಿವೆಯೇ ಇಲ್ಲದೆ ದುಡಿಯುತ್ತಿರುತ್ತಾರೆ.

ಇವೆಲ್ಲವುಗಳಿಂದ ಒಂದು ದೇಶಕ್ಕೆ, ಆ ದೇಶದ ಜನರ ಜೀವನಕ್ಕೆ ಬಜೆಟ್ ಎಷ್ಟೊಂದು ಪ್ರಮುಖ ಎಂಬುದಂತೂ ತಿಳಿಯಬರುತ್ತದೆ.

ಬಜೆಟ್ ಗೆ ಈ ಪರಿಯ ಪ್ರಾಮುಖ್ಯತೆ ಏಕೆ?

ಬಜೆಟ್ ಎಂದ ಕೂಡಲೇ ಥಟ್ಟನೆ ಕಣ್ಣ ಮುಂದೆ ಬರುವುದು ಅರ್ಥ ಮಂತ್ರಿಗಳ ಭಾಷಣ, ಮಾಧ್ಯಮಗಳಲ್ಲಿ ಒಂದಾದರ ಮೇಲೊಂದರಂತೆ ಬರುತ್ತಿರುವ ಬ್ರೇಕಿಂಗ್ ನ್ಯೂಸ್ ಗಳು. ಇದಕ್ಕೆ ನೀಡುವ ಅಬ್ಬರದ ಪ್ರಚಾರದಿಂದಾಗಿ ಇದೇ ಬಜೆಟ್ ಎಂಬ ತಪ್ಪು ಕಲ್ಪನೆಯನ್ನು ಮೂಡಿಸಲಾಗಿದೆ. ಆದರೆ ಬಜೆಟ್ ಎಂಬ ಪರಿಕಲ್ಪನೆಯ ನಿಜವಾದ ಹೆಸರು ವಾರ್ಷಿಕ ಲೆಕ್ಕಪತ್ರದ ಪಟ್ಟಿ/ಹೇಳಿಕೆ (ಅನುಯಲ್ ಫೈನಾನ್ಷಿಯಲ್ ಸ್ಟೇಟ್ಮೆಂಟ್). ವಿವಿಧ ಮೂಲಗಳಿಂದ ಸರ್ಕಾರದ ಆದಾಯ ಮತ್ತು ವಿವಿಧ ಕಾರ್ಯಗಳಿಗಾಗಿ ಮಾಡುವ ವೆಚ್ಚಗಳ ಪಟ್ಟಿ ಇದು.

ಇದರಲ್ಲಿ ಬಜೆಟ್ ಮಂಡಿಸುವ ಸರ್ಕಾರ ಹಿಂದಿನ ವರ್ಷದ ಬಜೆಟ್ ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದಿದೆ? ಸಂಗ್ರಹಿಸಲು ಉದ್ದೇಶಿಸಿದ ಆದಾಯ, ವಾಸ್ತವವಾಗಿ ಕೂಡಿಸಿದ ಆದಾಯ ಎಷ್ಟು? ಯಾವ ಮೂಲಗಳಿಂದ? ವಿವಿಧ ಯೋಜನೆ, ಕಾರ್ಯಗಳಿಗಾಗಿ ಮೀಸಲಿಟ್ಟ ಹಣ ಎಷ್ಟು? ನಿಜವಾಗಿ ಮಾಡಿದ ವೆಚ್ಚ ಎಷ್ಟು? ಬಜೆಟ್ ಮಂಡಿಸಲಾಗುತ್ತಿರುವ ವರ್ಷದಲ್ಲಿ ಸಂಗ್ರಹಿಸಲು ಉದ್ದೇಶಿಸಿದ ಆದಾಯ ಎಷ್ಟು? ಅದಕ್ಕಾಗಿ ಯಾವ ತೆರಿಗೆಗಳ ಏರಿಕೆ ಮಾಡಲಾಗುತ್ತಿದೆ? ಹೀಗೆ ಸಂಗ್ರಹಿಸಲಾಗುವ ಆದಾಯ ಸರ್ಕಾರದ ಆಡಳಿತ ಯಂತ್ರ, ವಿವಿಧ ಕಾರ್ಯಭಾರ, ಕೈಗೊಳ್ಳಬೇಕೆಂದಿರುವ ಯೋಜನೆಗಳು ಮುಂತಾದವಕ್ಕೆ ಅಗತ್ಯವಾದ ಹಣ ದೊರಕುತ್ತದೆಯೇ? ಸಾಲದೆ ಹೋದರೆ ಯಾವ ಮೂಲಗಳಿಂದ, ಎಷ್ಟು ಸಾಲ ಮಾಡಲು ದೊರಕಿಸಬಹುದು? ಹೀಗೆ ಸಂಗ್ರಹಿಸಿದ ಹಣದಿಂದ ಹೊಸದಾಗಿ ಕೈಗೊಳ್ಳಬೇಕೆಂದಿರುವ ಯೋಜನೆಗಳು, ಹಿಂದಿನ ಯೋಜನೆಗಳ ಮುಂದುವರಿಕೆ ಮುಂತಾದವಕ್ಕೆ ನೀಡಲಾಗುವ ಹಣ ಹಂಚಿಕೆ ಎಷ್ಟು ಎಂಬುದರ ವಿವರವಾದ ಪಟ್ಟಿ ಇದು. ಇವುಗಳ ಸಾರವನ್ನು ಸಂಕ್ಷಿಪ್ತವಾಗಿ ನೀಡುವ ಸರಳ ಪಟ್ಟಿಯ ಜೊತೆಗೆ ವಿವಿಧ ಯೋಜನೆ ಮತ್ತು ಆಡಳಿತ ಯಂತ್ರದ ವಿವಿಧ ಇಲಾಖೆಗಳಿಗೆ ಹಂಚಲಾಗುವ ಹಣದ ವಿವರ ನೀಡುವ ಹಲವು ಪಟ್ಟಿಗಳ ಬೃಹತ್ ಸಂಪುಟಗಳೂ ಇರುತ್ತವೆ.

ಈ ವಾರ್ಷಿಕ ಲೆಕ್ಕವನ್ನು ಸಂಸತ್ ಅಥವಾ ವಿಧಾನಸಭೆಗಳ ಮುಂದೆ ಮಂಡಿಸಿ ಆ ಚುನಾಯಿತ ಸಂಸ್ಥೆಗಳಲ್ಲಿ ಹಿಂದಿನ ವರ್ಷದ ಬಜೆಟ್ ಜಾರಿ, ಪ್ರಸ್ತುತ ವರ್ಷದ ಹಣ ಹಂಚಿಕೆ ಯೋಜನೆಗಳ ಬಗ್ಗೆ ವಿವರವಾದ ಚರ್ಚೆಗೆ ಒಳಪಡಿಸುವುದು, ಚುನಾಯಿತ ಪ್ರತಿನಿಧಿಗಳ ವಿಮರ್ಶೆಗಳನ್ನು ಆಲಿಸಿ ಸಲಹೆಗಳನ್ನು ಪಡೆದು ಅಗತ್ಯ ಮಾರ್ಪಾಡುಗಳನ್ನು ಮಾಡಿ, ಬಜೆಟ್ ಗೆ ಈ ಸಂಸ್ಥೆಗಳ ಅಂಗೀಕಾರ ಪಡೆಯುವುದರೊಂದಿಗೆ ಬಜೆಟ್ ರೂಪಿಸುವ ಒಂದು ಹಂತದ ಕ್ರಿಯೆ ಕೊನೆಯಾಗುತ್ತದೆ. ಮುಂದೆ ಈ ಅಂಗೀಕಾರದ ವ್ಯಾಪ್ತಿಯೊಳಗೆ ಬಜೆಟ್ ನ ಹಣ ಹಂಚಿಕೆಯನ್ನುಅದರ ಉದ್ದೇಶಗಳಿಗೆ ಅನುಗುಣವಾಗಿ ವೆಚ್ಚ ಮಾಡುವುದು ಮತ್ತು ಮುಂದಿನ ವರ್ಷ ಅದನ್ನು ವಿಮರ್ಶೆಗೆ ಒಳಪಡಿಸುವುದು ಅದರ ಮುಂದಿನ ಹಂತ.

ಹೀಗೆ ಬಜೆಟ್ ಎಂಬುದು ಪ್ರಜೆಗಳಿಂದ ಆಯ್ಕೆಯಾದ ಸರ್ಕಾರವನ್ನು ಜನಪ್ರತಿನಿಧಿಗಳ ನಿಯಂತ್ರಣಕ್ಕೆ, ಆ ಮೂಲಕ ಅಂತಿಮವಾಗಿ ಜನರ ನಿಯಂತ್ರಣಕ್ಕೆ ಒಳಪಡಿಸುವ ಪ್ರಜಾಪ್ರಭುತ್ವೀಯ ಕಾರ್ಯವಿಧಾನ.

ರಾಜಪ್ರಭುತ್ವದ ವಿರುದ್ಧ ಸಂಘರ್ಷದಲ್ಲಿ ಹುಟ್ಟಿದ ಬಜೆಟ್

ರಾಜಪ್ರಭುತ್ವದಲ್ಲಿ ರಾಜರುಗಳು ರೈತರ ಮೇಲೆ ಕಂದಾಯ, ವ್ಯಾಪಾರ ಮತ್ತು ಇತರ ವ್ಯವಹಾರಗಳ ಮೇಲೆ ತೆರಿಗೆಗಳನ್ನು, ಸುಂಕಗಳನ್ನು ಹಾಕುತ್ತಿದ್ದುದು ಸಾಮಾನ್ಯವಾಗಿತ್ತು. ತಮ್ಮ ರಾಜ್ಯದ ರಕ್ಷಣೆಗೆ, ಪರ ರಾಜ್ಯಗಳ ಮೇಲೆ ಆಕ್ರಮಣಕ್ಕೆ ಸೈನ್ಯವನ್ನು, ಸೇನಾಧಿಪತಿಗಳನ್ನು ನಿರ್ವಹಿಸಲು, ಶಸ್ತ್ರಾಸ್ತ್ರಗಳ ತಯಾರಿಕೆ, ಕೋಟೆ ಕೊತ್ತಲಗಳಿಗಾಗಿ ಎಂಬ ವೆಚ್ಚಗಳಿಗಾಗಿ ಹಣ ಸಂಗ್ರಹಿಸುವುದು, ಆಡಳಿತಾಧಿಕಾರಿಗಳು, ಸಿಬ್ಬಂದಿಯ ವೆಚ್ಚ ಅದರ ಮೂಲ ಉದ್ದೇಶವಾಗಿತ್ತು. ಆದರೆ ರಾಜನ ಹಲವು ಅರಮನೆಗಳು, ಹಲವಾರು ರಾಣಿಯರು, ನೂರಾರು ಉಪಪತ್ನಿಯರನ್ನುಳ್ಳ ಅಂತಃಪುರ, ಸಾವಿರಾರು ಸೇವಕ, ಸೇವಕಿಯರು ರಾಜ ಪುತ್ರರು, ರಾಜ ವಂಶದ ಇತರ ಸಂಬಂಧಿಗಳು ಇವರೆಲ್ಲರ ವೈಭವದ ಜೀವನ ಇವುಗಳಿಗಾಗಿ ಮನಸೋಇಚ್ಛೆ ಕಂದಾಯ ಏರಿಸುವುದು ತೆರಿಗೆ ಹಾಕುವುದು ಬಹಳ ಸಾಮಾನ್ಯವಾಗಿತ್ತು.



ಕರ್ನಾಟಕದಲ್ಲಿ ಹತ್ತು ಹನ್ನೊಂದನೇ ಶತಮಾನಗಳ ಕಾಲದ ರಾಜಪ್ರಭುತ್ವಗಳು ಹಾಕಿದ್ದ ಕಂದಾಯ, ತೆರಿಗೆಗಳ ಪರಿಯನ್ನು ನೋಡಿ: ಭೂಮಿಯ ಮೇಲೆ ಕಂದಾಯ, ಮನೆ, ಅಂಗಡಿಗಳ ಮೇಲೆ ಸಿದ್ದಾಯ. ವಾರ್ಷಿಕ ತೆರಿಗೆಗಳಾದ ಇವುಗಳ ಪ್ರಮಾಣ ರಾಜರಿಂದ ರಾಜರಿಗೆ ಏರಿಕೆಯಾಗುತ್ತಿರುತ್ತಿತ್ತು. ಇವುಗಳ ಜೊತೆಗೆ ಗಾಣದೆರೆ, ಮಗ್ಗದೆರೆ, ಬಣ್ಣದೆರೆ (ಬಟ್ಟೆಗಳಿಗೆ ಬಣ್ಣ ಹಾಕುವವರ ಮೇಲೆ) ಕುಲುಮೆದೆರೆ,ಕುಂಬಾರದೆರೆ, ಬಳೆಗಾರದೆರೆ ಮೊದಲಾದ ಕುಶಲಕರ್ಮಿಗಳ ಮೇಲೆ ತೆರಿಗೆ. ಅಷ್ಟೇ ಅಲ್ಲದೆ ಮದುವೆ, ಚಪ್ಪರ, ಹಸೆ, ಬಾಸಿಂಗ, ಹುಡುಗಿ ಮೈನೆರೆದರೆ ತೆರಿಗೆ. ಇವುಗಳ ಜೊತೆಗೆ ರಾಜ ದರ್ಶನ

ಪುಟ 4 ಕ್ಕೆ

ಬಜೆಟ್ ಗಾಗಿ ರಾಜ ಮತ್ತು ಪ್ರಜೆಗಳ ನಡುವೆ ಯುದ್ಧ

ಇಂತಹ ಪರಿಸ್ಥಿತಿಯಲ್ಲಿ ಹೊಸ ಸ್ವರೂಪ ಪಡೆದ ರಾಜ ಸಭೆ–ಪಾರ್ಲಿಮೆಂಟ್ ಯಾವುದೇ ತೆರಿಗೆ ಹೆಚ್ಚಿಸಲು, ಹೊಸ ತೆರಿಗೆ ವಿಧಿಸಲು ರಾಜ ಪಾರ್ಲಿಮೆಂಟ್ ನ ಅನುಮತಿ ಪಡೆಯಬೇಕೆಂದು ಒತ್ತಾಯಿಸಿತು. ಇದು ರಾಜರನ್ನು ಸಿಟ್ಟಿಗೆಬ್ಬಿಸಿತು. ಈ ಪಾರ್ಲಿಮೆಂಟನ್ನು ಕೇಳದೇ ತೆರಿಗೆ ವಿಧಿಸಲು, ಸಂಗ್ರಹಿಸಲು ರಾಜರು ಪ್ರಯತ್ನಿಸಿದರು.

ಪಾರ್ಲಿಮೆಂಟ್ ಈ ಕ್ರಮಗಳನ್ನು ವಿರೋಧಿಸಿತು. ಈ ಸಂಘರ್ಷ ತೀವ್ರಗೊಳ್ಳುತ್ತಾ ಯಾವ ಸ್ಥಿತಿ ಮುಟ್ಟಿತೆಂದರೆ 1629ರಲ್ಲಿ ಬ್ರಿಟನ್ನಿನ ಒಂದು ಪಾರ್ಲಿಮೆಂಟ್ ನ ಸಭೆಯಲ್ಲಿ ಹೀಗೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

"ಪಾರ್ಲಿಮೆಂಟ್ ನ ಒಪ್ಪಿಗೆಯಿಲ್ಲದ ತೆರಿಗೆಗಳನ್ನು ಸಂಗ್ರಹಿಸಲು ಯಾರು ರಾಜನಿಗೆ ಸಲಹೆ ನೀಡುತ್ತಾರೋ ಅವರನ್ನು ದೇಶದ ಶತ್ರು ಎಂದು ಪರಿಗಣಿಸಲಾಗುತ್ತದೆ.

ಪಾರ್ಲಿಮೆಂಟ್ ಅನುಮತಿ ನೀಡದ ತೆರಿಗೆಗಳನ್ನು ಯಾರು ನೀಡಬಾರದು. ಈ ನಿರ್ದೇಶನವನ್ನುಧಿಕ್ಕರಿಸಿ ತೆರಿಗೆ ನೀಡಿದರೆ ಅವರನ್ನು ದೇಶದ್ರೋಹಿಗಳೆಂದು ಪರಿಗಣಿಸಲಾಗುತ್ತದೆ".

ರಾಜ ವಿಧಿಸಿದ ತೆರಿಗೆಗಳಿಂದ ಉಂಟಾದ ಬೆಲೆ ಏರಿಕೆ, ಜನರಿಗೆ ಉಂಟಾದ ಸಂಕಟಗಳು ಒಂದೆಡ. ಉಣ್ಣೆ ಹತ್ತಿ ಬಹಳ ಲಾಭಕರವಾದ ಹಿನ್ನೆಲೆಯಲ್ಲಿ ಎಂದೂ ಕೃಷಿ, ಪಶು ಸಂಗೋಪನೆಯತ್ತ ಮುಖ ಮಾಡದ ರಾಜ ಮನೆತನದ ಕುಡಿಗಳು, ನೋಬಲ್ ಗಳು ಮತ್ತಿತರ ರಾಜ ಮನ್ನಣೆ ಪಡೆದವರು ತಮ್ಮ ಗೇಣಿದಾರ ರೈತರ ಕೃಷಿ ಭೂಮಿ, ವಿವಿಧ ಸಮುದಾಯಗಳ ಸಾಮಾನ್ಯ ಆಸ್ತಿಯಾಗಿದ್ದ (ಊರೊಟ್ಟಿನ) ಭೂಮಿಗಳನ್ನು ಆಕ್ರಮಿಸಿ ಬೇಲಿ ಹಾಕಿಕೊಂಡರು. (ಇದಕ್ಕೆ ಬ್ರಿಟಿಷ್ ಇತಿಹಾಸದಲ್ಲಿ ಎನ್ಕ್ಲೋಷರ್ ಪ್ರಕ್ರಿಯೆ ಎಂದು ಕರೆಯಲಾಗಿದೆ) ಇವುಗಳ ಫಲವಾಗಿ ಆಹಾರದ ಉತ್ಪಾದನೆಯ ಕೊರತೆ ಮತ್ತೊಂದೆಡೆಯಲ್ಲಿ ತೀವ್ರ ಹಸಿವಿಗೆ, ಹಸಿವಿನ ದಂಗೆಗಳಿಗೆ ಕಾರಣವಾಗಿದ್ದವು.

ರಾಜನ ಅಖಂಡ ಅಧಿಕಾರಕ್ಕೆ ಮಿತಿ ಹೇರಿ ಪಾರ್ಲಿಮೆಂಟ್

ಜನರ ಈ ವ್ಯಾಪಕ ಅತೃಪ್ತಿ ಪಾರ್ಲಿಮೆಂಟಿನ ನಿರ್ಣಯಗಳಿಗೆ ಹಿನ್ನೆಲೆಯಾಗಿತ್ತು. ಈ ನಿರ್ಣಯಗಳನ್ನು ಕೈಗೊಂಡ ಪಾರ್ಲಿಮೆಂಟನ್ನು ವಿಸರ್ಜಿಸಲೆಂದು ಆಗಿನ ರಾಜ ಒಂದನೆಯ ಚಾರ್ಲ್ಸ್ ಸೈನ್ಯವನ್ನೇ ಕಳಿಸಿದ. ರಾಜನ ಇಚ್ಛೆಯಂತೆ, ಅವನು ಕರೆದಾಗ ಮಾತ್ರ ಸೇರುತ್ತಿದ್ದ ಪಾರ್ಲಿಮೆಂಟ್ ಅನ್ನು ಈ ರಾಜ ಹನ್ನೊಂದು ವರ್ಷಗಳ ದೀರ್ಘ ಕಾಲ ಕರೆಯಲೇ ಇಲ್ಲ. ಆದರೆ ಬೆಲೆ ಏರಿಕೆ, ಜನರ ಅತೃಪ್ತಿ, ಹಸಿವಿನ ದಂಗೆಗಳು ಹೆಚ್ಚುತ್ತಾ ಹೋದವು. ಅದರ

ಪುಟ 4 ಕ್ಕೆ

ಸಂಪಾದಕೀಯ

ಬಂಡವಾಳಗಾರರ ಹಿತಗಳಿಗೆ ರಾಜ್ಯ ಒಡೆಯುವ ಅಪಾಯಕಾರಿ ಮಾತುಗಳು

ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ಅಂದಾಜು ಸುಮಾರು 76 ಕೋಟಿ ರೂ.ಗಳ ಖರ್ಚಿನಲ್ಲಿ ಮಾರ್ಚ್ 12–14 ರವರೆಗೆ ನಡೆದ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ ಅತ್ಯಂತ ಯಶಸ್ವಿಯಾಗಿದೆ ಎಂದು ಸರ್ಕಾರ ಹೇಳಿದೆ. ಇದರಲ್ಲಿ 10.27 ಲಕ್ಷ ಕೋಟಿ ರೂ.ಗಳ ಬಂಡವಾಳ ಹೂಡಿಕೆ ಮಾಡುವ ಒಡಂಬಡಿಕೆಗಳಿಗೆ ಸಹಿ ಮಾಡಲಾಗಿದ್ದು 6 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದೂ ಪ್ರಕಟಿಸಲಾಗಿದೆ. ಇಂತಹ ಪ್ರತಿ ಹೂಡಿಕೆ ಸಮಾವೇಶಗಳು ನಡೆದಾಗಲೆಲ್ಲಾ ಪ್ರತಿ ಸರ್ಕಾರಗಳೂ ಹಿಂದಿನ ಯಾವುದೇ ಸರ್ಕಾರಗಳಿಗಿಂತ ತಮ್ಮದು ಅತ್ಯುತ್ತಮ ಎಂದು ಹೇಳಿಕೊಳ್ಳುವುದು ವಾಡಿಕೆ. ಹಿಂದೆಯಂತೂ ಯಡ್ಯೂರಪ್ಪನವರ ಸರ್ಕಾರ ಹಳೆಯ ಒಡಂಬಡಿಕೆಗಳನ್ನೂ ಸೇರಿಸಿ, ಹೂಡಿಕೆಯ ಇಂಗಿತಗಳನ್ನೂ ಕೂಡಿಸಿ 10 ಲಕ್ಷ ಕೋಟಿ ರೂ.ಗಳ ಬಂಡವಾಳ ಹರಿದು ಬರಲಿದೆ ಎಂದು ಸಾರಿತ್ತು. ವಿವರಗಳು ಲಭ್ಯವಾದಂತೆ ನಿಜ ಬಣ್ಣ ಬಯಲಾಗಿತ್ತು. ಇಂತಹ ಸಮಾವೇಶದಲ್ಲಿ ಕಾರ್ಪೋರೇಟ್ ಕಂಪನಿಗಳು, ಬಂಡವಾಳ ಹೂಡಿಕೆದಾರರು ಪ್ರಕಟಿಸಿದ ಮೊತ್ತ ಎಂದೂ ಪೂರ್ಣ ಹೂಡಿಕೆ ಆಗಲಿಲ್ಲ. ಅದು ಅತ್ಯಲ್ಪ ಎಂಬುದು ಇಲ್ಲಿಯವರೆಗಿನ ಅನುಭವ. ಆದರೆ ಆ ಬಣ್ಣದ ಬೆಲೂನುಗಳ ಹಾರಾಟದ ಭರಾಟೆಯಲ್ಲಿ ರೈತರಿಂದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದನ್ನು ಅಡೆ ತಡೆ ಇಲ್ಲದೇ ನಡೆಸುವುದು ಒಂದು ಅಂಟು ಜಾಡ್ಯವಾಗಿ ಮುಂದುವರಿದಿದೆ. ಇಲ್ಲಿಯವರೆಗೂ ನಡೆದ ಬಂಡವಾಳ ಹೂಡಿಕೆಯ ಒಟ್ಟು ಫಲಾಫಲಗಳನ್ನು ವಿವರವಾಗಿ ಪರಿಶೀಲಿಸಿದರೆ ವಾಸ್ತವ ತಿಳಿದೀತು.

ಈ ಸಮಾವೇಶದಲ್ಲಿ ವರ್ತಮಾನದ ಮತ್ತು ಭವಿಷ್ಯದ ಸ್ಥಿತಿಗತಿ ಮತ್ತು ಅಗತ್ಯಗಳನ್ನು ಗಮನದಲ್ಲಿರಿಸಿ, ವಿಜ್ಞಾನ ತಂತ್ರಜ್ಞಾನದ ಹೊಸ ಆವಿಷ್ಕಾರಗಳು, ಬದಲಾವಣೆಯ ಸಾಧ್ಯತೆಗಳ ಚಿಂತನ ಮಥನ ನಡೆದವು. ಈ ಬೆಳವಣಿಗೆಗಳನ್ನು ಆಧರಿಸಿ ರಾಜಕೀಯ–ಸಾಮಾಜಿಕ ಬದಲಾವಣೆಗಳ ಒತ್ತಾಸೆಯೂ ಮಂಡಿಸಲ್ಪಟ್ಟಿತು. ಇಲ್ಲಿ ಅತ್ಯಂತ ಗಮನ ವಹಿಸಬೇಕಾದ ಸಂಗತಿ ಎಂದರೆ ಹೂಡುವ ಬಂಡವಾಳ ಬೇಡುವ ರಾಜಕೀಯ ಬದಲಾವಣೆಯ ಹೂರಣ ಮಂಡಿತವಾದ ಬಗೆ. ಇಲ್ಲಿನ ವಿಚಾರ ಗೋಷ್ಠಿಯೊಂದರಲ್ಲಿ ಮಾತನಾಡಿದ ಭಾರತ ಸರ್ಕಾರದ ಯೋಜನಾ ಆಯೋಗದ ಉಪಾಧ್ಯಕ್ಷ ರಾಗಿದ್ದ ಮೊಂಟೆಕ್ ಸಿಂಗ್ ಅಹ್ಲುವಾಲಿಯಾ 'ಬಂಡವಾಳ ಹೂಡಿಕೆ ಮತ್ತು ಆರ್ಥಿಕ ಅಭಿವೃದ್ಧಿ ಸಾಧಿಸ ಬೇಕಾದಲ್ಲಿ ಸಣ್ಣ ರಾಜ್ಯಗಳ ರಚನೆ ಅತ್ಯಗತ್ಯ' ಎಂದು ಪ್ರತಿಪಾದಿಸಿದ್ದಾರೆ. ಅಂದರೆ ಈಗಿನ ಭಾಷಾವಾರು ಪ್ರಾಂತ್ಯಗಳನ್ನು ಬಂಡವಾಳಗಾರರ ಅನುಕೂಲಕ್ಕೆ ತಕ್ಕಂತೆ ವಿಭಜಿಸುವುದು ಅಗತ್ಯ ಎಂದಾಯಿತು. ಹಲವು ಪ್ರಾಕೃತಿಕ ಸಂಪನ್ಮೂಲಗಳನ್ನು ಹೊಂದಿರುವ, ತುಲನಾತ್ಮಕವಾಗಿ ಬಲಿಷ್ಠವಾದ ರಾಜಕೀಯ ಸಕಸ್ತಿಯನ್ನು ಹೊಂದಿರುವ ರಾಜ್ಯಗಳನ್ನು ಮುರಿದಿಕ್ಕಿ ಬಂಡವಾಳಗಾರರ ಬಾಯಿಗೆ ಇಡುವುದು ಅದರ ಇಂಗಿತ. ಚಿಕ್ಕ ರಾಜ್ಯಗಳು ಚೊಕ್ಕ ಆಡಳಿತ ಎಂಬಂತಹ ಆಕರ್ಷಕ ಮಾತುಗಳನ್ನು ಆಡುತ್ತಾ, ಪ್ರಾದೇಶಿಕ ಅಸಮತೋಲನ, ಅನಭಿವೃದ್ಧಿಗೆ ಬಂಡವಾಳಶಾಹಿ ಪಥವೇ ಕಾರಣ ಎನ್ನುವುದನ್ನು ಮರೆಮಾಚಿ ವಿಭಜಕ ಚಳುವಳಿಗಳಿಗೆ ಕುಮ್ಮಕ್ಕು ನೀಡುವ, ವಿಭಜಿಸುವ ಕುತಂತ್ರದ ಕ್ರಮಗಳ ಸತ್ಯಾಸತ್ಯತೆ ಈ ಮಾತುಗಳ ಮೂಲಕವೂ ಬಯಲಾಗಿದೆ. 'ಸಣ್ಣ ರಾಜ್ಯಗಳು, ಆಡಳಿತ ಇದ್ದಲ್ಲಿ ಸುಲಭವಾಗಿ ಒಡಂಬಡಿಕೆ, ಪ್ರಾದೇಶಿಕ ಸಂಪನ್ಮೂಲಗಳ ಸದ್ಬಳಕೆ ಸಾಧ್ಯವೆಂದೂ' ಮೊಂಟೆಕ್ ಸಿಂಗ್ ಹೇಳಿದ್ದಾರೆ. ಕಾಂಗ್ರೆಸ್ ನ ಮೊಂಟೆಕ್ ಸಿಂಗ್ ರ ಚಿಂತನೆಗಳಿಗೂ ಬಿಜೆಪಿಯ ಚಿಂತನೆಗಳಿಗೂ ಎಳ್ಳಷ್ಟೂ ವ್ಯತ್ಯಾಸ ಇಲ್ಲ. ಇವು ಎಲ್ಲವನ್ನೂ ಯಾವುದೇ ಅಡೆ ತಡೆ ಇಲ್ಲದೇ ನಗ್ನವಾಗಿ ಲೂಟಿ ಹೊಡೆವ ಅಭಾಧಿತ ಅವಕಾಶಕ್ಕೆ ಹಪಾಹಪಿಸುವ ಪಕ್ಕಾ ಬಂಡವಾಳದಾರರ ವಾದವೇ ಈ ನಾಲಿಗೆಯಿಂದ ಹರಿದಿದೆ.

ಈ ವಕ್ತಾರರೇ ಹೇಳುತ್ತಿದ್ದಂತೆ ಸಣ್ಣ ರಾಜ್ಯಗಳು ರಚನೆಯಾದ ಮೇಲೆ ಅಭಿವೃದ್ಧಿಯಲ್ಲಿ ಅವು ದಾಪುಗಾಲು ಹಾಕಬೇಕಿತ್ತು. ಆದರೆ ಅಂತಹ ರಾಜ್ಯಗಳ ಸ್ಥಿತಿ ಏನಾಗಿದೆ?. ಛತ್ತೀಸಘಢ್, ಝಾರ್ಖಂಡ್, ಉತ್ತರಾಖಾಂಡ್, ಮುಂತಾದ ರಾಜ್ಯಗಳು ಅಭಿವೃದ್ದಿಯಲ್ಲಿ ದಾಪುಗಾಲಿಡಬೇಕಿತ್ತು. ಆದರೆ ತೀವ್ರ ಹಣಕಾಸಿನ ಮುಗ್ಗಟ್ಟು ಎದುರಿಸುತ್ತಾ ಕೇಂದ್ರದ ಮುಂದೆ ನೆರವಿಗಾಗಿ ಮೊರೆ ಇಡುವ ಸ್ಥಿತಿಯನ್ನು ಅನುಭವಿಸುತ್ತಿವೆ ಯಾಕೆ? ಸಣ್ಣ ಸಂಖ್ಯೆಯ ವಿಧಾನ ಸಭೆಗಳನ್ನು ಹೊಂದಿರುವ ಅವು ರಾಜಕೀಯ ಅಸ್ಥಿರತೆಯನ್ನು ಯಾಕೆ ಎದುರಿಸುತ್ತಿವೆ. ಮತ್ತು ಹೀಗೆ ಸರಕಾರಗಳನ್ನು ಬದಲಿಸುವ, ರಚಿಸುವುದರ ಹಿಂದೆ ಯಾರಿದ್ದಾರೆ? ಇದೇ ಕಾರ್ಪೋರೇಟ್ ಕುಳಗಳಲ್ಲವೇ? ಇಂತಹ ಸಣ್ಣ ರಾಜ್ಯಗಳಲ್ಲಿನ ಸರ್ಕಾರಗಳನ್ನು ನಿಯಂತ್ರಿಸಿ ಅಪಾರ ಪಾಕೃತಿಕ ಸಂಪತ್ತನ್ನು ವಶಪಡಿಸಿಕೊಂಡು ಲೂಟಿ ಮಾಡುವಲ್ಲಿ ಕಾರ್ಪೋರೇಟ್ ಕಂಪನಿಗಳಿಗೆ ಮುಕ್ತ ಅವಕಾಶ ಒದಗುತ್ತದೆ. ಇಂತಹುಗಳ ಅಂದಾದುಂಧಿ ದುರಾಸೆಯ ಪರಿಣಾಮಗಳನ್ನು ನೂತನವಾಗಿ ರಚಿತವಾದ ಈ ಎಲ್ಲಾ ಸಣ್ಣ ರಾಜ್ಯಗಳಲ್ಲಿ ಕಂಡಿದ್ದೇವೆ. ತಮ್ಮ ಅಣತಿ ಕೇಳದ ಸರ್ಕಾರಗಳನ್ನು ಹಣ ಬಲ, ಅಧಿಕಾರದ ಬಲಗಳಿಂದ, ಪಕ್ಷಾಂತರಗಳಿಂದ ಉರುಳಿಸುವುದೂ ಸುಲಭವಾಗುತ್ತದೆ. ಪ್ರಾದೇಶಿಕವಾದ ಸಂಪನ್ಮೂಲಗಳ ಸದ್ಭಳಕೆಗೆ ಸಣ್ಣ ರಾಜ್ಯಗಳ ರಚನೆ ಅಗತ್ಯವೆಂಬ ಮೊಂಟೆಕ್ ಸಿಂಗ್ ರ ಪ್ರತಿಪಾದನೆ ಈ ಹಿತಾಸಕ್ತಿಯಲ್ಲಿರುವುದಾಗಿದೆ. ಇಂತಹ ವಾದವನ್ನು ಅಂಗೀಕರಿಸಿದರೆ, ಅಥವಾ ಅದನ್ನು ಗುರಿಯಾಗಿರಿಸಿ ಕಾರ್ಯಾಚರಣೆಗೆ ಇಳಿದರೆ ಕರ್ನಾಟಕದಂತಹ ರಾಜ್ಯದ ಸ್ಥಿತಿ ಏನಾದೀತು? ಪ್ರಾದೇಶಿಕ ಸಂಪನ್ಮೂಲಗಳ ಸಾಮರ್ಥ್ಯವನ್ನು ಗಣಿಸಿದರೆ ಎಷ್ಟು ರಾಜ್ಯಗಳು ರಚನೆ ಆಗಬೇಕಾದೀತು? ಬಂಡವಾಳಗಾರರ ವಕ್ತಾರರಾಗಿರುವ ಅಹ್ಲುವಾಲಿಯಾ ರವರು ಛಿದ್ರಕಾರಿ ಬೆಳವಣಿಗೆಗಳಿಗೆ ಬೀಜ ಹಾಕಿದ್ದಾರೆ. ಇದು ಅತ್ಯಂತ ಅಪಾಯಕಾರಿಯಾಗಿದೆ.

ಭಾರತ ಸ್ವಾತಂತ್ರ ಪಡೆದಾಗ ಭಾಷಾವಾರು ಪ್ರಾಂತ್ಯಗಳ ರಚನೆಗೆ ಬಂಡವಾಳಗಾರರು ಅವರ ಪ್ರತಿನಿಧಿಗಳು ಪರವಾಗಿರಲಿಲ್ಲ. ದೇಶದ ವೈವಿಧ್ಯತೆ, ವೈಶಿಷ್ಟ್ಯಗಳನ್ನು ಕಡೆಗಣಿಸಿ ಏಕಸ್ವಾಮ್ಯದ ಹಿತಾಸಕ್ತಿಗೆ ಒತ್ತು ನೀಡಿದ್ದರು. ಆದರೆ ಜನತೆ ಇದನ್ನು ಒಪ್ಪದೇ ನೈಜ ಪ್ರಜಾಪ್ರಭುತ್ವೀಯ ಆಶಯಗಳನ್ನು ತ್ಯಾಗ ಬಲಿದಾನಗಳಿಂದ ಎತ್ತಿ ಹಿಡಿದರು. ಹೀಗಾಗಿ ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಅಸ್ತಿತ್ವ, ಸಂವಿಧಾನಾತ್ಮಕ ಅಧಿಕಾರದ ವ್ಯವಸ್ಥೆ ರೂಪುಗೊಂಡಿತು. ಭಾರತದ ಬೆಳವಣಿಗೆಗೆ ಇದು ಅಡಿಪಾಯವೂ ಹೌದು. ಆದರೀಗ ದೇಶೀಯ, ವಿದೇಶೀಯ ಬಂಡವಾಳಗಾರರ ಬಯಕೆಗಳಿಗೆ ನಮ್ಮ ರಾಷ್ಟ್ರೀಯತೆ, ಶಕ್ತಿಯುತ ಪ್ರಜಾಪ್ರಭುತ್ವದ ತಳಹದಿ, ಪ್ರಕ್ರಿಯೆಗಳನ್ನು ಬುಡಮೇಲುಗೊಳಿಸಲು ಪ್ರಯತ್ನಿಸಲಾಗುತ್ತದೆ. ಇಂತಹ ಅಪಾಯಕಾರಿ ವಾದಗಳನ್ನು ಹಿಮ್ಮೆಟ್ಟಿಸಬೇಕು.

ವಲಸೆ, ಹೊರದಬ್ಬುವಿಕೆ ಮತ್ತು ಮೋದಿ ಸರಕಾರ

ಈ ವಾರ

ಎಸ್.ವೈ.ಗುರುಶಾಂತ್

ಅಮೇರಿಕಾದಲ್ಲಿನ ಅಕ್ರಮ ವಲಸಿಗರೆಂದು ಹೊರದೂಡಲ್ಪಟ್ಟ ಭಾರತೀಯರ ಮೂರನೆಯ ತಂಡ ಪಂಜಾಬ್ ನ ಅಮೃತಸರವನ್ನು ತಲುಪಿದೆ. ಅಮೇರಿಕಾದ ಮಿಲಿಟರಿ ವಿಮಾನದ ಮೂಲಕ ಬಂದಿಳಿದವರ ದಾರುಣ ಅನುಭವಗಳು ಮನಕಲಕುವಂತಿವೆ. ಇದನ್ನು ಯಾವ ದೇಶ ಮಾಡಿದರೂ ಒಪ್ಪ ತಕ್ಕದ್ದಲ್ಲ. ಅಮೇರಿಕಾ 'ದೊಡ್ಡಣ್ಣ' ನಡೆದುಕೊಂಡ ರೀತಿ ನೀತಿ, ವಿಧಾನಗಳು ಮಾನವನ ಹಾಗೂ ಸಾರ್ವಭೌಮ ದೇಶದ ಘನತೆಗೆ ಕುಂದುಂಟು ಮಾಡುವ ಅವಮಾನಕರ ವರ್ತನೆಗಳಾಗಿವೆ.

ಬಾಯಿ ಮುಚ್ಚಿದ ಸರ್ಕಾರ

ಅನಧಿಕೃತವಾಗಿ, ವಾಸಿಸಲು (ಕೆಲಸ ಮಾಡಲು ಪರವಾನಗಿ ಕಡ್ಡಾಯ ಇರಬೇಕು) ವೀಸಾ ಪತ್ರಗಳಿಲ್ಲದ 'ಅಕ್ರಮ' ಎಂದು ಗುರುತಿಸಲ್ಪಟ್ಟ ವಲಸಿಗರಲ್ಲಿ ಅಮೇರಿಕಾದ್ಯಂತ 2022 ರ ವರದಿಯಂತೆ ಸುಮಾರು 11 ಮಿಲಿಯನ್ (1.1 ಕೋಟಿ) ಇದ್ದು ಭಾರತೀಯ ಪ್ರಜೆಗಳು ಸುಮಾರು 18,000 ಎಂದು ಆಡಳಿತ ಘೋಷಿಸಿದೆ. 2019–22 ರ ನಡುವೆ ಮೆಕ್ಸಿಕೋ ಅಲ್ಲದ ಹಲವು ದೇಶಗಳಿಂದಲೂ ಜನ ಬಂದಿದ್ದಾರೆ. ಇರುವ ಭಾರತೀಯರಲ್ಲಿ ಈ ವರ್ಷ ಫೆಬ್ರವರಿ 5 ರಂದು 104 ಜನ, ಫೆ.15 ರಂದು 116 ಜನರನ್ನು, ಫೆ.16 ರಂದು 112 ಜನರನ್ನು (ದ ಹಿಂದೂ ವರದಿ) ಮಿಲಿಟರಿ ವಿಮಾನದ ಮೂಲಕ ಬಲವಂತವಾಗಿ ತಂದಿಳಿಸಲಾಗಿದೆ. ಹೀಗೆ ಬಂದವರಲ್ಲಿ ಗುಜರಾತ್, ಹರಿಯಾಣ, ಪಂಜಾಬ್, ಉತ್ತರ ಪ್ರದೇಶ, ಹಿಮಾಚಲ, ಉತ್ತರಾಖಂಡ್ ರಾಜ್ಯಗಳಿಂದ ಹೆಚ್ಚು. ಬಂದವರಿಗೆ ಕೈ ಕೋಳ ಹಾಗೂ ಕಾಲಿಗೆ ಸರಪಳಿ ಕಟ್ಟಲಾಗಿತ್ತು ಎಂದು ಮೊದಲ ತಂಡ ನೀಡಿದ ಮಾಹಿತಿಗಳ ವರದಿ ಇದೆ. ತನ್ನ ಪ್ರಜೆಯ ಹಾಗೂ ದೇಶದ ಘನತೆಗೆ ಅಮೇರಿಕಾದ ತಕ್ಕುದಲ್ಲದ ನಡತೆಯ ಬಗ್ಗೆ ತೀವ್ರ ಆಕ್ರೋಶ ವ್ಯಕ್ತ ಪಡಿಸಬೇಕಿತ್ತು. ಹೋಗಲಿ ಆಕ್ಷೇಪವನ್ನು ಸಹ ಭಾರತ ಸರ್ಕಾರ ವ್ಯಕ್ತ ಪಡಿಸಲಿಲ್ಲ, ಬದಲಾಗಿ 'ಅದು ಅವರ ಕಾನೂನಿನಂತೆ ನಡೆದುಕೊಂಡಿದ್ದಾರೆ' ಎಂದು ಸಮರ್ಥನೆ ಧಾಟಿಯಲ್ಲಿ ವಿದೇಶಾಂಗ ಸಚಿವ ಜೈಶಂಕರ್ ಮಾತನಾಡಿದ್ದು ಶೋಚನೀಯ.

ಘನತೆಗೆ ಕುಂದು

ಟ್ರಂಪ್ ಅಧಿಕಾರಕ್ಕೆ ಬಂದ ನಂತರ 487 ಭಾರತೀಯರನ್ನು ಸ್ಥಳಾಂತರ ಮಾಡಲಾಗಿದೆ ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಮ ಮಿಶ್ರಿ ಹೇಳಿದ್ದಾರೆ. 2023–ಸೆಪ್ಟಂಬರ್ 30, 2024 ರ ಅವಧಿಯಲ್ಲಿ ಸುಮಾರು 1100 ಜನರನ್ನು ಕಳಿಸಲಾಗಿದೆ ಎಂಬ ವರದಿಗಳಿವೆ. ಒಟ್ಟು 145 ದೇಶಗಳಿಂದ 1,60,000 ವ್ಯಕ್ತಿಗಳನ್ನು 495 ವಿಮಾನಗಳ ಮೂಲಕ ಕಳಿಸಲಾಗಿದೆ. ಈಗ ಕಳಿಸಲಾದ ಭಾರತೀಯರು 312.

ಹೀಗೆ ಬಂದಿಳಿದವರು ನೀಡಿದ ವಿವರಗಳು ಬೆಚ್ಚಿ ಬೀಳಿಸುತ್ತವೆ. ಮೊದಲನೆಯದಾಗಿ, ಇವರಿಗೆ ಕೈಕೋಳ ಹಾಕಿ, ಕಾಲಿಗೆ ಸರಪಳಿ ಬಿಗಿದು ವಿಮಾನ ಹತ್ತಿಸಲಾಗಿತ್ತು ಎನ್ನುವುದು ಒಂದಾದರೆ ಅಮೃತಸರದಲ್ಲಿ ಇಳಿಸುವಾಗಲೇ ಅವನ್ನು ತೆಗೆದಿರುವುದು ಎಂದು ಅಲ್ಲಿಂದ ಬಂದಿರುವರು ಹೇಳಿದ್ದಾರೆ. ಅಮೇರಿಕಾದಲ್ಲಿನ ಶಿಬಿರದಲ್ಲಿ ಇರಿಸಿದಾಗ ಹಲವು ತಾಸುಗಳ ಕಾಲ ಕೂಡಿಟ್ಟದ್ದಲ್ಲದೇ ಸರಿಯಾಗಿ ಊಟವನ್ನು ನೀಡಿಲ್ಲ ಎನ್ನುವುದು ಮತ್ತೊಂದು. ಅಲ್ಲಿ ಕೊಟ್ಟಿದ್ದು ಉಪಹಾರವಂತೆ. ಆಹಾರವಾದಲ್ಲೂ ದನದ ಮಾಂಸವನ್ನು ನೀಡಲಾಗಿತ್ತು ಎನ್ನಲಾಗಿದೆ. ಅಮೇರಿಕಾದಲ್ಲಿ ಮಾಂಸಾಹಾರ ಎಂದರೆ ಅದು ಬಹುತೇಕ ಕೋಳಿ, ಮೀನು ಇವಕ್ಕಿಂತಲೂ ದನದ ಮಾಂಸವೇ ಪ್ರಮುಖ. (ದನದ ಮಾಂಸವನ್ನು ಭಾರತದಿಂದಲೂ ಆಮದು ಮಾಡಿಕೊಳ್ಳುತ್ತಾರೆ. ಬಿಜೆಪಿ ನಾಯಕರಿಗೆ ಸೇರಿದ ಅಲ್ ಕಬೀರಾ ವಿದೇಶಗಳ ಅತೀ ಹೆಚ್ಚು ರಫ್ತುದಾರನಂತೆ!) ಇರಲಿ, ಅಧಿಕೃತ ಪರವಾನಗಿ ಇಲ್ಲದ ದುಡಿಮೆಗಾರರಾದರೂ ಹೀಗೆ ನಡೆಸಿಕೊಳ್ಳಬೇಕು, ಮಾನವನ ಘನತೆಗೆ ಕುಂದುಂಟು ಮಾಡುವಂತೆ ನಡೆದುಕೊಳ್ಳಬೇಕು ಎಂದು ಯಾವ ಅಂತರ್ ರಾಷ್ಟ್ರೀಯ ಒಡಂಬಡಿಕೆಗಳಿವೆ?

ವಲಸೆ– ಉದ್ಯಮ

ಅಮೇರಿಕಾದಲ್ಲಿ ವಲಸೆ ಎನ್ನುವುದು ಹೊಸ ವಿಷಯವೇನಲ್ಲ. ಅದನ್ನು ವಲಸಿಗರ ದೇಶವೆಂದೇ ಕರೆಯಲಾಗುತ್ತದೆ. ಮೂಲತಃ ಅಲ್ಲಿಯ ಮೂಲ ನಿವಾಸಿ ಆದಿವಾಸಿ ಸಮುದಾಯಗಳನ್ನು ನಿರ್ದಾಕ್ಷಿಣ್ಯವಾಗಿ, ಅಮಾನುಷವಾಗಿ ಕೊಂದು ಅವರ ನೆಲ, ಜಲ, ಅರಣ್ಯ ಎಲ್ಲಾ ಬಗೆಯ ಸಂಪತ್ತನ್ನು ಅಕ್ರಮವಾಗಿ ವಶಪಡಿಸಿಕೊಂಡು ಮಿಲಿಟರಿ ಪ್ರಭುತ್ವದ ದಮನಕಾರಿ ಶಕ್ತಿಯಿಂದ ಕಾರ್ಪೋರೇಟ್‌ಗಳು ಆಳುತ್ತಿವೆ. ಆಮೇರಿಕಾ ಸುತ್ತಮುತ್ತಲಿನ ಅನೇಕ ದೇಶಗಳನ್ನು ಅತಿಕ್ರಮಿಸಿ ದೇಶವನ್ನು ವಿಸ್ತರಿಸಿಕೊಂಡಿದೆ. ಈಗಲೂ ಟ್ರಂಪ್ ಕೆನಡಾವನ್ನು ಒಳಗೊಂಡು ಮೆಕ್ಸಿಕೋ, ಕ್ಯೂಬಾ, ಮುಂ. ಇನ್ನೂ ಕೆಲವು ದೇಶಗಳನ್ನು ಅಮೇರಿಕಾಕ್ಕೆ ಸೇರಿಸಿಕೊಳ್ಳುವ ವಿಸ್ತರಣಾಕಾಂಕ್ಷೆಯನ್ನು ಪ್ರಕಟಿಸಿದ್ದಾರೆ. ಹಾಗೆ ನೋಡಿದರೆ ಅಮೇರಿಕಾ ಅತೀ ದೊಡ್ಡ ಪ್ರಮಾಣದಲ್ಲಿ ವಲಸಿಗರನ್ನು ಹೊಂದಿದೆ, ಅದರಿಂದ ಸಂಪದದ್ಭರಿತವಾಗಿಯೂ ಬೆಳೆದಿದೆ. ಭಾರತ, ಮೆಕ್ಸಿಕೋ, ನಿಕರಾಗುವಾ, ಹೊಂಡುರಾಸ್ ದೇಶಗಳ ವಲಸಿಗ ಕಾರ್ಮಿಕರು ಅತ್ಯಧಿಕ. ಈಗ ಅಂದಾಜಿಸಿದ 11 ಮಿಲಿಯನ್ ವಲಸಿಗರಲ್ಲಿ ಅತಿಕ್ರಮಣ ಅಥವಾ ಅಕ್ರಮ ವಲಸಿಗರು ಅತ್ಯಧಿಕ ಸಂಖ್ಯೆಯಲ್ಲಿ ಮೆಕ್ಸಿಕೊ ದೇಶದಿಂದ ಬಂದವರು. ಇಂತಹ ವಲಸಿಗರಲ್ಲಿ ಹಲವು ಬಗೆಗಳಿವೆ. ವಿಶೇಷವಾಗಿ, ಕೃಷಿ ಕೆಲಸಗಳಿಗಾಗಿ ಸೀಜನ್ ನಲ್ಲಿ ಮೆಕ್ಸಿಕೋದಿಂದ ಬಂದು ಕೆಲಸ ಮುಗಿದ ಮೇಲೆ ವಾಪಾಸಾಗುವುದು ಒಂದು ವಿಧಾನ. ಅಲ್ಲದೇ ಇಂತಹವರು ಕೈಗಾರಿಕೆ, ಕೃಷಿ, ಇತರೆ ಸೇವಾ ವಲಯದಲ್ಲಿಯೂ ದುಡಿಯುತ್ತಾರೆ. ಇಂತಹವರಿಗೆ ಅತ್ಯಂತ ಕಡಿಮೆ ಕೂಲಿ ನೀಡಲಾಗುತ್ತದೆ. ಮೇಲಾಗಿ ಇವರಿಗೆ ಖಾಯಂ ಕೆಲಸಗಾರರಿಗೆ ಸಿಗುವಂತಹ ಆರೋಗ್ಯ, ಸಾಮಾಜಿಕ ಭದ್ರತೆ, ಮುಂತಾದ ಯಾವುದೇ ಸೌಲಭ್ಯಗಳನ್ನು ಕೊಡುವ ಹೊಣೆಗಾರಿಕೆಯೂ ಇಲ್ಲ. ಇದು ಶ್ರಮಿಕರನ್ನು ಮನ ಬಂದಂತೆ ದುಡಿಸಿಕೊಳ್ಳುವ, ಅತ್ಯಂತ ಲಾಭದಾಯಕ ವ್ಯವಹಾರ. ಆಯಾ ದೇಶಗಳಲ್ಲಿನ ದುಡಿಮೆ ಅವಕಾಶಗಳಿಲ್ಲದ ದುಸ್ಥಿತಿಯಿಂದಾಗಿಯೋ ಅಥವಾ ಹೆಚ್ಚಿನ ಕೂಲಿ ಸಿಗುವ ಆಸೆಯಿಂದಲೋ ಅಲ್ಲಿಗೆ ಬರುತ್ತಾರೆ. ಯಾವುದೇ ಹೊಣೆಗಾರಿಕೆ, ಸಾಮಾಜಿಕ ಭದ್ರತೆ, ಸೌಲಭ್ಯಗಳ ನೀಡಿಕೆಯ ಬದ್ಧತೆ ದುಡಿಸಿ ಕೊಳ್ಳುವವರಿಗೆ ಇಲ್ಲ. ಸರಕಾರಕ್ಕೂ ಇಲ್ಲ. ಮೇಲಾಗಿ ಭಯದಲ್ಲೇ ಈ ಶ್ರಮಜೀವಿಗಳು ಮೌನವಿದ್ದು ದುಡಿಯುತ್ತಾರೆ.

ದುಡಿಯುವವರ ಇಂತಹ ನುಸುಳು ಕೋರುವಿಕೆ ಅಮೇರಿಕಾದ ಸರಕಾರಕ್ಕೆ ತಿಳಿಯದ್ದೇನಲ್ಲ. ಇದು ಹೆಚ್ಚು ದುಡಿಸಿ ಕೊಳ್ಳುವ, ಕಡಿಮೆ ಕೂಲಿ ಕೊಡುವ ಲಾಭದಾಯಕ ಉದ್ಯಮ ಆಗಿರುವುದರಿಂದ ಇದಕ್ಕೆ ಮೌನ ಸಮ್ಮತಿ ಇದ್ದೇ ಇದೆ. ಇಲ್ಲವಾದರೆ ಒಂದು 'ಗುಬ್ಬಿಯೂ' ಕೂಡ ಅಮೇರಿಕಾ ಭದ್ರತಾ

ಪುಟ 5 ಕ್ಕೆ

ಬಜೆಟ್ ಗಾಗಿ ರಾಜ ಮತ್ತು ಪ್ರಜೆಗಳ ನಡುವೆ.... ಪುಟ 2 ರಿಂದ

ಜೊತೆಗೆ ಮೇಲೆ ಹೇಳಿದ ನಿರ್ಣಯದಂತೆ ವರ್ಷದಿಂದ ವರ್ಷಕ್ಕೆ ನಗರ ಪಟ್ಟಣಗಳಿಂದ ತೆರಿಗೆ ನಿರಾಕರಣೆ ಹೆಚ್ಚಾಯಿತು. ರಾಜ ಪ್ರಭುತ್ವದ ವೆಚ್ಚ ಭರಿಸಲಾಗಲಿಲ್ಲ. ಜೊತೆಗೆ ಜನರ ಅತೃಪ್ತಿ ಐರ್ಲೆಂಡ್ ಹಾಗೂ ಸ್ಕಾಟ್ಲೆಂಡ್ಗಳಲ್ಲಿ ವ್ಯಾಪಕ ಜನ ಬೆಂಬಲದ ದಂಗೆಗಳು ಎದ್ದವು. ಅವುಗಳನ್ನು ಹತ್ತಿಕ್ಕಲು ದೊಡ್ಡ ಪ್ರಮಾಣದಲ್ಲಿ ಹಣ ಬೇಕಲ್ಲ! ಆದ್ದರಿಂದ ಅನಿವಾರ್ಯವಾಗಿ 1940 ರ ನವಂಬರ್ ವೇಳೆಗೆ ಪಾರ್ಲಿಮೆಂಟನ್ನು ಕರೆಯಲೇಬೇಕಾಯಿತು.

ರಾಜ ಪ್ರಭುತ್ವದ ವೆಚ್ಚವನ್ನು ಭರಿಸಲು ಕರೆಯಲಾಗಿದ್ದ ಈ ಪಾರ್ಲಿಮೆಂಟ್ ಅಂಗೀಕರಿಸಿದ ಮೊದಲ ನಿರ್ಣಯಗಳಲ್ಲಿ ಪಾರ್ಲಿಮೆಂಟ್ ನಿಗದಿತವಾಗಿ ಸೇರಬೇಕು, ರಾಜನ ಅನುಮತಿ ಅಗತ್ಯವಿಲ್ಲ. ರಾಜನಿಗೆ ಪಾರ್ಲಿಮೆಂಟನ್ನು ಅದರ ಒಪ್ಪಿಗೆ ಇಲ್ಲದೆ ವಿಸರ್ಜಿಸುವ ಅಧಿಕಾರವಿಲ್ಲ ಎಂದು. ಇದು ರಾಜನ ಅಖಂಡ ಅಧಿಕಾರಕ್ಕೆ ಮಿತಿ ಹೇರಿ ಪಾರ್ಲಿಮೆಂಟಿನ ಅಧಿಕಾರವನ್ನು ವಿಸ್ತರಿಸಿತು.

ಈ ಪಾರ್ಲಿಮೆಂಟ್ ತನ್ನ ಒಪ್ಪಿಗೆಯಿಲ್ಲದೆ ರಾಜ ಹೇರಿದ್ದ ತೆರಿಗೆಗಳನ್ನೆಲ್ಲ ರದ್ದುಗೊಳಿಸಿತು. ಯಾವುದೇ ತೆರಿಗೆಗೆ ಪಾರ್ಲಿಮೆಂಟ್ ನೀಡುವ ಅನುಮತಿ ಕೇವಲ ಎರಡು ತಿಂಗಳಿಗೆ ಮಾತ್ರ ಸೀಮಿತ, ನಂತರ ಅವುಗಳನ್ನು ನವೀಕರಿಸಿಕೊಳ್ಳಬೇಕು ಎಂದು ವಿಧಿಸಿತು.


ಒಂದೆಡೆ ತೆರಿಗೆ ನೀಡಲು ನಿರಾಕರಿಸಿದ ನಗರಗಳ ವ್ಯಾಪಾರಿಗಳು, ಕುಶಲಕರ್ಮಿಗಳು ರಾಜ ಚಾರ್ಲ್ಸ್ ತಾನು ಸ್ವಲ್ಪವೂ ಒಪ್ಪದ ಈ ನಿರ್ಣಯಗಳಿಗೆ ಅಂಗೀಕಾರ ನೀಡುವುದು ಅನಿವಾರ್ಯವೆನ್ನುವಂತೆ ಮಾಡಿದವು. ಆದರೆ ಅದು ಒಂದು ಅಂಶ ಮಾತ್ರ. ರಾಜ ಒಪ್ಪಿಗೆ ನೀಡಲೇಬೇಕಾದ ಒತ್ತಾಯ ಹೇರಿದ, ಇದಕ್ಕಿಂತ ಮತ್ತಷ್ಟು ಹೆಚ್ಚು ಮುಖ್ಯವಾದ ಹೊಸ ಬೆಳವಣಿಗೆ ಸಂಭವಿಸಿತು. ರಾಜನ ಹುಚ್ಚು ತೆರಿಗೆಗಳಿಂದ ಬೇಸತ್ತಿದ್ದ ಲಂಡನ್ನಿನ ಸಾಮಾನ್ಯ ಜನ ರಾಜ ಅನುಮತಿ ನೀಡಲು ತಡ ಮಾಡಿದಾಗೆಲ್ಲ ಪ್ರತಿದಿನವೂ ಸಾವಿರ ಸಾವಿರ ಸಂಖ್ಯೆಯಲ್ಲಿ ಶಸ್ತ್ರಸನ್ನದ್ಧರಾಗಿ ಅರಮನೆಯ ಮುಂದೆ ನೆರೆಯತೊಡಗಿದರು.

ತೆರಿಗೆಗಳು, ಸರ್ಕಾರದ ವೆಚ್ಚದ ಪ್ರಶ್ನೆಯಿಂದ ಆರಂಭವಾದ ಈ ಸಂಘರ್ಷಕ್ಕೆ ಧಾರ್ಮಿಕ ಮತ್ತು ಸೈನ್ಯ ನಿಯಂತ್ರಣದ ಮೊದಲಾದ ಮತ್ತಷ್ಟು ಪ್ರಶ್ನೆಗಳೂ ಸೇರಿ ಕಂದರ ಹೆಚ್ಚಿತು. ರಾಜ ಪಾರ್ಲಿಮೆಂಟಿನ ನಾಯಕರನ್ನು ಬಂಧಿಸಬೇಕೆಂದು ಸೈನ್ಯ ಸಮೇತ ಪಾರ್ಲಿಮೆಂಟ್ ಸಭೆಯ ಮುಂದೆ ಹಾಜರಾದರೆ ಅವರಿಗೆ ಲಂಡನ್ ನ ಮೇಯರ್ ಮತ್ತು ಸಾಮಾನ್ಯ ಜನರು ರಕ್ಷಣೆ ನೀಡಿದರು.

ಕೊನೆಗೆ ರಾಜನ, ರಾಜ ಭಕ್ತರ ಸೈನ್ಯ ಮತ್ತು ಪಾರ್ಲಿಮೆಂಟ್ ಪರವಾದ ಜನತೆಯ ಸೈನ್ಯಗಳ ನಡುವೆ 1642ರಲ್ಲಿ ಅಂತರ್ ಯುದ್ಧವೇ ಆರಂಭವಾಯಿತು. ಹಲವು ಹಂತಗಳಲ್ಲಿ ನಡೆದ ಈ ಯುದ್ಧದಲ್ಲಿ ರೈತರು, ಕುಶಲಕರ್ಮಿಗಳಿಂದ ಕೂಡಿದ ಪಾರ್ಲಿಮೆಂಟ್ ಪರವಾದ ಸೈನ್ಯ ವಿಜಯಿಯಾಯಿತು. ಒಂದನೆಯ ಚಾರ್ಲ್ಸ್ ನಿಗೆ ಪಾರ್ಲಿಮೆಂಟ್ ವಿಚಾರಣೆ ನಡೆಸಿ ವಧೆಯ ಶಿಕ್ಷೆ ನೀಡಿತು. 1649ರಲ್ಲಿ ರಾಜನನ್ನು ವಧಿಸಲಾಯಿತು.

ಮುಂದೆ ಎರಡನೆಯ ಚಾರ್ಲ್ಸ್ ನನ್ನು ರಾಜನನ್ನಾಗಿ ಮಾಡಿದ್ದು, ನಂತರ ಅವನ ಉತ್ತರಾಧಿಕಾರಿ ಜೇಮ್ಸ್ ನನ್ನು ಓಡಿಸಿ 1688ರಲ್ಲಿ ಡಚ್ ದೇಶದ ರಾಜಮನೆತನದ ಮೂರನೇ ವಿಲಿಯಂನನ್ನು ರಾಜನನ್ನಾಗಿ ಮಾಡಿದ್ದು ತೆರಿಗೆ ವಿಧಿಸುವ, ಅದರ ವೆಚ್ಚವನ್ನು ನಿರ್ಧರಿಸುವ ಹಕ್ಕಿಗಾಗಿ ನಡೆದ ಸಂಘರ್ಷದ ವಿವಿಧ ಹಂತಗಳು.

ಮೂರನೆಯ ವಿಲಿಯಂನನ್ನು ರಾಜನನ್ನಾಗಿ ಒಪ್ಪಿಕೊಳ್ಳುವ ಮೊದಲು ಪಾರ್ಲಿಮೆಂಟ್ ಅವನಿಗೆ ಹಕ್ಕುಗಳ ಮಸೂದೆಯೊಂದನ್ನು ನೀಡಿತು. ಅವನು ಮತ್ತು ಅವನ ಹೆಂಡತಿ ಅದಕ್ಕೆ ಒಪ್ಪಿದ ನಂತರ ಅವನನ್ನು ರಾಜನನ್ನಾಗಿ ಘೋಷಿಸಿ ಪಟ್ಟಾಭಿಷೇಕ ಮಾಡಲಾಯಿತು. ಹಿಂದಿನ ರಾಜರುಗಳೆಲ್ಲಾ, ತಮ್ಮ ಹಿಂದಿನ ರಾಜರು ಹಾಕಿಕೊಟ್ಟ ಪರಂಪರೆಯಂತೆ ರಾಜ್ಯಭಾರ ಮಾಡುತ್ತೇನೆ ಎಂಬ ಪ್ರತಿಜ್ಞೆ ಮಾಡುತ್ತಿದ್ದರು. ಅದಕ್ಕೆ ಬದಲಾಗಿ ಪಾರ್ಲಿಮೆಂಟ್



ಅಂಗೀಕರಿಸಿದ್ದ 1968ರ ಪಟ್ಟಾಭಿಷೇಕ ಕಾಯಿದೆಯ ಪ್ರಕಾರ, ಪಾರ್ಲಿಮೆಂಟ್ ಅಂಗೀಕರಿಸಿದ ಕಾನೂನುಗಳ ಪ್ರಕಾರ ರಾಜ್ಯಭಾರ ಮಾಡುತ್ತೇನೆಂದು ಈ ರಾಜನಿಂದ ಪ್ರಮಾಣ ವಚನ ಮಾಡಿಸಿದರು. ಮೇಲೆ ಹೇಳಿದಂತೆ, ಹಕ್ಕುಗಳ ಮಸೂದೆಗೆ ರಾಜನಾಗುವ ಮೊದಲೇ ಹೊಸ ರಾಜ ಒಪ್ಪಿಗೆಯನ್ನು ಪಡೆಯಲಾಗಿತ್ತು.

ವಾಲ್ಟೇರ್ ಮತ್ತು ಇತರ ಫ್ರೆಂಚ್ ಕ್ರಾಂತಿಯ ತತ್ವಶಾಸ್ತ್ರಜ್ಞರ ಮೇಲೆ, ಅಮೆರಿಕದ ಸ್ವಾತಂತ್ರ್ಯ ಘೋಷಣೆಯ ಮೇಲೆ ಬಹಳವಾಗಿ ಪ್ರಭಾವ ಬೀರಿದ ಬ್ರಿಟಿಷ್ ಭೌತವಾದಿ ತತ್ವಶಾಸ್ತ್ರಜ್ಞ ಲಾಕ್ ನ ವಿಚಾರಗಳು ಈ ಮಸೂದೆಯ ಅಡಿಪಾಯವಾಗಿದ್ದವು.

ಈ ಹಕ್ಕುಗಳ ಮಸೂದೆಯ ಒಂದು ಮುಖ್ಯ ಭಾಗ

1) ಪಾರ್ಲಿಮೆಂಟ್ ನ ಒಪ್ಪಿಗೆಯಿಲ್ಲದೇ ಯಾವ ತೆರಿಗೆಯನ್ನೂ ಸಂಗ್ರಹಿಸುವಂತಿಲ್ಲ.
2) ಸಂಗ್ರಹಿಸಿದ ತೆರಿಗೆಯನ್ನು ಯಾವುದಕ್ಕೆ, ಹೇಗೆ ವೆಚ್ಚ ಮಾಡಬೇಕು ಎಂಬುದನ್ನು ಪಾರ್ಲಿಮೆಂಟ್ ನಿರ್ಧರಿಸುತ್ತದೆ.
3) ತೆರಿಗೆ ಸಂಗ್ರಹ ಮತ್ತು ವೆಚ್ಚವನ್ನು ವಾರ್ಷಿಕವಾಗಿ ರೂಪಿಸಬೇಕು.
4) ಇವುಗಳಿಗೆ ಪಾರ್ಲಿಮೆಂಟ್ ಅಂಗೀಕಾರ ನೀಡಲು ಮತ್ತು ಉಸ್ತುವಾರಿ ಮಾಡಲು ಅನುಕೂಲವಾಗುವಂತೆ ವರ್ಷಕ್ಕೊಮ್ಮೆ ಪಾರ್ಲಿಮೆಂಟ್ ಮುಂದೆ ಮಂಡಿಸಿ ಅಂಗೀಕಾರ ಪಡೆಯಬೇಕು.

ಹೀಗೆ 1689ರಲ್ಲಿ ಬ್ರಿಟನ್ನಲ್ಲಿ ವಿಶ್ವದ ಮೊದಲ ಬಜೆಟ್ ಮಂಡನೆಯಾಯಿತು. ನಂತರ ಎಲ್ಲ ದೇಶಗಳಲ್ಲಿ ಇದೇ ಪದ್ಧತಿಯಾಯಿತು.

ಹೀಗೆ ಪ್ರಜಾಪ್ರಭುತ್ವಕ್ಕಾಗಿ ನಡೆದ ಸಂಘರ್ಷ, ನಿರಂಕುಶ ರಾಜ ಪ್ರಭುತ್ವದ ಕೊನೆಗಾಣುವಿಕೆ ಸರ್ಕಾರದ ಹಣ ಸಂಗ್ರಹ ಮತ್ತು ನಿಯಂತ್ರಣದಿಂದ ಆರಂಭವಾಯಿತು. ಜನರಿಂದ ಆಯ್ಕೆಯಾದ ಪ್ರತಿನಿಧಿಗಳ ನಿಯಂತ್ರಣದಲ್ಲಿ ಸರ್ಕಾರದ ಆರ್ಥಿಕ ನೀತಿಗಳು, ಬಜೆಟ್ ಎಂಬ ಸಾಧನದ ನಿರೂಪಣೆಯಲ್ಲಿ ವಿಜಯ ಸಾಧಿಸಿತು.

ರಾಜಪ್ರಭುತ್ವದ ವಿರುದ್ಧ ಸಂಘರ್ಷದಲ್ಲಿ..... ಪುಟ 2 ರಿಂದ

ಕೊಟ್ಟಾಗ, ರಾಜ, ರಾಣಿ ಪ್ರವಾಸ ಬಂದಾಗ, ದರ್ಶನ ತೆರೆ, ದೇವಿ ದೆರೆ, ರಾಜನಿಗೆ ಮಕ್ಕಳು ಹುಟ್ಟಿದರೆ ಪುತ್ರೋತ್ಸವ ಕಾಣಿಕೆ, ಪಟ್ಟಾಭಿಷೇಕ ಮಾಡಿಕೊಂಡಾಗ ಸಿಂಹಾಸನಾರೋಹಣ ಕಾಣಿಕೆ ಮುಂತಾದ ನೆವನಗಳಿಂದ ದವಸ, ಧಾನ್ಯ, ಹಣ ವಸೂಲಿ ನಡೆಯುತ್ತಿತ್ತು ಎಂದು ಸಿ. ವೀರಣ್ಣನವರು, ಚಿದಾನಂದ ಮೂರ್ತಿಯವರು ಶೋಧಿಸಿದ್ದಾರೆ. ಸೈನ್ಯಗಳು ಪ್ರಯಾಣ ಮಾಡುತ್ತಿದ್ದಾಗ ಒದಗಿಸಬೇಕಾಗಿದ್ದ ದವಸ, ಧಾನ್ಯ, ಹುಲ್ಲು, ಮೇವು, ಹಾಲು, ಮೊಸರು, ತುಪ್ಪ ಇತ್ಯಾದಿಗಳು ಬೇರೆ. ಈ ತೆರಿಗೆಗಳನ್ನು ಕೊಡದಿದ್ದರೆ ಮನೆಗೆ ನುಗ್ಗಿ ದಬ್ಬಾಳಿಕೆಯ ವಸೂಲಿ, ಕಠಿಣ ಶಿಕ್ಷೆ ಇತ್ಯಾದಿ.

ರಾಜರುಗಳ, ಅದಾದುಂದಿಯ ಜೀವನಕ್ಕೆ, ಅವರು ರಾಜ್ಯ ವಿಸ್ತರಣೆ ಮಾಡಿ ಚಕ್ರವರ್ತಿ ಎನಿಸಿಕೊಳ್ಳುವ, ಆದಾಯವನ್ನು ಹಲವು ಪಟ್ಟು ಹೆಚ್ಚಿಸಿಕೊಳ್ಳುವ ಆಕಾಂಕ್ಷೆಗೆ ತೆರಿಗೆ, ಕಂದಾಯಗಳ ಮೂಲಕ ಜನರ ಬದುಕು ಬಲಿಯಾಗುತ್ತಾ ಹೋಯಿತು.

ಇಂತಹ ತೆರಿಗೆ ಹಾಕುವುದರಲ್ಲಿ ತಾವೇ ನೇಮಿಸಿಕೊಂಡ ಕೆಲ ಮಂತ್ರಿಗಳು, ಆಪ್ತೇಷ್ಟರ ಸಲಹೆಗಳನ್ನು ಪಡೆಯುತ್ತಿದ್ದರು. ಆದರೆ ಅದೇನೂ ಅವರು ಒಪ್ಪಲೇಬೇಕೆಂದಿಲ್ಲವಲ್ಲ. ಅವನು ರಾಜ ತಾನೇ. ಅವರೆಲ್ಲರ ಬುದ್ಧಿವಾದವನ್ನು ಧಿಕ್ಕರಿಸಿ ರಾಜಾಜ್ಞೆ ಹೊರಡಿಸುತ್ತಿದ್ದರು.

ರಾಜ ಸಭೆ ಎಂಬ ಆರಂಭದ ಪಾರ್ಲಿಮೆಂಟ್

ಇಂತಹುದೇ ವ್ಯವಸ್ಥೆ ವಿಶ್ವಾದ್ಯಂತ ಬೇರೆ ಬೇರೆ ರೂಪಗಳಲ್ಲಿ ಅಸ್ತಿತ್ವದಲ್ಲಿದ್ದವು. ಬ್ರಿಟನ್ನಲ್ಲಿ ಕೂಡಾ. ರಾಜನೇನೋ ತೆರಿಗೆಗಳನ್ನು ಹಾಕಬಹುದು. ಆದರೆ ಯುದ್ಧ ಪ್ರಸಂಗಗಳಲ್ಲಿ ಹೆಚ್ಚಿನ ಹಣ ತುರ್ತಾಗಿ ಬೇಕಾದಾಗ ಅದರ ವಸೂಲಿ ಮಾಡುವವರಿಗೆ ಖುದ್ದು ಆದೇಶ ನೀಡಲು ರಾಜ್ಯದ ವಿವಿಧ ಪ್ರದೇಶಗಳ ಸರದಾರರು (ಸರ್ ಪದವಿ ಪಡೆದವರು), ನಗರಗಳ ಅಧಿಕಾರಿಗಳು, ಧಾರ್ಮಿಕ ಗುರುಗಳು ಇವರುಗಳ ಸಭೆ ಕರೆಯಲು ಆರಂಭವಾಯಿತು. ಇದೇ ಆರಂಭದ ಪಾರ್ಲಿಮೆಂಟ್. ಪಾರ್ಲಿ ಎಂದರೆ ಮಾತು, ಪಾರ್ಲಿಮೆಂಟ್ ಎಂದರೆ ಮಾತಾಡುವ ಸಭೆ ಅರ್ಥಾತ್ ಚರ್ಚೆ ಮಾಡುವ ಸಭೆ.

ಈ ಪಾರ್ಲಿಮೆಂಟ್ ಇಂದಿನ ಜನರಿಂದ ಚುನಾಯಿತ ಪಾರ್ಲಿಮೆಂಟ್ ಅಲ್ಲ ಎಂಬುದನ್ನು ಗಮನಿಸಿ. ಈ ಪಾರ್ಲಿಮೆಂಟ್ ರಾಜ ಹೆಚ್ಚು ತೆರಿಗೆ ವಿಧಿಸಬೇಕಾದಾಗ, ಅವನ ಮನಸ್ಸಿನ ಇಚ್ಛೆಯಂತೆ ಸೇರಿಸುತ್ತಿದ್ದ ಸಭೆ. ರಾಜನ ಇಚ್ಛೆಗನುಗುಣವಾದ ಸಭೆ.

ಹಿಂದಿನ ಲೇಖನಗಳಲ್ಲಿ ವಿವರಿಸಿದಂತೆ, ಹದಿನಾರನೇ ಶತಮಾನದಲ್ಲಿ ಯುರೋಪಿನ ಸಾಗರ ಸಾಹಸಗಳು, ವಾಣಿಜ್ಯ ಮಾರ್ಗಗಳನ್ನು ಕಂಡು ಹಿಡಿದ ನಂತರ ಬ್ರಿಟನ್ನಲ್ಲಿ ಕೂಡಾ ದೂರ ವಾಣಿಜ್ಯ, ಅದರ ಅಗತ್ಯಗಳಿಗನುಗುಣವಾಗಿ ವಸ್ತುಗಳ ಉತ್ಪಾದನೆ ಬೆಳೆಯಿತಲ್ಲ. ಆಗ ರಾಜ್ಯದ ವಿವಿಧ ಪ್ರದೇಶಗಳ ನೀಡುತ್ತಿದ್ದ ಭೂ ಕಂದಾಯಗಳಿಗಿಂತ ವ್ಯಾಪಾರ, ಆಮದು, ರಫ್ತು, ಬಂದರುಗಳ ಸುಂಕ, ಕುಶಲಕರ್ಮಿಗಳು ತೆರುವ ತೆರಿಗೆಯ ಆದಾಯ ಹೆಚ್ಚಾಗತೊಡಗಿತು. ನಗರ, ಪಟ್ಟಣಗಳು ಹೆಚ್ಚಾಗತೊಡಗಿದವು.

ಈ ಹೊಸ ಪರಿಸ್ಥಿತಿಯಲ್ಲಿ ಈ ಪಾರ್ಲಿಮೆಂಟ್ ನಲ್ಲಿ ನಗರ, ಪಟ್ಟಣಗಳ ಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗತೊಡಗಿತು. ಗ್ರಾಮೀಣ ಪ್ರದೇಶಗಳಲ್ಲಿ ಕೂಡಾ ಆಯಾ ಪ್ರದೇಶ ದೂರ ವಾಣಿಜ್ಯದಲ್ಲಿ ಮಾರಾಟವಾಗುವ ಉಣ್ಣೆ, ಹತ್ತಿ, ಧಾನ್ಯಗಳು ಮೊದಲಾದ ಕೃಷಿ ಉತ್ಪನ್ನಗಳು, ಕುಶಲಕರ್ಮಿ ಉತ್ಪನ್ನಗಳ ಪ್ರಮಾಣಕ್ಕೆ ಅನುಗುಣವಾಗಿ ಹೊಸ ಶ್ರೀಮಂತರು ಆಯಾ ಪ್ರದೇಶಗಳಲ್ಲಿ ಆಡಳಿತದ ಸ್ಥಾನಕ್ಕೆ ನೇಮಕವಾದರು.

ಇವೆಲ್ಲವುಗಳಿಂದ ಪಾರ್ಲಿಮೆಂಟ್ ಎಂಬ ರಾಜ ಸಭೆಯ ಸ್ವರೂಪ ಬದಲಾಗತೊಡಗಿತು. ಹಿಂದೆ ಹೆಚ್ಚಾಗಿ ರಾಜನಿಂದ ನೈಟ್ಹುಡ್ ಎಂಬ ಮಾನ್ಯತೆ ಪಡೆದು ಸರ್ ಎಂದು ಕರೆಯಲ್ಪಡುತ್ತಿದ್ದ ರಾಜನಿಗೆ ವಿಧೇಯರಾಗಿದ್ದ ಸದಸ್ಯರ ಬದಲಾಗಿ ಹೊಸ ರೀತಿಯ ಸದಸ್ಯರು ಹೆಚ್ಚಾದರು.

ಈ ಹೊಸ ಸಾಗರ ಸಾಹಸಗಳಿಗೆ, ದೂರ ವಾಣಿಜ್ಯ, ಅದರ ರಕ್ಷಣೆಗೆ ನಾವಿಕ ಸೈನ್ಯ, ಬೇರೆ ರಾಜ್ಯಗಳ ವ್ಯಾಪಾರಿ ಹಡಗುಗಳ ಮೇಲೆ ಧಾಳಿ ಮಾಡುವ ಕಡಲುಗಳ್ಳತನ (ಇದರಲ್ಲಂತೂ ಬ್ರಿಟನ್ ವಿಶ್ವದಲ್ಲೇ ಕುಪ್ರಸಿದ್ಧವಾಗಿತ್ತು), ಇವೆಲ್ಲವುಗಳಿಗಾಗಿ ಹಡಗುಗಳ ದಂಡು, ಬಂದರುಗಳ ಅಭಿವೃದ್ಧಿ, ಬಂದರುಗಳಿಂದ ಒಳನಾಡಿಗೆ ರಸ್ತೆಗಳ ಅಭಿವೃದ್ಧಿ ಇವೆಲ್ಲವುಗಳಿಗಾಗಿ ರಾಜಪ್ರಭುತ್ವಗಳ ಹಣದ ಅಗತ್ಯ ಬಹು ವೇಗವಾಗಿ, ದೊಡ್ಡ ಪ್ರಮಾಣದಲ್ಲಿ ಬೆಳೆಯಿತು.

ಈ ಎಲ್ಲ ಕಾರ್ಯಗಳು ದೂರ ವ್ಯಾಪಾರದ ವೇಗವಾದ ಬೆಳವಣಿಗೆಯ ತುರ್ತು ಅಗತ್ಯಗಳಾಗಿದ್ದವು. ಆದರೆ ಸಾಗರ ಯಾನಗಳೂ ಸೇರಿದಂತೆ ಈ ಎಲ್ಲವುಗಳಲ್ಲಿ ಹಣ ಹೂಡಿ, ಅವುಗಳ ಲಾಭ ಪಡೆಯುತ್ತಿದ್ದುದು ಹಿಂದೆ ವಿವರಿಸಿದಂತೆ ರಾಜರುಗಳು, ರಾಣಿಯರು ಅವರು ಮಾನ್ಯ ಮಾಡಿದ ಲಾರ್ಡ್ ಗಳು, ನೋಬಲ್ ಗಳು. ಅವರು ಅನುಮತಿ ನೀಡಿದ ಕಂಪನಿಗಳೇ ವ್ಯಾಪಾರ ಮಾಡುವ ಸಾಗರ ಯಾನ ಮಾಡುವ, ಕಡಲುಗಳ್ಳತನ ಮಾಡುವ ಏಕಸ್ವಾಮ್ಯ ಹೊಂದಿದ್ದವು. ಗುಲಾಮ ವ್ಯಾಪಾರದಲ್ಲಿ ತೊಡಗಿದ್ದ ರಾಯಲ್ ಆಫ್ರಿಕನ್ ಕಂಪನಿಯೂ ಸೇರಿದಂತೆ ಹೊಸದಾಗಿ ಸ್ಥಾಪನೆಯಾಗುತ್ತಿದ್ದ ಹಲವು ಕಂಪನಿಗಳು ರಾಯಲ್ ಕಂಪನಿಗಳಾಗಿದ್ದವು.

ಹೀಗಾಗಿ ಈ ಎಲ್ಲ ಅಭಿವೃದ್ಧಿ, ಯುದ್ಧಗಳು, ಆಕ್ರಮಣಗಳು, ರಾಜರ, ರಾಜ ಮನೆತನದ ಲಾರ್ಡ್ ಗಳ ಲಾಭ, ದುರ್ಲಾಭದ ಅಗತ್ಯಗಳಿಗಾಗಿ ಮಾತ್ರ ಎನ್ನುವ ಪರಿಸ್ಥಿತಿ ಇತ್ತು.

ಮೆಟ್ರೋ ರೈಲು ಪ್ರಯಾಣ ದರ ವಿಪರೀತ ಏರಿಕೆ–ಸಿಪಿಐ(ಎಂ) ಪ್ರತಿಭಟನೆ



ಮೆಟ್ರೋ ರೈಲು ದರವನ್ನು ಶೇ.47ರಷ್ಟು ಏರಿಕೆ ಮಾಡಿದ್ದನ್ನು ತೀವ್ರವಾಗಿ ಖಂಡಿಸಿ, ದರ ಹೆಚ್ಚಳದ ಆದೇಶವನ್ನು ತಕ್ಷಣ ವಾಪಸ್ಸು ಪಡೆಯುವಂತೆ ಆಗ್ರಹಿಸಿ, ಸಿಪಿಐ(ಎಂ) ದಕ್ಷಿಣ ಮತ್ತು ಉತ್ತರ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಪ್ರತಿಭಟನೆ ನಡೆಯಿತು.

ಮೆಟ್ರೋ ರೈಲ್ವೆ ಕಾಯ್ದೆ 2002ರ ಅನ್ವಯ ದರ ನಿಗದಿ ಸಮಿತಿ ರಚಿಸಲಾಗಿದ್ದು, ಅದರ ಶಿಫಾರಸ್ಸಿನಂತೆ ಕೇಂದ್ರ ರೈಲ್ವೆ ಸಚಿವಾಲಯದ ಕಾರ್ಯದರ್ಶಿ ನೇತೃತ್ವದಲ್ಲಿ ನಡೆದ ಮಂಡಳಿ ಸಭೆಯು ದರ ಏರಿಕೆಗೆ ಒಪ್ಪಿಗೆ ನೀಡಿದೆ. ಆದರೆ ಈ ಸಮಿತಿ ಅವೈಜ್ಞಾನಿಕವಾಗಿ ದರ ಹೆಚ್ಚಳಕ್ಕೆ ಸಮ್ಮಿತಿಸಿದೆ. ಯಾವುದೇ ಸಾರ್ವಜನಿಕ ಸಾರಿಗೆ ಸಂಸ್ಥೆ ಸಾಮಾಜಿಕ ಕಳಕಳಿಗಳೊಂದಿಗೆ ದರ ನಿಗದಿ ಮಾಡಬೇಕು. ಸತತವಾಗಿ 2023–2024ರ ಆರ್ಥಿಕ ವರ್ಷದಲ್ಲಿ 130 ಕೋಟಿ ಕಾರ್ಯಾಚರಣೆಯ ಲಾಭದೊಂದಿಗೆ ನಮ್ಮ ಮೆಟ್ರೋ ನಡೆಯುತ್ತಿದ್ದರೂ, ಪ್ರಯಾಣ ದರ ಏರಿಕೆಯು ಜನ ವಿರೋಧಿಯಾಗಿದೆ. ಅತ್ಯಂತ ದುಬಾರಿ ನಗರಗಳಲ್ಲಿ ಒಂದಾದ ಬೆಂಗಳೂರು ನಿವಾಸಿಗಳಿಗೆ ಈ ಮೆಟ್ರೋ ರೈಲು ದರ ಏರಿಕೆಯು ತೀವ್ರ ಹೊಡೆತವನ್ನು ನೀಡಲಿದೆ. ಸಾರ್ವಜನಿಕ ಸಾರಿಗೆ ಜನರಿಗೆ ಸೇವೆ ಸಲ್ಲಿಸಲು ಇರಬೇಕೇ ಹೊರತು, ಲಾಭ ಗಳಿಸುವ ಉದ್ದೇಶದಿಂದ ಮೆಟ್ರೋ ಪ್ರಯಾಣ ದರವನ್ನು ಹೆಚ್ಚಿಸಿರುವುದು ಜನವಿರೋಧಿ ನಡೆಯಾಗಿದೆ ಎಂದು ಆರೋಪಿಸಿದ್ದಾರೆ.

ಬೆಂಗಳೂರು ಜಾಗತಿಕವಾಗಿ ಬೆಳೆಯುತ್ತಿರುವ ನಗರವಾಗಿದ್ದು, ಪ್ರಸ್ತುತ ಬೆಂಗಳೂರು ನಗರದಲ್ಲಿ 1 ಕೋಟಿ 40 ಲಕ್ಷ ಜನಸಂಖ್ಯೆ ಇದೆ ಎಂದು ಅಂದಾಜಿಸಲಾಗಿದೆ. ಬೆಂಗಳೂರು ವಾಣಿಜ್ಯ ನಗರವಾಗಿರುವ ಕಾರಣ ಪ್ರತಿದಿನ ಸಾವಿರಾರು ಜನ ಉದ್ಯೋಗಕ್ಕಾಗಿ ನಗರಕ್ಕೆ ವಲಸೆ ಬರುತ್ತಿದ್ದಾರೆ. ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಈಗ ಇರುವ ಸಾರಿಗೆ ವ್ಯವಸ್ಥೆ ಸಾಲದಾಗಿದೆ. ಸಂಚಾರ ನಿಯಂತ್ರಣದ ಸಮಸ್ಯೆಗಳಿಂದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಪ್ರಯಾಣ ಮಾಡಲು ಗಂಟೆಗಟ್ಟಲೆ ಸಮಯ ವ್ಯರ್ಥವಾಗುತ್ತಿದೆ. 2011ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾದ ನಮ್ಮ ಮೆಟ್ರೋ, ಸಾರಿಗೆ ಸಮಸ್ಯೆಯನ್ನು ಸ್ವಲ್ಪ ಸುಧಾರಿಸಲು ಸಹಕಾರಿಯಾಗಿದೆ. ಮೆಟ್ರೋ ರೈಲುಗಳಲ್ಲಿ ಪ್ರಯಾಣ ಮಾಡುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದೆ. 2019–20ರಲ್ಲಿ ಪ್ರತಿದಿನ ಸರಾಸರಿಯಂತೆ 4.80 ಲಕ್ಷ ಪ್ರಯಾಣಿಕರು ಮೆಟ್ರೋದಲ್ಲಿ ಪ್ರಯಾಣಿಸುತ್ತಿದ್ದರೆ, 2023–24ರಲ್ಲಿ ಪ್ರತಿದಿನ ಪ್ರಯಾಣಿಸುವವರ ಸಂಖ್ಯೆ ಸರಾಸರಿ 6.36 ಲಕ್ಷಕ್ಕೆ ಏರಿದೆ. ಹಾಗಾಗಿ ಮೆಟ್ರೋ ಮೇಲೆ ಜನರ ಅವಲಂಬನೆ ಹೆಚ್ಚುತ್ತಿದೆ. ಹೀಗಿರುವಾಗ, ಈಗಾಗಲೇ ಬೆಲೆಏರಿಕೆಯಿಂದ ಜನತೆ ತತ್ತರಿಸುತ್ತಿರುವ ಸಂದರ್ಭದಲ್ಲಿ ಮೆಟ್ರೋ ಪ್ರಯಾಣ ದರ ಏರಿಕೆ ಕ್ರಮವು ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರಾಜಕಾರಣ:

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೆಟ್ರೋ ದರ ಏರಿಕೆ ವಿಚಾರದಲ್ಲಿ ರಾಜಕಾರಣ ಮಾಡುತ್ತಿವೆ. ಜನರ ಅಗತ್ಯಕ್ಕೆ ತಕ್ಕಂತೆ ಮೆಟ್ರೋ ಬೋಗಿಗಳನ್ನು ಹೆಚ್ಚಿಸುತ್ತಿಲ್ಲ. ಹೊಸ ಮಾರ್ಗಗಳಲ್ಲಿ ಕಾಮಗಾರಿ ವಿಳಂಬವಾಗುತ್ತಿದೆ. ಅಗತ್ಯ ಮೆಟ್ರೋ ರೈಲು ಬೋಗಿ ಒದಗಿಸದಿರುವುದು, ಇನ್ನಿತರ ಆಡಳಿತಾತ್ಮಕ ಸಮಸ್ಯೆಗಳಿಂದ ಅನಗತ್ಯ ವೆಚ್ಚಕ್ಕೆ ಕಾರಣವಾಗಿವೆ. ಎರಡು ಸರ್ಕಾರಗಳು ಸಾರ್ವಜನಿಕ ಸಾರಿಗೆಯನ್ನು ಖಾಸಗೀಕರಣ ಮಾಡಲು ನಿರತವಾಗಿದೆ. ಈ ಮೂಲಕ ಸಾರಿಗೆ ದರ ಹೆಚ್ಚಿಸಿ ಜನರ ಮೇಲೆ ಹೊರೆ ಹಾಕುತ್ತಿವೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಹೆಚ್ಚಿಸಿರುವ ಮೆಟ್ರೋ ಪ್ರಯಾಣ ದರವನ್ನು ವಾಪಸ್ಸು ಪಡೆಯಬೇಕು ಹಾಗೂ ಜನಸ್ನೇಹಿಯಾಗಿ ಮೆಟ್ರೋ ಪ್ರಯಾಣ ದರವನ್ನು ನಿಗದಿಪಡಿಸಬೇಕು ಎಂದು ಆವರು ಆಗ್ರಹಿಸಿದರು.



ವಲಸೆ, ಹೊರದಬ್ಬುವಿಕೆ ಮತ್ತು ಮೋದಿ ಸರಕಾರ.... ಪುಟ 3 ರಿಂದ

ಪಡೆಗಳಿಂದ ಕಣ್ತಪ್ಪಿಸಿ ಒಳ ಬರಲೂ ಸಾಧ್ಯವೇ ಇಲ್ಲದಿರುವಾಗ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಕ್ರಮ ವಲಸೆ ಎಂಬುದು ಸಾಧ್ಯವೇ?

ಹೀಗೆ ಅಕ್ರಮ ವಲಸೆಗಾರರನ್ನು ಅಮೇರಿಕಾಕ್ಕೆ ತಂದು ಬಿಡುವುದು ಸಹ ದೊಡ್ಡ ದಂಧೆಯಾಗಿದೆ. ಲಕ್ಷಾಂತರ, ಕೆಲವೊಮ್ಮೆ ಕೋಟ್ಯಾಂತರ ರೂಪಾಯಿಗಳನ್ನು ಏಜಂಟರಿಗೆ ಕೊಟ್ಟು ಒಳ ಹೋಗಿ ಹೊರದಬ್ಬಿಸಿಕೊಂಡ ಬಗ್ಗೆ ಬಂದವರೇ ಬಾಯ್ಬಿಡುತ್ತಾರೆ. ಕೆಲವು ಬಾರಿ ಅಧಿಕೃತ ಪರವಾನಗಿ ಪಡೆದವರ ಅವಧಿ ಮುಗಿದ ಮೇಲೆ ವಾಪಾಸಾಗದೇ ಅಲ್ಲೇ ಉಳಿದವರೂ ಈ ಅಕ್ರಮ ನೆಲಸಿಗರ ಪಟ್ಟಿಯಲ್ಲಿ ಇದ್ದಾರೆ.

ಶೋಚನೀಯ ಜೀವನ

ಅಮೇರಿಕಾದ ಅಧ್ಯಕ್ಷೀಯ ಚುನಾವಣೆಯಲ್ಲಿ ವಲಸಿಗರ ಪ್ರಶ್ನೆಯ ಸುತ್ತ ತೀವ್ರವಾದ ಚರ್ಚೆ ನಡೆಯುತ್ತಿತ್ತು. ವಲಸಿಗರ ಸಂಘಟನೆಯು ವ್ಯವಸ್ಥೆ ಗೊಳಿಸಿದ ಸ್ಯಾನ್ ಫ್ರಾನ್ಸಿಸ್ಕೋ ವಿಶ್ವವಿದ್ಯಾನಿಲಯದ ಪ್ರೊ.ಬಿಲ್ ಓಂಗ್ ಹಿಂಗ್ ಬರೆದ 'ಹ್ಯೂಮನೈಜಿಂಗ್ ಇಮಿಗ್ರೇಷನ್' ಪುಸ್ತಕ ಬಿಡುಗಡೆ 2024 ರ ಜೂನ್ ನಲ್ಲಿ ಸಾಂಟಾ ಕ್ಲಾರಾದಲ್ಲಿ ಬಿಡುಗಡೆ ಆದ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿದ್ದೆ. ಸಮಸ್ಯೆಯ ಗಂಭೀರತೆ, ಮುಂಬರುವ ಆತಂಕ ಅಲ್ಲಿ ಎದ್ದು ಕಾಣುತ್ತಿತ್ತು. ವಿಶೇಷವಾಗಿ ಮೆಕ್ಸಿಕೋ ಒಳಗೊಂಡು ಲ್ಯಾಟಿನ್ ಅಮೇರಿಕಾದ ಹಾಗೂ ಭಾರತದ ಜನತೆ ಅಲ್ಲಿದ್ದರು. ಹೀಗೆ ದುಡಿಯುವವರಿಗೆ ಒಂದು ಗೌರವಯುತ, ಘನತೆಯ ಬದುಕಿಲ್ಲ. ವಿಚಿತ್ರ ಎಂದರೆ ಅತ್ಯಂತ ಸಿರಿವಂತಿಕೆಯ ಈ ರಾಷ್ಟ್ರದಲ್ಲಿ ಮನೆ ನೆಲೆ ಇಲ್ಲದೇ, ಅನ್ನಾಹಾರಗಳಿಲ್ಲದೇ ಚಳಿ, ಮಳೆ, ಬಿಸಿಲಿಗೆ ಮೈಯೊಡ್ಡಿ ಪಾರ್ಕ್ ಗಳು, ಸಾರ್ವಜನಿಕ ಲೈಬ್ರರಿ, ಬಸ್, ರೈಲ್ವೆ –ವಿಮಾನ ನಿಲ್ದಾಣಗಳು, ರಸ್ತೆ ಬದಿ ಮಲಗಿ ಜರ್ಝರಿತ ಜೀವನ ಸಾಗಿಸುವ ಸಾವಿರಾರು ದಿಕ್ಕೇಡಿಗಳಾದ ಮಂದಿಗಳು ಮಹಾ ನಗರಗಳಲ್ಲಿ ಕಾಣ ಸಿಗುತ್ತಾರೆ. ಅದರಲ್ಲೂ ಅತ್ಯಂತ ಶ್ರೀಮಂತ ರಾಜ್ಯವಾದ ಕ್ಯಾಲಿಫೋರ್ನಿಯಾದಲ್ಲಿ– ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಹಿಂಡು ಹಿಂಡಾಗಿ ಕಾಣ ಸಿಗುತ್ತಾರೆ. ಅದರಲ್ಲಿ ಅಮೇರಿಕಾ ಪ್ರಜೆಗಳೂ ಇರುವುದು ಇದೆ.

ಜಾಗತಿಕ ಬಂಡವಾಳದಾರರ ನೀತಿಗಳು, ಅದು ತಂದಿರುವ ಬಿಕ್ಕಟ್ಟು ಆಯಾ ದೇಶದಲ್ಲಿ ವಿಭಿನ್ನ ಸ್ವರೂಪದ ಸಮಸ್ಯೆಗಳನ್ನು ಸೃಷ್ಟಿಸಿದೆ. ಬಿಕ್ಕಟ್ಟಿನಿಂದ ಪಾರಾಗಲು ಅಲ್ಲಿಯ ಸರ್ಕಾರಗಳು ಅಡ್ಡ ಹಾದಿ ಹುಡುಕುತ್ತಿವೆ, ದುಡಿಯುವವರ ಮೇಲೆ ಗಧಾ ಪ್ರಹಾರ ನಡೆಸುತ್ತಿವೆ. ಅದರಲ್ಲಿ ವಲಸಿಗರನ್ನು ಹೊರ ದಬ್ಬುವುದೂ ಒಂದು! ಜನಾಂಗೀಯ ಕಲಹ, ವಿದೇಶಿ ಕೆಲಸಗಾರರ ಮೇಲೆ ಗುಂಡಿನ ಧಾಳಿ, ಹತ್ಯೆ, ಇತ್ಯಾದಿಗಳೂ ಇವುಗಳ ಭಾಗ. 2022–24 ಈ ಮೂರು ವರ್ಷಗಳಲ್ಲಿ 28,458 ಜನ ಸಾವನ್ನಪ್ಪಿದ್ದಾರೆ. ಅದರಲ್ಲಿ 24,278 ಸಹಜ ಸಾವೆಂದು, 1622 ಜನ ಅಪಘಾತದಲ್ಲೂ, 686 ಜನ ಕೆಲಸದ ಸ್ಥಳಗಳಲ್ಲಿನ ವ್ಯತಿರಿಕ್ತ ಸನ್ನಿವೇಶಗಳಿಂದ, 1736 ಆತ್ಮಹತ್ಯೆಯಿಂದ, 136 ಜನ ಹಿಂಸೆ, ಕೊಲೆಗಳಿಗೆ ಈಡಾಗಿದ್ದಾರೆಂದು ಭಾರತದ ವಿದೇಶಾಂಗ ಸಚಿವಾಲಯ ಮಾಹಿತಿ ಹಕ್ಕಿನಲ್ಲಿ ನೀಡಿದೆ. ಇದರಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದ 11 ವಿದ್ಯಾರ್ಥಿಗಳು 2024 ರಲ್ಲಿ ಬಲಿಯಾಗಿದ್ದಾರೆ. ಅಮೇರಿಕಾಕ್ಕೆ ಹೋದವರಲ್ಲಿ ಅಸುರಕ್ಷತೆಯ ಭಾವ ಕಾಡದಿರದು. ಅನೇಕನಗರಗಳಲ್ಲಿ 'ಸೇಫ್ ಏರಿಯಾ, ಅನ್ ಸೇಫ್ ಏರಿಯಾ' ಎಂಬ ಅಘೋಷಿತ 'ವಿಂಗಡಿತ' ಪ್ರದೇಶಗಳಿವೆ!



ಅಮೇರಿಕಾದ ಅಧ್ಯಕ್ಷೀಯ ಚುನಾವಣೆಯಲ್ಲಿ ವಲಸಿಗರ ಪ್ರಶ್ನೆ ಮಹತ್ವವನ್ನು ಪಡೆದದ್ದು ನಿರುದ್ಯೋಗ ಹೆಚ್ಚಳದ ಕಾರಣಕ್ಕೆ ಕೂಡ. ಜೋ ಬೈಡನ್ ಸ್ವಲ್ಪ ಉದಾರವಾದಿಯಂತೆ, ಟ್ರಂಪ್ ಉಗ್ರ ಕ್ರಮದ ಪ್ರತಿಪಾದಕನಂತೆ ಬಿಂಬಿತವಾಗಿತ್ತು. ಟ್ರಂಪ್ ಅಧಿಕಾರ ವಹಿಸಿಕೊಂಡ ಮೇಲೆ ಜಾರಿಗೊಳ್ಳುತ್ತಿರುವ ಆದ್ಯತೆಯ ಅಜೆಂಡ ವಲಸೆಯದ್ದಾಗಿದೆ.

ಮಾತನಾಡದ ಮೋದಿ

ಈಗ ಅತ್ಯವಸರದಲ್ಲಿ ಅಮೇರಿಕಾಕ್ಕೆ ಭೇಟಿ ನೀಡಿರುವ ಭಾರತದ ಪ್ರಧಾನಿ ಮೋದಿಯವರು 'ಅಕ್ರಮ' ವಲಸೆಗಾರರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಒಂದು ಸಮಾಧಾನದ ಪರಿಸ್ಥಿತಿ ನಿರ್ಮಿಸಲೂ ಆಗಲಿಲ್ಲ. 'ಮೋದಿ ನೆಚ್ಚಿನ ಮಿತ್ರ' ಎಂದು ಟ್ರಂಪ್ ಹೊಗಳಿದರೇ ಹೊರತು ಈ ಸಮಸ್ಯೆಯನ್ನೂ ಒಳಗೊಂಡು ಸುಂಕ ಹೇರಿಕೆ ಪ್ರಶ್ನೆಗೂ ಸಮಾಧಾನಕರ ಉತ್ತರ ಸಿಗಲಿಲ್ಲ.

ಅನಧಿಕೃತವಾಗಿ ಅಲ್ಲಿರುವ ಭಾರತೀಯರನ್ನು ವಾಪಾಸು ಕರೆಸಿಕೊಳ್ಳುವುದಾಗಿ ಮೋದಿ ಹೇಳಿ ಬಂದರು.

ಮುಂದಿನ ದಾರಿಯೇನು?

ಬಂದವರಿಗೆ ವ್ಯವಸ್ಥೆ ಮಾಡುವುದು, ಹುಡುಕಿಕೊಳ್ಳುವುದು ಒಂದು ದೊಡ್ಡ ಸವಾಲಿನ ಪ್ರಶ್ನೆ. ವಾಪಾಸು ಬಂದವರಿಗೆ ಮುಂದಿನ ದಾರಿಯೇನು? ಮೋದಿಯವರಲ್ಲಿಯೂ ಉತ್ತರ ಇರಲಿಕ್ಕಿಲ್ಲ. 'ಅವರನ್ನು ಕೆಲಸಕ್ಕೆ ಕಳಿಸದಿದ್ದರೂ ಮೋದಿಯವರು ಕುಂಭ ಮೇಳಕ್ಕೆ ಕಳಿಸುವುದು ಗ್ಯಾರಂಟಿ' ಎಂಬ ಹಾಸ್ಯದ ತುಣುಕುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ರೈತ ಚಳವಳಿಯ ಐವತ್ತು ವರ್ಷಗಳು

–ಹರ್ಕಿಶನ್ ಸಿಂಗ್ ಸುರ್ಜೀತ್

ಅಖಿಲ ಭಾರತ ಕಿಸಾನ್ ಸಭಾ 1986 ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿತು. ಆ ಸಂದರ್ಭದಲ್ಲಿ ಹರ್ಕಿಶನ್ ಸಿಂಗ್ ಸುರ್ಜೀತ್ ಅವರು The Marxist ನಲ್ಲಿ ಬರೆದ ಲೇಖನದ ಆಯ್ದ ಭಾಗ ಇಲ್ಲಿದೆ.

ಊಳಿಗಮಾನ್ಯ ಪದ್ಧತಿಯು ಈಗ ಅದರ ಹಳೆಯ ರೂಪದಲ್ಲಿ ಇಲ್ಲದಿದ್ದರೂ, ಭೂ ಸಂಗ್ರಹಣೆ ಮುಂದುವರೆದಿದೆ. ಶೇ.2.5ರಷ್ಟು ಭೂಮಾಲೀಕರು ಶೇ. 22.8ರಷ್ಟು ಭೂಮಿಯನ್ನು ಹೊಂದಿದ್ದಾರೆ. ಪ್ರಾಕ್ಸಿ ವಹಿವಾಟುಗಳನ್ನು ಸೇರಿಸಿದರೆ ಈ ಸಂಗ್ರಹಣೆ ಇನ್ನೂ ಹೆಚ್ಚಾಗಿರುತ್ತದೆ. ಯೋಜನಾ ಸಮಿತಿಯ ಅಂದಾಜಿನ ಪ್ರಕಾರ, 20 ಎಕರೆ ಮಿತಿಯನ್ನು ವಿಧಿಸಿ, ಅದರಲ್ಲಿನ ಲೋಪದೋಷಗಳನ್ನು ಮುಚ್ಚಿದರೆ, 23 ಮಿಲಿಯನ್ ಎಕರೆ ಭೂಮಿ ವಿತರಣೆಗೆ ಲಭ್ಯವಾಗುತ್ತದೆ.

–ಮುಂದುವರಿದ ಭಾಗ



ಯುದ್ಧಕಾಲದ ರೈತ ಸಂಘ

ಎರಡನೇ ವಿಶ್ವ ಮಹಾಯುದ್ಧ ಪ್ರಾರಂಭವಾದ ಸನ್ನಿವೇಶದಲ್ಲಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷರ ಯುದ್ಧದ ಪ್ರಯತ್ನವನ್ನು ಬೆಂಬಲಿಸಿದರೆ, ರೈತ ಸಂಘವು ಯುದ್ಧವನ್ನು ವಿರೋಧಿಸಿತು. ರೈತರು ಬಾಡಿಗೆ ಮತ್ತು ಕರ ನಿರಾಕರಣೆ ಚಳುವಳಿಯನ್ನು ಪ್ರಾರಂಭಿಸಿದರು. ಪೊಲೀಸರ ದಬ್ಬಾಳಿಕೆಯಿಂದ ಮುಕ್ತ ಕಾರ್ಯಾಚರಣೆ ಕಷ್ಟಕರವಾಯಿತು. ಬಂಗಾಳ ಸೇರಿದಂತೆ ಹಲವು ರಾಜ್ಯಗಳಲ್ಲಿ ಸಂಘದ ಕಚೇರಿಗಳ ಮೇಲೆ ದಾಳಿ ನಡೆಸಿ ಪ್ರಮುಖ ಕಾರ್ಯಕರ್ತರನ್ನು ಬಂಧಿಸಲಾಯಿತು.

ಯುದ್ಧಾನಂತರದ ದಂಗೆ

ಹಿಟ್ಲರನ ಫ್ಯಾಸಿಸ್ಟ್ ಪಡೆಗಳ ಸೋಲು ಮತ್ತು ಸೋವಿಯತ್ ಒಕ್ಕೂಟದ ನಿರ್ಣಾಯಕ ಪಾತ್ರವು ಜಾಗತಿಕ ಮಟ್ಟದಲ್ಲಿ ಅಧಿಕಾರದ ಸಮತೋಲನವನ್ನು ಸಮಾಜವಾದದ ಪರವಾಗಿ ಬದಲಾಯಿಸಿತು. ಸಾಮ್ರಾಜ್ಯಶಾಹಿ ಬಹಳಷ್ಟು ದುರ್ಬಲಗೊಂಡಿತು. ಈ ಪರಿಣಾಮವು ಏಷ್ಯಾದ ದೇಶಗಳಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳ ದೊಡ್ಡ ಸ್ಫೋಟಕ್ಕೆ ಕಾರಣವಾಯಿತು. ಬ್ರಿಟಿಷ್ ಸಾಮ್ರಾಜ್ಯದ ಅತಿದೊಡ್ಡ ವಸಾಹತು ಭಾರತದಲ್ಲಿ ಕ್ರಾಂತಿಕಾರಿ ಪ್ರಸಿದ್ಧ ದಂಗೆ ಭುಗಿಲೆದ್ದಿತು. ತೆಲಂಗಾಣ ರೈತರ ಸಶಸ್ತ್ರ ಹೋರಾಟವು ಮಹತ್ವವನ್ನು ಪಡೆದುಕೊಂಡಿತು. ವಿವಿಧ ಪ್ರಾಂತ್ಯಗಳಲ್ಲಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರಗಳು, ವಿದ್ಯಾರ್ಥಿಗಳ ಪ್ರತಿಭಟನೆಗಳು ಮತ್ತು ಜನರ ಪ್ರತಿಭಟನೆಗಳು ಅಭೂತಪೂರ್ವ ಪ್ರಮಾಣದಲ್ಲಿ ಭುಗಿಲೆದ್ದವು.

ಬಂಡವಾಳಶಾಹಿ ಪಕ್ಷಗಳ ರಾಜಿ

ಜನಾಂದೋಲನವು ಸಾಮ್ರಾಜ್ಯಶಾಹಿ ವಿರೋಧಿಯಾಗಿ ಅದು ಸಾರ್ವತ್ರಿಕ ದಂಗೆಯಾಗಿ ಬದಲಾದರೆ, ಜನಾಂದೋಲನದ ನಾಯಕತ್ವವು ತಮ್ಮ ಕೈಯಿಂದ ಜಾರಿಹೋಗುತ್ತದೆ ಎಂದು ಬೂರ್ಜ್ವಾ ವರ್ಗ ಭಯಪಟ್ಟಿತು. ಬ್ರಿಟಿಷ್ ಸಾಮ್ರಾಜ್ಯಶಾಹಿಯೂ ಸಹ ತಾನು ಆಳ್ವಿಕೆ ಮುಂದುವರಿಸಲು ಸಾಧ್ಯವಿಲ್ಲ ಎಂದು ಅರಿತುಕೊಂಡಿತು. ಈ ಸಂದರ್ಭದಲ್ಲಿ, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಾಯಕರು ಬ್ರಿಟಿಷರೊಂದಿಗೆ ರಾಜಿ ಮಾಡಿಕೊಂಡರು.

ಜಾತಿ–ಧಾರ್ಮಿಕ ಸಮಸ್ಯೆಗಳ ಮುಂದುವರಿಕೆ

ಇಂದಿಗೂ ಉಳಿದುಕೊಂಡಿರುವ ಜಾತಿ ಮತ್ತು ಧಾರ್ಮಿಕ ಸಮಸ್ಯೆಗಳು ಸ್ವಾತಂತ್ರ್ಯಪೂರ್ವ ಮತ್ತು ನಂತರದ ಕಾಂಗ್ರೆಸ್ ನೀತಿಗಳ ಪರಿಣಾಮವಾಗಿದೆ. ಊಳಿಗಮಾನ್ಯ ಪದ್ಧತಿಯನ್ನು ರದ್ದುಗೊಳಿಸುವ ಬದಲು, ಅದು ಅದರೊಂದಿಗೆ ಮೈತ್ರಿ ಮಾಡಿಕೊಂಡಿತು; ಕಾರ್ಮಿಕ ವರ್ಗದೊಂದಿಗೆ ಮೈತ್ರಿ ಮಾಡಿಕೊಂಡು ಕೃಷಿ ಕ್ರಾಂತಿಯನ್ನು ನಡೆಸಲು ಅದರ ಅಸಮರ್ಥತೆಯೇ ಮುಖ್ಯ ಕಾರಣಗಳಾಗಿದ್ದವು.

ಸ್ವಾತಂತ್ರ್ಯಾನಂತರದ ಕೃಷಿ ಚಳುವಳಿ

ಸ್ವಾತಂತ್ರ್ಯದ ನಂತರದ ಮೊದಲ ಆರು ವರ್ಷಗಳಲ್ಲಿ, ರೈತ ಚಳವಳಿಯು ಮತ್ತೆ ಸರ್ಕಾರದ ತೀವ್ರ ದಬ್ಬಾಳಿಕೆಯನ್ನು ಎದುರಿಸಬೇಕಾಯಿತು. ಕ್ರಾಂತಿಕಾರಿ ಚಳವಳಿಯ ಬೆಳವಣಿಗೆಗೆ ಹೆದರಿ, ಸರ್ಕಾರವು ರೈತ ಸಂಘದ ವಿವಿಧ ಘಟಕಗಳ ಚಟುವಟಿಕೆಗಳನ್ನು ಸ್ಥಗಿತಗೊಳಿಸಿತು. 1953ರ ವರೆಗೆ ಸಮ್ಮೇಳನವನ್ನು ನಡೆಸಲು ಸಾಧ್ಯವಾಗಲಿಲ್ಲ. ಆದರೆ ಒತ್ತುವರಿ ತೆರವು ಕಾರ್ಯಾಚರಣೆ ವಿರೋಧಿಸಿ ರೈತರು ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದರು.

1950 ರ ದಶಕದ ಉತ್ತರಾರ್ಧದಲ್ಲಿ ರೈತ ಸಂಘದ ಹೋರಾಟಗಳು

ಕಿಸಾನ್ ಸಭಾ ಭೂಮಿಯ ಹಕ್ಕುಗಳು, ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆಗಳು, ಸಾಲ ಮನ್ನಾ, ಬುಡಕಟ್ಟು ಜನಾಂಗದವರ ಹಕ್ಕುಗಳು ಮತ್ತು ಭಾರೀ ತೆರಿಗೆಯ ವಿರುದ್ಧ ಹಲವಾರು ಪ್ರತಿಭಟನೆಗಳನ್ನು ನಡೆಸಿತು. ಇವುಗಳಲ್ಲಿ ಪ್ರಮುಖವಾದದ್ದು 1959ರ ಆರಂಭದಲ್ಲಿ ಪಂಜಾಬ್ ರೈತರು ಬೆಟರ್ಮೆಂಟ್ ಲೆವಿ ತೆರಿಗೆಯ ವಿರುದ್ಧ ನಡೆಸಿದ ಪ್ರತಿಭಟನೆ. ತೆಲಂಗಾಣ ರೈತರ ಪ್ರತಿಭಟನೆಯ ನಂತರ ರೈತ ಸಂಘದ ಬ್ಯಾನರ್ ಅಡಿಯಲ್ಲಿ ನಡೆಯುತ್ತಿದ್ದ ಅತಿದೊಡ್ಡ ಪ್ರತಿಭಟನೆ ಇದಾಗಿತ್ತು. ಬಂದೂಕು, ಲಾಠಿ ಮತ್ತು ದಬ್ಬಾಳಿಕೆಯನ್ನು ರೈತರು ಎದುರಿಸಿ ನಿಂತರು. ರಾಜಕೀಯ ಪಕ್ಷಗಳ ಭೇದಗಳನ್ನು ಮೀರಿ ರೈತರ ಒಗ್ಗಟ್ಟು ಐತಿಹಾಸಿಕ ಮಹತ್ವದ್ದಾಗಿತ್ತು. ಅಂತಿಮವಾಗಿ, ಸರ್ಕಾರವು 136 ಕೋಟಿ ರೂಪಾಯಿ ತೆರಿಗೆಯನ್ನು ಮರುಪಾವತಿಸಬೇಕಾಯಿತು.

1960ರ ದಶಕದ ಕೃಷಿ ಬಿಕ್ಕಟ್ಟು

1960ರ ದಶಕದ ಮಧ್ಯಭಾಗದಲ್ಲಿ, ಕೃಷಿ ನಿಶ್ಚಲತೆ ಮತ್ತು ಆಹಾರ ಬಿಕ್ಕಟ್ಟುಗಳು ಉಲ್ಬಣಗೊಂಡವು. ಬೂರ್ಜ್ವಾ–ಭೂಮಾಲೀಕ ವರ್ಗಗಳು ರೈತರ ಮೇಲಿನ ಹಿಡಿತವನ್ನು ಕಳೆದುಕೊಳ್ಳಲು ಪ್ರಾರಂಭಿಸಿದವು. 1967ರ ಚುನಾವಣೆಯಲ್ಲಿ ಎಂಟು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದ ಪ್ರಾಬಲ್ಯ ಮುರಿದುಬಿತ್ತು. ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಗೆದ್ದವು. ಇದರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಪ್ರಮುಖ ಪಾತ್ರ ವಹಿಸಿತು.

ಪರ್ಯಾಯ ನೀತಿಗಳ ಪರಿಣಾಮ

ಪಶ್ಚಿಮ ಬಂಗಾಳ ಮತ್ತು ತ್ರಿಪುರದಲ್ಲಿ ಎಡರಂಗ ಸರ್ಕಾರಗಳು ಮತ್ತು ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರ (ಸ್ವಲ್ಪ ಸಮಯದವರೆಗೆ), ಸಂಘಟಿತ ಕೃಷಿ ಚಳವಳಿಯ ಬೆಂಬಲದೊಂದಿಗೆ ರೈತರಿಗೆ ಅನುಕೂಲಕರವಾದ ನೀತಿಗಳನ್ನು ಜಾರಿಗೆ ತಂದವು, ಆದರೂ ಅವು ಸಂವಿಧಾನದ ಮಿತಿಯೊಳಗೆ ಇದ್ದವು.

ಪಶ್ಚಿಮ ಬಂಗಾಳದಲ್ಲಿ 12 ಲಕ್ಷ ಕುಟುಂಬಗಳಿಗೆ ಭೂಮಿ ನೀಡಲಾಯಿತು. 13 ಲಕ್ಷ ಅರೆಕಾಲಿಕ ರೈತರು ನೋಂದಾಯಿಸಲ್ಪಟ್ಟರು. ಪ್ರತಿ ವರ್ಷ ಎರಡು ಲಕ್ಷಕ್ಕೂ ಹೆಚ್ಚು ಮಂದಿ ಬ್ಯಾಂಕ್ ಸಾಲ ಪಡೆಯುತ್ತಿದ್ದರು. ಎರಡು ಲಕ್ಷಕ್ಕೂ ಹೆಚ್ಚು ಜನರಿಗೆ ವಸತಿ ಹಕ್ಕುಗಳನ್ನು ನೀಡಲಾಯಿತು. ಕೃಷಿ ಕಾರ್ಮಿಕರ ಕನಿಷ್ಠ ಕೂಲಿಯನ್ನು ನಿರಂತರವಾಗಿ ಏರಿಸಲಾಯಿತು.

ಕೇಂದ್ರ ಸರ್ಕಾರದ ಪ್ರತಿಗಾಮಿ ನೀತಿಗಳು ಮತ್ತು ರಾಜ್ಯ ಮಟ್ಟದ ಪ್ರತಿಭಟನೆಗಳು

ತ್ರಿಪುರಾದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ಭೂಮಿ ನೀಡಲಾಯಿತು. ಬಡ ರೈತರು ಮತ್ತು ಕುಶಲಕರ್ಮಿಗಳಿಗೆ ಸಾಲ ಮನ್ನಾ ಮಾಡಲಾಯಿತು. ಕನಿಷ್ಠ ವೇತನವನ್ನು ನಿಗದಿಪಡಿಸಲಾಯಿತು ಮತ್ತು ಅರೆಕಾಲಿಕ ರೈತರನ್ನು ನೋಂದಾಯಿಸಲಾಯಿತು. ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರದ ಅಡಿಯಲ್ಲಿ, ನಾಲ್ಕು ಎಕರೆಗಿಂತ ಕಡಿಮೆ ಇರುವ ಭೂಮಿಗೆ ಎಸ್ಟೇಟ್ ತೆರಿಗೆಯನ್ನು ವಿನಾಯಿತಿ ನೀಡಲಾಯಿತು, 2.5 ಎಕರೆವರೆಗಿನ ತೆರಿಗೆ ಬಾಕಿಗಳನ್ನು ಮನ್ನಾ ಮಾಡಲಾಯಿತು ಮತ್ತು ಕೃಷಿ ಒಳಹರಿವುಗಳಿಗೆ ಸಹಾಯಧನಗಳನ್ನು ನೀಡಲಾಯಿತು. ರೈತ ಸಂಘದ ಬಲದಿಂದಲೇ ಇದು ಸಾಧ್ಯ. ರೈತ ಸಂಘದ ಸಕ್ರಿಯ ಹಸ್ತಕ್ಷೇಪವಿಲ್ಲದೆ, ಅಧಿಕಾರಶಾಹಿ ಈ ಕ್ರಮಗಳನ್ನು ತೆಗೆದುಕೊಳ್ಳದೆ ಅದು ಕೇವಲ ಹೇಳಿಕೆಗಳಾಗಿಯೇ ಉಳಿಯುತ್ತಿತ್ತು. ಈ ಪರ್ಯಾಯ ನೀತಿಗಳಿಂದಾಗಿಯೇ ಪಶ್ಚಿಮ ಬಂಗಾಳದ ವಯಸ್ಕ ಕೃಷಿ ಜನಸಂಖ್ಯೆಯ ಶೇಕಡಾ 33ರಷ್ಟು ಜನರು ಸಂಘಕ್ಕೆ ಸೇರಿದರು.

1980ರ ದಶಕದ ಆರಂಭದಲ್ಲಿ, ರೈತರಲ್ಲಿ ಒಂದು ದೊಡ್ಡ ದಂಗೆ ನಡೆಯಿತು. ಕಾಂಗ್ರೆಸ್ ಬೆಂಬಲಿತ ವೇದಿಕೆಯೂ ಸಹ ಪ್ರತಿಭಟನೆಯಲ್ಲಿ ಸೇರಿಕೊಂಡಿತು. ಇದು ರೈತರ ಚಳುವಳಿಯನ್ನು ಕಟ್ಟಲು ಉತ್ತಮ ಅವಕಾಶಗಳನ್ನು ಸೃಷ್ಟಿಸಿತು.

ಸಮಕಾಲೀನ ಕೃಷಿ ಬಿಕ್ಕಟ್ಟು ಮತ್ತು ಅದರ ಆಯಾಮಗಳು

ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳಾದರೂ, ಊಳಿಗಮಾನ್ಯ ಪರ ಮತ್ತು ರೈತ ವಿರೋಧಿ ನೀತಿಗಳು ಕೃಷಿ ಬಿಕ್ಕಟ್ಟನ್ನು ಮತ್ತಷ್ಟು ಆಳಗೊಳಿಸಿವೆ. ಇದು ಹಲವು ರೂಪಗಳಲ್ಲಿ ಪ್ರಕಟವಾಗುತ್ತದೆ: ಭೂರಹಿತರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ, ಒಂದೇ ಪ್ರದೇಶದಲ್ಲಿ, ಪ್ರದೇಶಗಳ ನಡುವೆ ಹೆಚ್ಚುತ್ತಿರುವ ಅಸಮಾನತೆಗಳು, ಆಹಾರ ಧಾನ್ಯ ಉತ್ಪಾದನೆ ಹೆಚ್ಚುತ್ತಿದೆ ಮತ್ತು ಸರ್ಕಾರಿ ಮೀಸಲು ಹೆಚ್ಚುತ್ತಿದೆ, ಆದರೆ ಜನರ ಬಳಕೆ ತುಂಬಾ ಕಡಿಮೆಯಾಗಿದೆ, ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಹೊರತಾಗಿಯೂ ಬಡತನ ಮತ್ತು ನಿರುದ್ಯೋಗ ಹೆಚ್ಚುತ್ತಿದೆ, ಕೃಷಿ ವಲಯಕ್ಕೆ ನೀಡಲಾಗುವ ಕಾರ್ಪೊರೇಟ್ ಸಾಲಗಳಲ್ಲಿ ಮರುಪಾವತಿಯಾಗದ ಸಾಲಗಳ ಪ್ರಮಾಣ ಹೆಚ್ಚಳವಾಗಿದೆ.

63 ಮಿಲಿಯನ್ ಎಕರೆ ಹೆಚ್ಚುವರಿ ಭೂಮಿಯಲ್ಲಿ ಕೇವಲ ಶೇ. 7ರಷ್ಟು ಹಂಚಿಕೆ

1950 ಮತ್ತು 1970ರ ದಶಕಗಳಲ್ಲಿ ಎರಡು ಸುತ್ತಿನ ಭೂ ಮಿತಿ ಕಾನೂನುಗಳು ಅಂಗೀಕಾರವಾದರೂ, ಕೇವಲ 7.2 ಮಿಲಿಯನ್ ಎಕರೆ ಭೂಮಿಯನ್ನು ಮಾತ್ರ ಹೆಚ್ಚುವರಿ ಎಂದು ಘೋಷಿಸಲಾಯಿತು. ಇದರಲ್ಲಿ 5.6 ಮಿಲಿಯನ್ ಎಕರೆಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಕೇವಲ 4.4 ಮಿಲಿಯನ್ ಎಕರೆಗಳನ್ನು ಮಾತ್ರ ವಿತರಿಸಲಾಗಿದೆ. ಮೊದಲ ಸುತ್ತಿನ ಕಾನೂನುಗಳ ನಂತರ ಮಹಲಾನೋಬಿಸ್ ಸಮಿತಿಯು ಅಂದಾಜು ಮಾಡಿದ 63 ಮಿಲಿಯನ್ ಎಕರೆ ಹೆಚ್ಚುವರಿ ಭೂಮಿಯಲ್ಲಿ ಇದು ಕೇವಲ 7 ಪ್ರತಿಶತದಷ್ಟಿದೆ.

ಹೊಸ ಸವಾಲುಗಳು ಮತ್ತು ಹೋರಾಟದ ರೂಪಗಳು

ನವ ಉದಾರವಾದಿ ಆರ್ಥಿಕ ಪರಿಸರದಲ್ಲಿ ಕೃಷಿಯ ಮೇಲೆ ಕಾರ್ಪೊರೇಟ್ ಪ್ರಾಬಲ್ಯ ಹೆಚ್ಚಾಗಿದೆ. ಬೀಜಗಳಿಂದ ಮಾರುಕಟ್ಟೆಯವರೆಗೆ, ಬಹುರಾಷ್ಟ್ರೀಯ ಸಂಸ್ಥೆಗಳ ನಿಯಂತ್ರಣ ಬಲಗೊಂಡಿದೆ. ಈ ಸಂದರ್ಭದಲ್ಲಿ ರೈತ ಸಂಘದ ಹೋರಾಟದ ರೂಪಗಳು ಮತ್ತು ಬೇಡಿಕೆಗಳು ಹೊಸ ಆಯಾಮಗಳನ್ನು ಪಡೆದುಕೊಂಡಿವೆ.

ವ್ಯವಸ್ಥಿತ ಸವಾಲುಗಳು ಮತ್ತು ಹೊಸ ತಂತ್ರಗಳು

ಪ್ರಸ್ತುತ ಅವಧಿಯಲ್ಲಿ ರೈತ ಸಂಘ ಎದುರಿಸುತ್ತಿರುವ ಮೂರು ಪ್ರಮುಖ ಸವಾಲುಗಳಿವೆ: ಮೊದಲನೆಯದಾಗಿ, ಕೃಷಿಯ ಸ್ವರೂಪವೇ ಬದಲಾಗಿದೆ. ಇದು ವಿನಿಮಯ ವ್ಯವಸ್ಥೆಯಿಂದ ಸಂಪೂರ್ಣವಾಗಿ ವಿತ್ತೀಯ ಆರ್ಥಿಕತೆಗೆ ಬದಲಾಗಿದೆ. ಹೆಚ್ಚುವರಿ ಉತ್ಪಾದಿಸುವವರು ಮಾತ್ರವಲ್ಲ, ಬಡ ರೈತರು ಸಹ ಕೊಯ್ಲು ಮಾಡಿದ ತಕ್ಷಣ ಮಾರುಕಟ್ಟೆಯಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ನಂತರ ಆಹಾರಕ್ಕಾಗಿ ಮಾರುಕಟ್ಟೆಯನ್ನು ಆಶ್ರಯಿಸಬೇಕಾಗುತ್ತದೆ. ಆದ್ದರಿಂದ, ದೊಡ್ಡ ಉದ್ಯಮಿಗಳು ಏಕಸ್ವಾಮ್ಯ ಬಂಡವಾಳಶಾಹಿಗಳ ವಿರುದ್ಧ ತಮ್ಮ ಹೋರಾಟಗಳನ್ನು ಸರಿಯಾಗಿ ರೂಪಿಸಿಕೊಳ್ಳಲು ಈ ಹೊಸ ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕು.

ಎರಡನೆಯದಾಗಿ, ಊಳಿಗಮಾನ್ಯ ಪದ್ಧತಿಯು ಈಗ ಅದರ ಹಳೆಯ ರೂಪದಲ್ಲಿ ಇಲ್ಲದಿದ್ದರೂ, ಭೂ ಸಂಗ್ರಹಣೆ ಮುಂದುವರೆದಿದೆ. ಶೇ.2.5 ರಷ್ಟು ಭೂಮಾಲೀಕರು ಶೇ.22.8 ರಷ್ಟು ಭೂಮಿಯನ್ನು ಹೊಂದಿದ್ದಾರೆ. ಪ್ರಾಕ್ಸಿ ವಹಿವಾಟುಗಳನ್ನು ಸೇರಿಸಿದರೆ ಈ ಸಂಗ್ರಹಣೆ ಇನ್ನೂ ಹೆಚ್ಚಾಗಿರುತ್ತದೆ. ಯೋಜನಾ ಸಮಿತಿಯ ಅಂದಾಜಿನ ಪ್ರಕಾರ, 20 ಎಕರೆ ಮಿತಿಯನ್ನು ವಿಧಿಸಿ, ಅದರಲ್ಲಿನ ಲೋಪದೋಷಗಳನ್ನು ಮುಚ್ಚಿದರೆ, 23 ಮಿಲಿಯನ್ ಎಕರೆ ಭೂಮಿ ವಿತರಣೆಗೆ ಲಭ್ಯವಾಗುತ್ತದೆ. ಆದರೆ ಏಳನೇ ಪಂಚವಾರ್ಷಿಕ ಯೋಜನೆಯು ಮಿತಿ ಕಾನೂನುಗಳನ್ನು ತಿದ್ದುಪಡಿ ಮಾಡುವ ಬಗ್ಗೆ ಅಥವಾ ಭೂ ಏಕಸ್ವಾಮ್ಯವನ್ನು ಮುರಿಯುವ ಬಗ್ಗೆ ಯಾವುದೇ ಉಲ್ಲೇಖವನ್ನು ನೀಡುವುದಿಲ್ಲ.

ಮೂರನೆಯದಾಗಿ, ಕೃಷಿ ಕಾರ್ಮಿಕರು ಮತ್ತು ಬಡ ರೈತರ ಸುತ್ತ ನಿರ್ಮಿಸಬೇಕಾದ ಸಂಘಟನೆಯು, ಅವರ ನಿರ್ದಿಷ್ಟ ಸಮಸ್ಯೆಗಳನ್ನು ಮಾತ್ರವಲ್ಲದೆ ಕೃಷಿಯ ಸಾಮಾನ್ಯ ಬೇಡಿಕೆಗಳನ್ನು ಸಹ ಸಜ್ಜುಗೊಳಿಸಬೇಕು. ಅದೇ ರೀತಿ, ಇತರ ವರ್ಗದ ರೈತರು ಸಹ ಕೃಷಿ ಕಾರ್ಮಿಕರ ಹೋರಾಟಗಳನ್ನು ಬೆಂಬಲಿಸಬೇಕು. ಈ ದ್ವಿಮುಖ ಏಕತೆಯೇ ಕೃಷಿ ಚಳವಳಿಯ ಯಶಸ್ಸಿಗೆ ಕಾರಣವಾಗುತ್ತದೆ.

ಭವಿಷ್ಯದ ಸವಾಲುಗಳು ಮತ್ತು ಕಾರ್ಯಗಳು

ಕಾಂಗ್ರೆಸ್ ಪಕ್ಷ ಮೂವತ್ತೈದು ವರ್ಷಗಳ ಕಾಲ ಆಳಿದರೂ, ಊಳಿಗಮಾನ್ಯ ಪದ್ಧತಿಯನ್ನು ನಿರ್ಮೂಲನೆ ಮಾಡಲು, ಭೂ ಸಂಗ್ರಹಣೆಯನ್ನು ತಡೆಗಟ್ಟಲು, ಭೂ ರಹಿತರ ಸಂಖ್ಯೆ ಹೆಚ್ಚುತ್ತಿರುವುದನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಸ್ವಾತಂತ್ರ್ಯ ಪೂರ್ವದ ಕೃಷಿಕರ ಐಕತೆಯನ್ನು ಮುರಿಯುವಲ್ಲಿ ಅದು ಯಶಸ್ವಿಯಾಗಿದೆ. ಹಿಂದೆ ಶ್ರೀಮಂತ, ಮಧ್ಯಮ ರೈತರ ಮೇಲೆ ಕೇಂದ್ರೀಕೃತವಾದ ಐಕ್ಯತೆ ಇತ್ತು, ಇಂದು ಕೃಷಿ ಕಾರ್ಮಿಕರು ಮತ್ತು ಬಡ ರೈತರ ಕೇಂದ್ರೀಕೃತವಾದ ಐಕ್ಯತೆ ನಿರ್ಮಿಸಬೇಕಿದೆ.

ಊಳಿಗಮಾನ್ಯ ಪದ್ಧತಿಯ ಸಂಪೂರ್ಣ ನಿರ್ಮೂಲನೆ, ಭೂರಹಿತರಿಗೆ ಭೂಮಿ ➚

ದೆಹಲಿ ಚುನಾವಣೆ ಫಲಿತಾಂಶಗಳು

ಪ್ರಕಾಶ್ ಕಾರತ್

ದೆಹಲಿ ವಿಧಾನಸಭೆಗೆ ನಡೆದ ಚುನಾವಣೆಗಳಲ್ಲಿ 48 ಸ್ಥಾನ ಗಳಿಸಿದ ಬಿಜೆಪಿ ಜಯಶಾಲಿಯಾಗಿದೆ. ಅದು ಶೇಕಡ 45.6ರಷ್ಟು ಮತಗಳನ್ನು ಗಳಿಸಿದೆ. ಆಮ್ ಆದ್ಮಿ ಪಕ್ಷ (ಆಪ್) ಶೇಕಡ 43.6 ಮತಗಳೊಂದಿಗೆ 22 ಸೀಟುಗಳಲ್ಲಿ ಗೆಲವು ಸಾಧಿಸಿದೆ. ಈ ಎಡರೂ ಪಕ್ಷಗಳ ನಡುವಿನ ಮತಗಳ ವ್ಯತ್ಯಾಸ ಕೇವಲ ಎರಡು ಶೇಕಡ ಆಗಿದೆ. ಆದರೆ ಆ ವ್ಯತ್ಯಾಸದಿಂದ ಬಿಜೆಪಿಗೆ 40 ಅಧಿಕ ಸ್ಥಾನಗಳು ದಕ್ಕಿವೆ.

ದೆಹಲಿ ಅಸೆಂಬ್ಲಿ ಚುನಾವಣೆ ಫಲಿತಾಂಶಗಳನ್ನು ವಿವಿಧ ದೃಷ್ಟಿಕೋನಗಳಿಂದ ನೋಡಲಾಗುತ್ತಿದೆ ಹಾಗೂ ವಿಶ್ಲೇಷಿಸಲಾಗುತ್ತಿದೆ. ಬಿಜೆಪಿ 27 ವರ್ಷಗಳ ನಂತರ ದೆಹಲಿಯಲ್ಲಿ ಗೆಲವು ಸಾಧಿಸಿರುವುದು ಆ ಪಕ್ಷ ಮತ್ತು ಮೋದಿ ಸರ್ಕಾರಕ್ಕೆ ಹುರುಪು ತುಂಬಿರುವುದರಲ್ಲಿ ಅನುಮಾನವಿಲ್ಲ. ಅದೇ ಹೊತ್ತಿಗೆ, 10 ವರ್ಷಗಳ ಅಧಿಕಾರದ ನಂತರ ಆಪ್ ಸೋತಿರುವುದನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ವ್ಯಾಖ್ಯಾನಿಸಲಾಗುತ್ತಿದೆ. ತಪ್ಪು ಒಪ್ಪುಗಳ ಪಾಪಕ್ಕಾಗಿ ಆಪ್ ಅನ್ನು ಮತದಾರರು ಶಿಕ್ಷಿಸಿದ್ದಾರೆ ಎನ್ನುವುದು ಕಾರ್ಪೊರೇಟ್ ಮಾಧ್ಯಮ ಮತ್ತು ವ್ಯವಸ್ಥೆಯ ಪರ ವಿಶ್ಲೇಷಕರ ಪ್ರಮುಖ ಅಭಿಪ್ರಾಯವಾಗಿದೆ.

'ಭ್ರಷ್ಟಾಚಾರದ ವಿರುದ್ಧ ಭಾರತ' ಆಂದೋಲನದ ಫಲವಾಗಿ ಆಪ್ ಹುಟ್ಟಿಕೊಂಡಿತ್ತು. ಈಗ ಭ್ರಷ್ಟಾಚಾರದ ಆರೋಪಗಳಿಂದ ಆಪ್ ಹಾಗೂ ಅದರ ಮುಖಂಡ ಅರವಿಂದ್ ಕೇಜ್ರಿವಾಲ್‌ರ ವ್ಯಕ್ತಿತ್ವಕ್ಕೆ ಧಕ್ಕೆಯಾಗಿದೆ ಎಂದು ಹೇಳಲಾಗುತ್ತಿದೆ. ತನ್ನ ಪ್ರಥಮ ಪೂರ್ಣ ಆಡಳಿತದ ಅವಧಿಯಲ್ಲಿ ಆಪ್ ಬಡ ವಿಭಾಗಗಳ ಜನರಿಗೆ ನೀಡಿದ್ದ ಆಶ್ವಾಸನೆಗಳನ್ನು–ಪ್ರತಿ ಕುಟುಂಬಕ್ಕೆ 200 ಯುನಿಟ್‌ವರೆಗೆ ಉಚಿತ ವಿದ್ಯುತ್, ಉಚಿತ ನೀರು ಸರಬರಾಜು ಮತ್ತು ಮೊಹಲ್ಲಾ ಕ್ಲಿನಿಕ್‌ಗಳ ಸ್ಥಾಪನೆ ಹಾಗೂ ಸರಕಾರಿ ಶಾಲೆಗಳ ಉನ್ನತೀಕರಣ–ಬಹುತೇಕವಾಗಿ ಈಡೇರಿಸಿತ್ತು. ಆದರೆ ಎರಡನೇ ಅವಧಿಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಬಿಟ್ಟರೆ ಬೇರೆ ಯಾವುದೇ ಭರವಸೆಗಳನ್ನು ಈಡೇರಿಸಲು ಆಪ್ ಸರಕಾರ ವಿಫಲವಾಗಿತ್ತು ಎನ್ನುವುದು ಇನ್ನೊಂದು ಜನಪ್ರಿಯ ಅಭಿಪ್ರಾಯವಾಗಿದೆ. ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಮತ್ತು ಆಪ್ ಸರಕಾರದ ನಡುವಿನ ಹಗ್ಗಜಗ್ಗಾಟ ಕೂಡ ಇದಕ್ಕೆ ಒಂದು ಕಾರಣ ಎನ್ನಲಾಗುತ್ತಿದೆ; ಆದರೆ ಉಭಯತ್ರರರನ್ನು ದೂರುವುದು ಒಂದು ಪ್ರವೃತ್ತಿಯಾಗಿ ಬಿಟ್ಟಿದೆ.

ಅಂತಿಮವಾಗಿ, ಅಧಿಕಾರಸ್ಥ ಪಕ್ಷದ ವಿರುದ್ಧ ಹೆಚ್ಚಿದ ಅಲೆ (ಆ್ಯಂಟಿ–ಇನ್‌ಕಂಬನ್ಸಿ) ಆಪ್ ಹಿನ್ನಡೆಗೆ ಕಾರಣವೆಂದು ಹೇಳಲಾಗುತ್ತಿದೆ. ಮೋದಿ ಗ್ಯಾರಂಟಿಗಳು ಮತ್ತು ಡಬ್ಬಲ್ ಎಂಜಿನ್ ಸರಕಾರದ ಆಶ್ವಾಸನೆಗಳಿಂದ ಬಿಜೆಪಿ ಜನಾದೇಶ ಪಡೆಯಿತು.

ಸರಕಾರದ ಎರಡನೇ ಅವಧಿಯಲ್ಲಿ (2020–25) ಪ್ರಮುಖ ಆಶ್ವಾಸನೆಗಳನ್ನು ಈಡೇರಿಸುವುದು ಆಪ್‌ಗೆ ಸಾಧ್ಯವಾಗಲಿಲ್ಲ ಎನ್ನುವುದು ನಿಜ. ರಸ್ತೆ, ಒಳಚರಂಡಿ, ತ್ಯಾಜ್ಯ ನಿರ್ವಹಣೆ ಮತ್ತು ನೀರು ಸರಬರಾಜು ಸಹಿತ ಮೂಲಸೌಕರ್ಯದಲ್ಲಿ ಕುಸಿತವಾಗುತ್ತಿರುವ ಬಗ್ಗೆ ವಿಶೇಷವಾಗಿ ಮಧ್ಯಮ ವರ್ಗದವರಲ್ಲಿ ಅತೃಪ್ತಿ ಮಡುಗಟ್ಟಿತ್ತು. ಆಪ್ ತನ್ನದೇ ಸಿಗ್ನೇಚರ್ ಶೈಲಿಯಲ್ಲಿ, ತನ್ನ ಸಿದ್ಧಾಂತ–ರಾಹಿತ್ಯ ಧೋರಣೆಯ ಬಲಿಪಶುವಾಯಿತು. ಹಿಂದೂ ಧಾರ್ಮಿಕ ಸಂಕೇತ ಮತ್ತು ಭಾವನೆಗಳಿಗೆ ಸತತವಾಗಿ ಸ್ಪಂದಿಸುವ ಮೂಲಕ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಆಕ್ರಮಣಕಾರಿ ಹಿಂದೂತ್ವ ರಾಜಕೀಯವನ್ನು ಶೂನ್ಯಗೊಳಿಸಲು ಆಪ್ ಯತ್ನಿಸಿತು. ದಾಳಿಗೊಳಗಾದ ಮುಸ್ಲಿಂ ಅಲ್ಪಸಂಖ್ಯಾತರ ಬೆಂಬಲಕ್ಕೆ ದೃಢವಾಗಿ ನಿಲ್ಲುವ ಧೋರಣೆ ತಳೆಯಲು ಆಪ್ ನಾಯಕತ್ವ ವಿಫಲವಾಯಿತು. ಆಪ್ ಸರಕಾರ ಹೆಚ್ಚೆಚ್ಚಾಗಿ ಜನರಿಂದ ದೂರವಾಯಿತು ಹಾಗೂ ಕಾರ್ಮಿಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಹಿತ ವಿವಿಧ ವಿಭಾಗಗಳ ದೂರುಗಳನ್ನು ಯಾರೂ ಕೇಳುವವರಿಲ್ಲದಂತೆ ಆಯಿತು.

ಅಂತಿಮವಾಗಿ, ಒಂದು ಶುದ್ಧ ಹಾಗೂ ಭ್ರಷ್ಟಾಚಾರರಹಿತವೆಂಬ ಆಪ್ ಪ್ರತಿಷ್ಠೆ ಮುಕ್ಕಾಯಿತು. ಮೋದಿ ಸರಕಾರ ಹೆಣೆದ ಸುಳ್ಳು ಕೇಸ್‌ಗಳಿಂದ ಮಾತ್ರವೇ ಹೀಗಾಗಲಿಲ್ಲ; ಮುಖ್ಯಮಂತ್ರಿಯ ಮನೆಯನ್ನು ದುಂದುವೆಚ್ಚದಿಂದ ನವೀಕರಿಸಿದ್ದು ಕೂಡ ಹೀಗಾಯಿತು. ಬಿಜೆಪಿ ನಡೆಸಿದ 'ಶೀಷ್ ಮಹಲ್' (ಗಾಜಿನ ಮನೆ) ಅಭಿಯಾನವು ಮತದಾರರ ಕೆಲವು ವಿಭಾಗಗಳಲ್ಲಿ ಚೆನ್ನಾಗಿ ಕೆಲಸ ಮಾಡಿತು.

ಈ ಎಲ್ಲವನ್ನೂ ಒಪ್ಪಿಕೊಂಡ ಮೇಲೂ ಚುನಾವಣಾ ಫಲಿತಾಂಶದ ಕುರಿತ ಪ್ರಮುಖ ವಿಚಾರವನ್ನು ನಗಣ್ಯಗೊಳಿಸಲಾಗಿದೆ ಅಥವಾ ನಿರ್ಲಕ್ಷಿಸಲಾಗುತ್ತಿದೆ. ಆಪ್ ಸರಕಾರ ಮತ್ತು ಅದರ ನಾಯಕತ್ವದ ಮೇಲೆ ಮೋದಿ ಸರಕಾರ ಹಾಗೂ ಬಿಜೆಪಿ ನಡೆಸಿದ್ದ ಸತತ ಆಕ್ರಮಣವೇ ಆ ಪ್ರಮುಖ ವಿಚಾರ. ರಾಷ್ಟ್ರ ರಾಜಧಾನಿ ವಲಯ ದೆಹಲಿಯಲ್ಲಿ ನಡೆದಿದ್ದು ಸ್ವತಂತ್ರ ಭಾರತದ ಇತಿಹಾಸದಲ್ಲೇ ಅಭೂತಪೂರ್ವವಾದುದಾಗಿದೆ.

ಅಸಾಂವಿಧಾನಿಕ ಮಾರ್ಗಗಳನ್ನು ಬಳಸಿಕೊಂಡು ರಾಜ್ಯ ಸರಕಾರದ ಆಡಳಿತವನ್ನು ಕೇಂದ್ರ ಕಬ್ಜಾ ಮಾಡಿಕೊಂಡಿದ್ದು ವಾಸ್ತವವಾಗಿದೆ. ಪೊಲೀಸ್, ಕಾನೂನು ಮತ್ತು ಸುವ್ಯವಸ್ಥೆಗಳನ್ನು ಲೆಫ್ಟಿನೆಂಟ್ ಗವರ್ನರ್ ಮೂಲಕ ಕೇಂದ್ರ ಸರಕಾರದ ಸುಪರ್ದಿಗೆ ತಂದಿದ್ದರಿಂದ 1991ರಲ್ಲಿ ಅಂಗೀಕರಿಸಲಾದ ಕಾನೂನಿನ ಪ್ರಕಾರ, ದೆಹಲಿ ಸರಕಾರದ ಅಧಿಕಾರವು ತುಂಬಾ ಸೀಮಿತವಾಗಿದೆ. 2020ರಲ್ಲಿ ಆಪ್ ಅನ್ನು ಸೋಲಿಸಲು ಸಾಧ್ಯವಾಗದ್ದರಿಂದ ದೆಹಲಿ ಸರಕಾರ ಮತ್ತು ಸಚಿವಾಲಯದಿಂದ ಆಡಳಿತಾತ್ಮಕ ಸೇವೆಗಳ ನಿಯಂತ್ರಣವನ್ನು ಮೋದಿ ಸರಕಾರವು ಕುತ್ಸಿತ ಕ್ರಮದ ಮೂಲಕ ಕಿತ್ತುಕೊಂಡಿತು.

ಅಧಿಕಾರಿಗಳ ನೇಮಕ ಮತ್ತು ವರ್ಗಾವಣೆ ಅಧಿಕಾರವನ್ನು ಚಲಾಯಿಸಲು ಲೆಫ್ಟಿನೆಂಟ್ ಗವರ್ನರ್ ಆರಂಭಿಸಿದರು. ಆಡಳಿತಶಾಹಿಯು ಸಚಿವರ ಮಾತುಗಳನ್ನು ಕಡೆಗಣಿಸಿ ಲೆಫ್ಟಿನೆಂಟ್ ಗವರ್ನರ್‌ರ ನಿರ್ದೇಶನಗಳಿಗೆ ಕಾಯತೊಡಗಿತು. ದೆಹಲಿ ಸರಕಾರ, ಈ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಯಿತು. 2023ರ ಮೇ ತಿಂಗಳಲ್ಲಿ ನೀಡಿದ ತೀರ್ಪಿನಲ್ಲಿ ಉಪ ರಾಜ್ಯಪಾಲರ ಅಧಿಕಾರಗಳಿಗೆ ಬ್ರೇಕ್ ಹಾಕಿದ ಸುಪ್ರೀಂ ಕೋರ್ಟ್ ಸಾರ್ವಜನಿಕ ಸುವ್ಯವಸ್ಥೆ, ಪೊಲೀಸ್ ಮತ್ತು ಭೂಮಿ ವಿಚಾರ ಹೊರತುಪಡಿಸಿ ಉಳಿದೆಲ್ಲ ಆಡಳಿತಾತ್ಮಕ ಸೇವೆಗಳಲ್ಲಿ ದೆಹಲಿ ಸರಕಾರಕ್ಕೇ ನಿಯಂತ್ರಣವಿದೆ ಎಂದು ಸಾರಿತು. ಈ ತೀರ್ಪನ್ನು ಜೀರ್ಣಿಸಿಕೊಳ್ಳಲು ಆಗದ ಕೇಂದ್ರ ಗೃಹ ಸಚಿವರು, ಆಡಳಿತ ಸೇವೆಗಳನ್ನು ಉಪ ರಾಜ್ಯಪಾಲರ ವಶಕ್ಕೆ ಒಪ್ಪಿಸುವ ಸುಗ್ರೀವಾಜ್ಞೆಯೊಂದನ್ನು ತಕ್ಷಣವೇ ಹೊರಡಿಸಿದರು. ಅದನ್ನು ನಂತರ ರಾಷ್ಟ್ರ ರಾಜಧಾನಿ ವಲಯ ದೆಹಲಿ ಕಾನೂನಿನಲ್ಲಿ ತಿದ್ದುಪಡಿ ರೂಪದಲ್ಲಿ ಸೇರಿಸಲಾಯಿತು.

ಈ ಇಡೀ ಅವಧಿಯಲ್ಲಿ ಅಧಿಕಾರಿಗಳು ಸಚಿವರ ಮಾತು ಕೇಳದಿರುವುದು ಮಾತ್ರವಲ್ಲದೆ ಮಂತ್ರಿಗಳ ನಿರ್ದೇಶನಕ್ಕೆ ವಿರುದ್ಧವಾಗಿ ಕೆಲಸ ಮಾಡಿದ ಸನ್ನಿವೇಶವೂ ಅನಾವರಣಗೊಂಡಿತು.

ಲೆಫ್ಟಿನೆಂಟ್ ಗವರ್ನರ್ ಮತ್ತು ಹಿರಿಯ ಅಧಿಕಾರಿಗಳು ಶಾಮೀಲಾಗಿ ಸಚಿವರ ವಿರುದ್ಧ ಆರೋಪಗಳನ್ನು ರೂಪಿಸಿದರು. ಇದೆಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಹಿರಿಯ ಸಚಿವ, ಉಪ ಮುಖ್ಯಮಂತ್ರಿ ಮತ್ತು ಅಂತಿಮವಾಗಿ ಮುಖ್ಯಮಂತ್ರಿಯನ್ನೇ ಬಂಧಿಸಿ ಜೈಲಿಗಟ್ಟಲಾಯಿತು. ಕೇಂದ್ರ ಸರಕಾರ ಅಧಿಕಾರ ಕಿತ್ತುಕೊಂಡಿದ್ದರಿಂದ ನೀರು ಸರಬರಾಜಿನಂಥ ಅವಶ್ಯಕ ಸರಬರಾಜುಗಳು ಬಾಧಿತವಾದವು. ಉದಾಹರಣೆಗೆ, ಬಜೆಟ್ ಹಂಚಿಕೆಯಲ್ಲಿ ದೆಹಲಿ ಜಲ ಮಂಡಳಿಗೆ 3,000 ಕೋಟಿ ರೂಪಾಯಿಗಳನ್ನು ದೆಹಲಿ ಅಸೆಂಬ್ಲಿ 2024ರ ಫೆಬ್ರವರಿಯಲ್ಲಿ ಅನುಮೋದಿಸಿತ್ತು. ಇದು ಅಸೆಂಬ್ಲಿಯು ಕಾನೂನಾಗಿ ಮಂಜೂರು ಮಾಡಿದ ಬಜೆಟ್ ಹಂಚಿಕೆಯಾಗಿದೆ. ಆದರೂ ಈ ನಿಧಿ ಜಲ ಮಂಡಳಿಗೆ ಹೋಗುವುದನ್ನು ಹಣಕಾಸು ಕಾರ್ಯದರ್ಶಿ ತಡೆ ಹಿಡಿದರು. ದೆಹಲಿ ಸರಕಾರ ಈ ವಿಚಾರದಲ್ಲಿ ನ್ಯಾಯಕ್ಕಾಗಿ ಸರ್ವೋನ್ನತ ನ್ಯಾಯಾಲಯದ ಮೊರೆ ಹೋಗಬೇಕಾಯಿತು.


ಈ ರೀತಿಯಾಗಿ ಸರಕಾರ ಅಸ್ತವ್ಯಸ್ತಗೊಂಡಿದ್ದು ಮತ್ತು ಹಿರಿಯ ನಾಗರಿಕ ಸೇವಾ ಅಧಿಕಾರಿಗಳಿಂದ ನಡೆದ ಬುಡಮೇಲು ಕೃತ್ಯಗಳು ಆಪ್ ಸರಕಾರಕ್ಕೆ ಹೊರೆಯಾಯಿತು. ಮೋದಿ ಸರಕಾರ ನಡೆಸಿದ ಈ ಅಪರಾಧವನ್ನೇ ಬಿಜೆಪಿ ಈಗ ಲಾಭ ಮಾಡಿಕೊಂಡಿದೆ ಹಾಗೂ ಆಪ್ ತನ್ನ ಕಳಪೆ ಕಾರ್ಯನಿರ್ವಹಣೆಗೆ ಬೆಲೆ ತೆತ್ತಿದೆ.

ದೆಹಲಿಯ ಈ ಚುನಾವಣಾ ಹೋರಾಟವು ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲೆ ಹೇಯ ಆಕ್ರಮಣ ನಡೆಸುತ್ತಿರುವ ಬಿಜೆಪಿಯನ್ನು ಸೋಲಿಸುವ ನಿಟ್ಟಿನಲ್ಲಿ ಎಲ್ಲ ಜಾತ್ಯತೀತ ಪ್ರತಿಪಕ್ಷಗಳು ಒಗ್ಗಟ್ಟಾಗಲು ಒಂದು ವೇದಿಕೆಯಾಗಬಹುದೆಂದು ಭಾವಿಸಲಾಗಿತ್ತು. ಆದರೆ ಅದು ನಡೆಯಲಿಲ್ಲ. ಅಲ್ಲದೆ, ತನ್ನ ಪ್ರಚಾರವನ್ನು ಜನರ ನಡುವೆ ಬಲವಾಗಿ ತೆಗೆದುಕೊಂಡು ಹೋಗಲು ಆಪ್‌ಗೆ ಸಾಧ್ಯವಾಗಲೂ ಇಲ್ಲ.

ಈ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಧೋರಣೆಯನ್ನು ಇಂಡಿಯಾ ಕೂಟದ ಇತರ ಪಕ್ಷಗಳು ಟೀಕಿಸಿದ್ದು ಸರಿಯಾಗಿಯೇ ಇದೆ. ಕಾಂಗ್ರೆಸ್ ಚುನಾವಣೆ ಪ್ರಚಾರ ಆಪ್ ಅನ್ನು ಸೋಲಿಸುವುದು ಹಾಗೂ ಅದರ ನಾಯಕ ಅರವಿಂದ್ ಕೇಜ್ರಿವಾಲ್‌ರನ್ನು ಒಬ್ಬ ಭ್ರಷ್ಟ ವ್ಯಕ್ತಿ ಎಂದು ಬಿಂಬಿಸುವುದರ ಮೇಲೆಯೇ ಕೇಂದ್ರೀಕೃತವಾಗಿತ್ತು. ಈ ಪ್ರಚಾರಕ್ಕೆ ಸ್ವತಃ ರಾಹುಲ್ ಗಾಂಧಿಯೇ ನಾಂದಿ ಹಾಡಿದ್ದರು. ಅಷ್ಟು ಮಾತ್ರವಲ್ಲದೆ, ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಕೇವಲ 4.26% ಮತ ಗಳಿಸಿದ್ದ ಕಾಂಗ್ರೆಸ್ ಪಕ್ಷ, ಆಪ್‌ನೊಂದಿಗೆ ಯಾವುದೇ ಒಡಂಬಡಿಕೆಯಿಲ್ಲದಾಗ ಎಲ್ಲ 70 ಸ್ಥಾನಗಳಿಗೆ ಸ್ಪರ್ಧಿಸಬೇಕಿರಲಿಲ್ಲ. ಮತಗಳು ದೊಡ್ಡ ಪ್ರಮಾಣದಲ್ಲಿ ದೂರ ಸರಿದಿದ್ದು ಆಪ್ ಸೋಲಿಗೆ ಮುಖ್ಯ ಕಾರಣವೇನೋ ಹೌದು. ಆದರೆ, ಆಪ್ ಸೋತ 13 ಕ್ಷೇತ್ರಗಳಲ್ಲಿ ಅದರ ಪರಾಭವದ ಅಂತರಕ್ಕಿಂತ ಹೆಚ್ಚು ಮತಗಳನ್ನು ಕಾಂಗ್ರೆಸ್ ಗಳಿಸಿದೆ ಎನ್ನುವುದನ್ನು ಕೂಡ ಗಮನಿಸಬೇಕು. ಆಪ್ ನಾಯಕರಾದ ಕೇಜ್ರಿವಾಲ್, ಮನೀಶ್ ಸಿಸೋಡಿಯಾ, ಸೌರಭ್ ಭಾರದ್ವಾಜ್ ಇವರೆಲ್ಲರೂ ಕಾಂಗ್ರೆಸ್ ಗಳಿಸಿದ ಮತಕ್ಕಿಂತ ಕಡಿಮೆ ಅಂತರದಲ್ಲಿ ಸೋತಿದ್ದಾರೆ.

ದೆಹಲಿ ಸೋಲು ಜಾತ್ಯತೀತ ಪ್ರಜಾಪ್ರಭುತ್ವವಾದಿ ವಿಪಕ್ಷಕ್ಕೆ ನಿರಾಶೆ ಮೂಡಿಸಿದ್ದರೂ ಹೆಚ್ಚಾಗಿ ಬಡವರು ಮತ್ತು ಮಹಿಳೆಯರನ್ನೊಳಗೊಂಡು 44% ಮತದಾರರು ಆಪ್‌ಗೆ ಮತ ನೀಡಿದ್ದಾರೆ ಎನ್ನುವುದು ಸಮಾಧಾನದ ಸಂಗತಿಯಾಗಿದೆ.

ಅನು: ವಿಶ್ವ



ಒದಗಿಸುವುದು ಕೃಷಿ ಕ್ರಾಂತಿಯ ಕೇಂದ್ರ ಘೋಷಣೆಯಾಗಿ ಮುಂದುವರಿದರೂ, ಪ್ರಸ್ತುತ ಪರಿಸ್ಥಿತಿಯಲ್ಲಿ, ತಕ್ಷಣದ ಕ್ರಮಕ್ಕಾಗಿ ಬೇಡಿಕೆಗಳನ್ನು ಮಾಡಬೇಕಾಗಿದೆ. ಕೃಷಿ ಕೂಲಿಕಾರರ ಕೂಲಿ, ವಾಸಕ್ಕೆ ಮನೆ, ಕಂದಾಯ ಕಡಿತ, ಹಿಡುವಳಿದಾರರಿಗೆ ಶೇ.75 ರಷ್ಟು ಬೆಳೆ ಇಳುವರಿ, ಸಾಲ ಮನ್ನಾ, ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ, ಕೈಗೆಟುಕುವ ಸಾಲ, ನೀರಾವರಿ ಶುಲ್ಕ ಮತ್ತು ವಿದ್ಯುತ್ ಶುಲ್ಕದ ಕಡಿತವು ಎಲ್ಲಾ ವರ್ಗದ ರೈತರನ್ನು ಒಗ್ಗೂಡಿಸುತ್ತದೆ.

ಅಖಿಲ ಭಾರತ ಕಿಸಾನ್ ಸಭಾದ ಐವತ್ತು ವರ್ಷಗಳ ಇತಿಹಾಸವು ದೊಡ್ಡ ಹೋರಾಟದ ಇತಿಹಾಸವಾಗಿದೆ. ರಾಷ್ಟ್ರೀಯ ವಿಮೋಚನಾ ಚಳವಳಿಯಲ್ಲಿ ರೈತರನ್ನು ಸಜ್ಜುಗೊಳಿಸುವಲ್ಲಿ ಅದು ಪ್ರಮುಖ ಪಾತ್ರ ವಹಿಸಿತು. ಭೂಮಾಲೀಕರು, ದೊಡ್ಡ ಉದ್ಯಮಿಗಳು ಮತ್ತು ಏಕಸ್ವಾಮ್ಯ ಬಂಡವಾಳಶಾಹಿಗಳ ವಿರುದ್ಧದ ಹೋರಾಟದಲ್ಲಿ ದುಡಿಯುವ ರೈತರನ್ನು ಒಗ್ಗೂಡಿಸಿತು.

ಸ್ವಾತಂತ್ರ್ಯದ ನಂತರವೂ, ವಿವಿಧ ದಬ್ಬಾಳಿಕೆಗಳನ್ನು ಎದುರಿಸಿ ಬೆಳೆದು ರೈತರ ಪ್ರಮುಖ ಸಂಘಟನೆಯಾಗಿ ಹೊರಹೊಮ್ಮಿದೆ. ಇಂದಿನ ಪರಿಸ್ಥಿತಿಯಲ್ಲಿ, ನಾವು ಗ್ರಾಮ ಮಟ್ಟದಲ್ಲಿ ರೈತ ಸಂಘಗಳ ಶಾಖೆಗಳನ್ನು ರಚಿಸಿ ದೇಶಾದ್ಯಂತ ಕೃಷಿ ಕ್ರಾಂತಿಯ ಸಂದೇಶವನ್ನು ಹರಡಬೇಕಾಗಿದೆ. ದೇಶದ ಜನಸಂಖ್ಯೆಯ ಶೇ.70 ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಈ ಜನರನ್ನು ಸಜ್ಜುಗೊಳಿಸದೆ ಕೃಷಿ ಕ್ರಾಂತಿ ಯಶಸ್ವಿಯಾಗಲು ಸಾಧ್ಯವಿಲ್ಲ. ಕಾರ್ಮಿಕ ವರ್ಗದೊಂದಿಗೆ ಮೈತ್ರಿ ಮಾಡಿಕೊಂಡು ರೈತರ ಐಕ್ಯತೆಯನ್ನು ಬಲಪಡಿಸುವುದೇ ಗೆಲುವಿನ ಖಾತರಿ.

('The Marxist' Volume: 04, No. 2- April-June, 1986)

ಕನ್ನಡಕ್ಕೆ: ಸಿ.ಸಿದ್ದಯ್ಯ

ಬಗರ್ ಹುಕುಂ–ಅರಣ್ಯ ಸಾಗುವಳಿ ಭೂಮಿ, ಮನೆ–ನಿವೇಶನ, ರೈತ–ಕೂಲಿಕಾರರ ಹಕ್ಕುಗಳ ರಕ್ಷಣೆಗಾಗಿ, ಬಲವಂತದ ಭೂ ಸ್ವಾಧೀನ ಹಾಗೂ ಭೂ ಸಂಪತ್ತಿನ ಕಾರ್ಪೊರೇಟ್ ಲೂಟಿ ಹಿಮ್ಮೆಟ್ಟಿಸಲು, ರೈತ ಹಾಗೂ ಜನ ವಿರೋಧಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆ ವಿರೋಧಿಸಿ, ರಾಜ್ಯ ಸರಕಾರದ ಕರಾಳ ಕೃಷಿ, ಕಂದಾಯ ಹಾಗೂ ಭೂ ಸ್ವಾಧೀನ ಕಾಯ್ದೆಗಳ ರದ್ದತಿಗಾಗಿ, ಸಾಲಮನ್ನಾ ಹಾಗೂ ಕನಿಷ್ಟ ಬೆಂಬಲ ಬೆಲೆ ಹಕ್ಕು ಮುಂತಾದ ಹಲವು ಬೇಡಿಕೆಗಳಿಗಾಗಿ ಆಗ್ರಹಿಸಿ ಫೆಬ್ರವರಿ 10, 2025 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸಹಸ್ರಾರು ರೈತರು–ಕೃಷಿ ಕೂಲಿಕಾರರು ಪ್ರಾಂತ ರೈತ ಸಂಘ ಮತ್ತು ಅಖಿಲ ಭಾರತ ಕೃಷಿಕೂಲಿಕಾರರ ಸಂಘಗಳ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಎಲ್ಲ ಸಚಿವರು ಹಾಗೂ ಅಧಿಕಾರಿಗಳ ಸಭೆ ಕರೆಯುವ ಭರವಸೆಯೊಂದಿಗೆ ಫೆಬ್ರವರಿ 11 ರಂದು ಮುಕ್ತಾಯಗೊಳಿಸಿದರು. ಒಂದು ವರದಿ.

ರೈತ–ಕೃಷಿ ಕೂಲಿಕಾರರ ಬೃಹತ್ ವಿಧಾನಸೌಧ ಚಲೋ

ಭೂ ಸಂಪತ್ತಿನ ಕಾರ್ಪೊರೇಟ್ ಲೂಟಿ ಹಿಮ್ಮೆಟ್ಟಿಸಲು ಸಾಮೂಹಿಕ ಯಶಸ್ವಿ ಅನಿರ್ದಿಷ್ಟಾವಧಿ ಧರಣ



ಇದು ಬೆಂಗಳೂರಿನಲ್ಲಿ ಬೇಸಿಗೆ ಕಾವು ದಿನದಿನಕ್ಕೂ ಏರುತ್ತಿರುವ ಹೊತ್ತು. ಆದರೆ ಫೆಬ್ರವರಿ 10 ರಂದು ರಾಜ್ಯದ ನಾನಾ ಜಿಲ್ಲೆಗಳಿಂದ ಬಂದ ಸಹಸ್ರಾರು ರೈತರು–ಕೃಷಿಕೂಲಿಕಾರರು, ದುಡಿಯುವ ಜನರಿಗೆ ಕೆಂಬಾವುಟವೇ ತಂಪು ನೀಡುವ ನೆರಳಾಗಿತ್ತು. ಮರಗಳು ಹೊತ್ತು ನಿಂತ ಎಲೆಗಳನ್ನು ಉದುರಿಸುತ್ತಾ, ಸುತ್ತ ಮುತ್ತ ಎಲ್ಲೆಲ್ಲೂ ವಸಂತನ ಆಗಮನದ ಕುರುಹುಗಳು ಕಾಣುವ ಹೊತ್ತು. ಅದು ಕೆಂಬಾವುಟಗಳೇ ಮೇಲೆದ್ದು ನಿಂತು ಮರವಾಗುವ, ಎಲೆಯಂತಾಗುವ ಹೊತ್ತು ಆಗಿತ್ತು. ಬಂದವರಲ್ಲಿ ಬೇಡಿಕೆಗಳನ್ನು ಗೆಲ್ಲಬೇಕೆಂಬ ದೃಢ ನಿಶ್ಚಯವೂ ಇತ್ತು. ಸಾಮೂಹಿಕ ಧರಣ ನಡೆಯುತ್ತಿದ್ದ ಉದ್ಯಾನದಲ್ಲಿ ರೈತ–ಕೂಲಿಕಾರರ ಘೋಷಣೆಗಳು ಮೊಳಗುತ್ತಿತ್ತು.

ಮೊದಲಿಗೆ ಸಾಮೂಹಿಕ ಧರಣವನ್ನು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಡಾ. ವಿಜು ಕೃಷ್ಣನ್ ಉದ್ಘಾಟಿಸಿ ಮಾತನಾಡಿ ಹೋರಾಟದ ಪ್ರಮುಖ ಉದ್ದೇಶವೇನೆಂದು ವಿವರಿಸಿದರು. ಬೆಂಗಳೂರಿನಲ್ಲಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಭೆಯನ್ನು ನಡೆಸಲಾಗುತ್ತಿದೆ. ಅದಾನಿ, ಅಂಬಾನಿ, ಖೇಣಿಯಂತಹ ಬಂಡವಾಳಗಾರರಿಗೆ ಲಕ್ಷ ಲಕ್ಷ ಎಕರೆ ಭೂಮಿ ದಾನ ಮಾಡಲು ರಾಜ್ಯ ಸರಕಾರ ಸಿದ್ಧವಾಗಿದೆ. ಆದರೆ ದೇಶಕ್ಕೆ ಅನ್ನ ನೀಡುವ ರೈತರು–ಕೂಲಿಕಾರರಿಗೆ ಉಳುಮೆ ಭೂಮಿ, ಮನೆ ನಿವೇಶನಗಳ ಹಕ್ಕು, ಉದ್ಯೋಗ ಖಾತ್ರಿ ನೀಡಲು ಸರಕಾರ ಸಿದ್ಧವಿಲ್ಲ ಎಂದ ಡಾ. ವಿಜು ಹೋರಾಟದ ಪ್ರಧಾನ ವಿಷಯಗಳನ್ನು ಮಂಡಿಸಿದರು.

ರೈತರ ಆತ್ಮಹತ್ಯೆಗಳು ಎಂದೂ ಕಾಣದ ದುಸ್ಥಿತಿ

ನ್ಯಾಯವಾಗಿ ನರೇಂದ್ರ ಮೋದಿ ಸರಕಾರವು ಬಜೆಟ್‌ನಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿಗೆ 2.5 ಲಕ್ಷ ಕೋಟಿ ಕೊಡಬೇಕಿತ್ತು. ಆದರೆ ಕೇಲವ 86 ಸಾವಿರ ಕೋಟಿ ಕೊಟ್ಟಿದೆ. ಮೊದಲು ಇದ್ದ ಅನುದಾನದಲ್ಲೂ ಕಡಿತ ಮಾಡಿದೆ. ವರ್ಷಕ್ಕೆ 100 ದಿನ ಕೆಲಸ ಕೊಡಬೇಕು ಎಂಬ ಕಾನೂನಿದೆ. ಅದನ್ನು 200 ದಿನಕ್ಕೆ ಏರಿಸಬೇಕು. ಆದರೆ ದೇಶದ ಹಲವಾರು ಕಡೆ ವರ್ಷಕ್ಕೆ 20 ದಿನ, ಇನ್ನು ಕೆಲವು 40–50 ದಿನ ಮಾತ್ರ ಕೆಲಸ ಕೊಡುತ್ತಿದ್ದಾರೆ. ರೈತರಿಗೆ ಉತ್ಪಾದನಾ ವೆಚ್ಚ ಮತ್ತು ಜೊತೆಗೆ ಶೇ. 50 ಸೇರಿಸಿ ಬೆಂಬಲ ಬೆಲೆ ಕೊಡುವ ಭರವಸೆಯನ್ನು ಈಡೇರಿಸಿಲ್ಲ. ಭತ್ತಕ್ಕೆ ಬೆಂಬಲ ಬೆಲೆ ಉತ್ಪಾದನಾ ಖರ್ಚಿಗಿಂತಲೂ ಕಡಿಮೆ ಇದೆ. ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಸಾಯುತ್ತಾರೆ. ದೇಶದಲ್ಲಿ ರೈತರ–ಗೇಣಿದಾರರ, ಬಗರ್ ಹುಕುಂ ಸಾಗುವಳಿದಾರರ ಸಾಲ ಮನ್ನಾ ಮಾಡಬೇಕಿತ್ತು. ಮಾಡುತ್ತಿಲ್ಲ. ಕೇಳಿದರೆ ದುಡ್ಡು ಇಲ್ಲ ಎನ್ನುತ್ತಾರೆ. ಆದರೆ ಗೋಯಂಕಾ ಮುಂತಾದವರ 15 ಲಕ್ಷ ಕೋಟಿ ಸಾಲ ಮನ್ನಾ ಮಾಡಲಾಗಿದೆ. ರೈತರು–ಮಹಿಳೆಯರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. 1.12 ಲಕ್ಷ ರೈತರು, 3.25 ಲಕ್ಷ ವಲಸೆ ಕಾರ್ಮಿಕರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಭೂರಹಿತರು, ಆದಿವಾಸಿಗಳು ಮುಂತಾದವರ ಆತ್ಮಹತ್ಯೆಗಳು ಈ ಲೆಕ್ಕದಲ್ಲಿ ಸೇರಿಲ್ಲ. ಜಗತ್ತಿನ ಇತಿಹಾಸದಲ್ಲಿ ಎಂದೂ ಇಂತಹ ಪರಿಸ್ಥಿತಿ ಕಂಡು ಬಂದಿರಲಿಲ್ಲ. ರೈತರ ಆದಾಯ ಕುಸಿಯುತ್ತಿದೆ. ದೇಶದ ಆಹಾರ ಭದ್ರತೆಗೆ ಧಕ್ಕೆಯಾಗಿದೆ.

ರಾಜ್ಯದಲ್ಲಿ 2009 ರಿಂದ ಅರ್ಜಿ ಹಾಕಿ ಕಾಯುತ್ತಿರುವವರಿಗೆ ಭೂಮಿ ಹಕ್ಕು ಕೊಟ್ಟಿಲ್ಲ. ಕೇರಳದಲ್ಲಿ ಕಳೆದ 5–6 ವರ್ಷಗಳಲ್ಲಿ 5 ಲಕ್ಷಕ್ಕೂ ಹೆಚ್ಚು ಜನರಿಗೆ ಭೂಮಿ ಹಂಚಿಕೆ ಮಾಡಲಾಗಿದೆ. 'ಲೈಫ್ ಮಿಷನ್' ಯೋಜನೆ ಅಡಿ 5.5 ಲಕ್ಷ ಪಕ್ಕಾ ಮನೆ ನೀಡಲಾಗಿದೆ. ರಾಜ್ಯ ಸರಕಾರ 5 ಲಕ್ಷ ರೂ., ಕೇಂದ್ರ ಸರಕಾರ ಕೇವಲ 72 ಸಾವಿರ ನೀಡುವ ಈ ಯೋಜನೆಯಲ್ಲಿ ಕೇಂದ್ರ ಸರಕಾರವು ಮೋದಿಯವರ ಫೋಟೋ ಹಾಕಬೇಕೆಂದು ಹಠ ಮಾಡುತ್ತಿದೆ. ತೊಗರಿಗೆ ಕ್ವಿಂಟಲ್‌ಗೆ 12 ಸಾವಿರ ಬೆಂಬಲ ಬೆಲೆ ಕೊಡಿ ಎಂದರೆ, 7,500 ರೂ. ಮಾತ್ರ (ರಾಜ್ಯ ಸರಕಾರದಿಂದ 450 ರೂ.)ಕೊಡಲಾಗುತ್ತಿದೆ. ಉತ್ಪಾದನಾ ಖರ್ಚು ಸೇರಿಸಿ 14 ಸಾವಿರ ಕೊಡಬೇಕು. ಹತ್ತಿಗೆ 16.5 ಸಾವಿರ ಕೊಡಬೇಕು. ಸರಿಯಾಗಿ ಖರೀದಿಯೇ ನಡೆಯುತ್ತಿಲ್ಲ. ಬೆಳಗಾವಿಯಲ್ಲಿ ಖಾಸಗಿ ಕೃಷಿ ಮಾರುಕಟ್ಟೆ ಆರಂಭವಾಗಿದೆ. ಕೇಂದ್ರ ಬಿಜೆಪಿ ಸರಕಾರ 3 ಕರಾಳ ಶಾಸನ ತಂದಿತು. ಅದರ ವಿರುದ್ಧ ಒಂದು ವರ್ಷಕ್ಕೂ ಹೆಚ್ಚು ದಿನ ಹೋರಾಟ ನಡೆಯಿತು. 736 ಜನ ರೈತರು ಹುತಾತ್ಮರಾದರು. ಕಾಯ್ದೆ ಜಾರಿಗೆ ಬಂದರೆ ರೈತರಿಗೆ ಕೃಷಿ ಇಲ್ಲ. ಕೃಷಿ ಕಾರ್ಪೋರೇಟ್ ಕಂಪನಿಗಳ ಕೈಗೆ ಹೋಗುತ್ತದೆ. ಈ ಕಾಯ್ದೆಗಳ ವಿರುದ್ಧ ರೈತರು ಮಳೆ, ಚಳಿ, ಗಾಳಿ ಲೆಕ್ಕಿಸದೇ ಹೋರಾಟ ಮಾಡಿದರು. 56 ಇಂಚಿನ ಮೋದಿ ತಲೆಬಾಗಿ ಕ್ಷಮೆ ಕೇಳಬೇಕಾಯಿತು. ಆದರೆ ಬಿಜೆಪಿ ಸರಕಾರದ ಅದೇ ನೀತಿಯನ್ನು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಮುಂದುವರಿಸುತ್ತಿದೆ. ವಿದ್ಯುತ್ ಖಾಸಗೀಕರಣ ಮಾಡಲಾಗುತ್ತಿದೆ. ಸ್ಮಾರ್ಟ್ ಮೀಟರ್ ಅಳವಡಿಸಲಾಗುತ್ತಿದೆ. ಮೊದಲೇ ಹಣ ಪಾವತಿಸಿ ವಿದ್ಯುತ್ ಪಡೆಯಬೇಕಾಗುತ್ತದೆ. 1 ಹೆಕ್ಟೆರ್‌ನ 3 ಎಚ್.ಪಿ. ಪಂಪ್ ಸೆಟ್‌ಗೆ 10 ಸಾವಿರ ವಿದ್ಯುತ್ ಬಿಲ್ ಬರುತ್ತದೆ. ನೈಸ್ ಭೂಸ್ವಾಧೀನದ ವಿಷಯದಲ್ಲಿ ಸುಪ್ರಿಂ ಕೋರ್ಟ್ ತೀರ್ಪು ಕೊಟ್ಟರೂ ಭೂಮಿ ವಾಪಸ್ ಕೊಟ್ಟಿಲ್ಲ. 400 ಎಕರೆ ಬೇಕಾದ ಕಡೆ ಹತ್ತು ಪಟ್ಟು ಭೂಮಿ ಸ್ವಾಧೀನ ಮಾಡಿಕೊಳ್ಳಲಾಗಿದೆ. ಭೂಸ್ವಾಧೀನ ಮಾಡಿಕೊಳ್ಳಬೇಕಾದರೆ ರೈತರ ಒಪ್ಪಿಗೆ ಬೇಕಿಲ್ಲ, ರೈತರನ್ನು ಕೇಳಬೇಕಿಲ್ಲ ಎಂಬ ನೀತಿಯನ್ನು ಮತ್ತೆ ಹಿಂಬಾಗಿಲಿನಿಂದ ತರಲು ಹೊಸ ಕರಡು ಸಿದ್ದಪಡಿಸಲಾಗಿದೆ. ಕೃಷಿ ಮಾರುಕಟ್ಟೆ, ಬೆಂಬಲ ಬೆಲೆ ವ್ಯವಸ್ಥೆ ತೆಗೆದುಹಾಕಲು ಹೊರಟಿದ್ದಾರೆ. ಕಾಂಗ್ರೆಸ್ ಈ ಬಗೆಗೆ ಮಾತನಾಡುತ್ತಿಲ್ಲ ಎಂದರು.

'ಬುಲ್ಡೋಜರ್ ಬಾಬಾ'ನ ಭೂಸ್ವಾಧೀನಕ್ಕೆ ಕೆಂಬಾವುಟದ ತಡೆ

ಉತ್ತರ ಪ್ರದೇಶದ ಗ್ರೇಟರ್ ನೊಯ್ಡಾ ಯೋಜನೆಗೆ ಸಂಬಂಧಿಸಿ ಬಲವಂತದ ಭೂಸ್ವಾಧೀನದ ವಿರುದ್ಧ 130 ದಿನಗಳ ಹೋರಾಟ ಮಾಡಿ, ಬುಲ್ಡೋಜರ್ ಬಾಬಾನ ಭೂಸ್ವಾಧೀನಕ್ಕೆ ಕೆಂಬಾವುಟ ಭೂಸ್ವಾಧೀನಕ್ಕೆ ತಡೆ ಹಾಕಿದೆ.

ಹೋರಾಟಗಳನ್ನು ಬಲಿಷ್ಟಗೊಳಿಸೋಣ. 4 ಕಾರ್ಮಿಕ ವಿರೋಧಿ ಸಂಹಿತೆಗಳ ವಿರುದ್ಧ ಕಾರ್ಮಿಕರು ಮೇನಲ್ಲಿ ತೀವ್ರ ಹೋರಾಟಕ್ಕೆ ತೀರ್ಮಾನಿಸಿದ್ದಾರೆ. ಅದನ್ನು ಬೆಂಬಲಿಸಿ ಹರತಾಳ, ಮುಷ್ಕರ, ನಡೆಯಲಿದೆ. ಗೆಲ್ಲುವವರೆಗೆ ಹೋರಾಟ ಮಾಡೋಣ. ರೈತ–ಕೂಲಿಕಾರರ ಹೋರಾಟಕ್ಕೆ ಬೇರೆಯವರನ್ನೂ ಸೇರಿಸಿಕೊಂಡು ವರ್ಗ ಐಕ್ಯತೆ ಬೆಸೆಯೋಣ ಎಂದು ವಿಜು ಅವರು ಹೇಳಿದರು.

ಗುಡಿಸಲು ಕಟ್ಟಿಕೊಳ್ಳಲು ಭೂಮಿ ಇಲ್ಲ

ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ ಮಾತನಾಡಿ, ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಡಲು, ಕೈಗಾರಿಕೆ ಹೆಸರಿನಲ್ಲಿ ಭೂಮಿ ಪಡೆದು ಮಜಾ ಮಾಡುವವರಿಗೆ ಕೊಡಲು ಭೂಮಿ ಇದೆ. ಗುಡಿಸಲು ಕಟ್ಟಿಕೊಳ್ಳುವವರಿಗೆ ಕೊಡಲು ಭೂಮಿ ಇಲ್ಲ. ಉಳುಮೆ ಮಾಡುವ ರೈತರು–ಕೂಲಿಕಾರರಿಗೆ ಕೊಡಲು ಭೂಮಿ ಇಲ್ಲ ಎಂಬುದು ಯಾವ ನ್ಯಾಯ ಎಂದು ಆಕ್ಷೇಪಿಸಿದರು.

'ರಿಯಲ್ ಎಸ್ಟೇಟ್ ಮೀಟ್'

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಬಿ. ವೆಂಕಟ್ ಅವರು ಮಾತನಾಡಿ, ರಾಜ್ಯದಲ್ಲಿ ನಡೆಯುತ್ತಿರುವುದು 'ಬಂಡವಾಳ ಹೂಡಿಕೆದಾರರ ಸಮಾವೇಶ' ಅಲ್ಲ, ಅದು 'ರಿಯಲ್ ಎಸ್ಟೇಟ್‌ದಾರರ ಸಮಾವೇಶ'. ಕೈಗಾರಿಕೆ, ರಸ್ತೆ, ವಿಮಾನ ನಿಲ್ದಾಣ ಬೇರೆ ಬೇರೆ ಹೆಸರಿನಲ್ಲಿ ಭೂಮಿ ಕಿತ್ತುಕೊಳ್ಳುತ್ತಾರೆ ಎಚ್ಚರ.. ಎಂದರು. 1976 ರಿಂದ ಉಳುಮೆ ಮಾಡುತ್ತಿರುವ ಭೂಮಿಗೂ ಹಕ್ಕು ನೀಡುತ್ತಿಲ್ಲ, ಪ್ರತಿ ಕುಟುಂಬಕ್ಕೆ 2 ಎಕರೆ ಭೂಮಿ ನೀಡಬೇಕು ಎಂದ ವೆಂಕಟ್ ಅವರು ರಾಜ್ಯದಲ್ಲಿ 3 ಕೋಟಿ ಎಕರೆ ಸಾಗುವಳಿ ಭೂಮಿ ಇದೆ. ದೇಶದಲ್ಲಿ 40 ಕೋಟಿ ಎಕರೆ ಇದೆ. 17 ಕೋಟಿ ಹಿಡುವಳಿ ಇವೆ. ಅಮೆರಿಕ ರಷ್ಯಾ ನಂತರ ಭಾರತ ಮೂರನೇ ಸ್ಥಾನದಲ್ಲಿದೆ. ಅಮೆರಿಕಾ ರಷ್ಯಾದಂತಹ ಹಲವಾರು ದೇಶಗಳಲ್ಲಿ ಎಲ್ಲ ಕಾಲದಲ್ಲಿ ಬೆಳೆ ಬೆಳೆಯಲಾಗುವುದಿಲ್ಲ. ಎಲ್ಲ ಬೆಳೆಗಳನ್ನು ಬೆಳೆಯಲಾಗುವುದಿಲ್ಲ. ಆದರೆ ನಮ್ಮಲ್ಲಿ ವರ್ಷದ 365 ದಿನವೂ ಬೆಳೆ ಬೆಳೆಯುವ ಭೂಮಿ ಇದೆ. ಈ ಭೂಮಿಯ ಮೇಲೆ ಪ್ರಪಂಚದ ಬಂಡವಾಳಗಾರರ ಕಣ್ಣು ಬಿದ್ದಿದೆ. ಕೇರಳದಲ್ಲಿ ಹೊಸ ರೇಷನ್ ಕಾರ್ಡ್ ಕೊಟ್ಟು 12 ಅಗತ್ಯ ವಸ್ತುಗಳನ್ನು ಕೊಡಲಾಗುತ್ತಿದೆ. ಕರ್ನಾಟಕ ಸರಕಾರದಲ್ಲಿ ಅಧಿಕಾರ ಡಿ.ಕೆ. ಶಿವಕುಮಾರ್ ಕೈಯಲ್ಲಿ ಇದೆ. ಭೂ ಸ್ವಾಧೀನ ನಡೆಯುತ್ತಿರುವುದು ಭೂ ಬಕಾಸುರರಿಗಾಗಿ, ಕೈಗಾರಿಕೆಗಾಗಿ ಅಲ್ಲ. 100 ಎಕರೆ ಭೂಮಿ ಬೇಕಾದರೆ 1,000 ಎಕರೆ ಕಿತ್ತುಕೊಳ್ಳುತ್ತಾರೆ. 1,000 ಎಕರೆ ಬೇಕಾದರೆ 10,000 ಎಕರೆ ಕಿತ್ತುಕೊಳ್ಳುತ್ತಾರೆ. ನಮ್ಮ ಭೂಮಿಯನ್ನೇ ನಮ್ಮ ಬ್ಯಾಂಕಿನಲ್ಲಿ ಅಡವಿಟ್ಟು, ಬ್ಯಾಂಕಿನಲ್ಲಿರುವ ನಮ್ಮದೇ ಹಣವನ್ನು ಪಡೆದು ಉದ್ದಿಮೆ ಮಾಡುತ್ತೇವೆ ಎನ್ನುತ್ತಾರೆ. ಟ್ರಂಪ್ ಅಮೆರಿಕದಿಂದ ಭಾರತೀಯರಿಗೆ ಕೈಕೋಳ ಹಾಕಿ ವಾಪಸ್ ಕಳಿಸುತ್ತಿದ್ದಾನೆ. ಅಂತಹ ದೇಶದ ಬಂಡವಾಳಗಾರರು ಇಲ್ಲಿ ಭೂಮಿ ವಶಕ್ಕೆ ಬರುತ್ತಿದ್ದಾರೆ. ಸ್ವಾತಂತ್ರ್ಯ ಉದ್ಯಾನ ಮೊದಲಿಗೆ



ಜೈಲಾಗಿತ್ತು. ಇಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ತುರ್ತು ಪರಿಸ್ಥಿತಿ ವಿರುದ್ಧದ ಹೋರಾಟಗಾರರನ್ನು ಇರಿಸಲಾಗಿತ್ತು. ಅಂತಹ ಹೋರಾಟದಿಂದ ಸ್ಪೂರ್ತಿ ಪಡೆಯೋಣ ಎಂದರು.

ಸಂವಿಧಾನ ಗೌರವಿಸುವುದು ಎಂದರೆ...

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿಯವರು ಸಂವಿಧಾನ ಕಾಪಾಡಬೇಕು ಎನ್ನುತ್ತಾರೆ. ಸಂವಿಧಾನ ಕಾಪಾಡುವುದು ಎಂದರೆ ಭೂಮಿ ರಕ್ಷಣೆ ಮಾಡುವುದು. ಬಡತನ ನಿವಾರಣೆ ಮಾಡುವುದು. ಅಂಬೇಡ್ಕರ್ ಅವರು ಭೂ ಸಂಪತ್ತು ಕೆಲವರ ಕೈಯಲ್ಲಿ ಕೇಂದ್ರೀಕರಣ ಆಗಬಾರದು ಎಂದಿದ್ದಾರೆ. ಸಮಾಜದಲ್ಲಿ ಜನರಿಗೆ ಸ್ವಾವಲಂಬನೆ ಸಾಧ್ಯವಾಗಬೇಕಾದರೆ, ಗೌರವ ಸಿಗಬೇಕಾದರೆ, ಅಸ್ಪೃಶ್ಯತೆ ಹೋಗಬೇಕಾದರೆ ಒಂದೋ ಒಳ್ಳೆಯ ಉದ್ಯೋಗ ಇರಬೇಕು, ಇಲ್ಲಾ ಭೂಮಿ ಇರಬೇಕು. ರಾಜ್ಯದಲ್ಲಿ ಬಿಜೆಪಿ ಸರಕಾರದ ಮತಾಂಧ ನೀತಿಯನ್ನು ತಿರಸ್ಕರಿಸಿ ಜನರು ಕಾಂಗ್ರೆಸ್ ಸರಕಾರಕ್ಕೆ ಮತ ನೀಡಿದ್ದಾರೆ. ಸರಕಾರ ಭೂಮಿ ಇಲ್ಲದವರಿಗೆ 2 ಎಕರೆ ಭೂಮಿ ಕೊಡಬೇಕು ಎಂದು ಬಿ. ವೆಂಕಟ್ ಆಗ್ರಹಿಸಿದರು.

ಪ್ರಾಂತ ರೈತ ಸಂಘದ ಬೆಂಗಳೂರು ಅಧ್ಯಕ್ಷರಾದ ವೆಂಕಟಾಚಲಯ್ಯ ಮಾತನಾಡಿ, ನೈಸ್ ಕಂಪನಿಯ ಖೇಣಿ ರಿಯಲ್ ಎಸ್ಟೇಟ್ ದಂಧೆಗಾಗಿ ಅತಿ ಹೆಚ್ಚು ಭೂಮಿಯನ್ನು ವಶಕ್ಕೆ ಪಡೆದ. ಈಗ ಬೆಂಗಳೂರು ಪೆರಿಪೆರಿಯಲ್ 300 ಅಡಿ ರಸ್ತೆ ಹೆಸರಿನಲ್ಲಿ 25 ಸಾವಿರ ಎಕರೆ ಭೂಮಿ ವಶಕ್ಕೆ ಪಡೆಯಲಾಗಿದೆ. ಪರಿಹಾರ ಕೊಡುವುದಿಲ್ಲ. ಶೇ.50/50 ಅನುಪಾತದಲ್ಲಿ ನಿವೇಶನ ಕೊಡುವುದಾಗಿ ಹೇಳುತ್ತಾರೆ. ಎಕರೆಗೆ 9 ನಿವೇಶನವೂ ಸಿಗುವುದಿಲ್ಲ. ಅದು ಯಾವಾಗ ಸಿಗುತ್ತದೋ ಖಚಿತವಿಲ್ಲ. ಹೊರವಲಯದಲ್ಲಿ ಖಾತೆ ಆಗಿರುವ, ಅಧಿಕೃತವಾಗಿ ವಿದ್ಯುತ್ ಸಂಪರ್ಕ ನೀಡಿರುವ ನಿವೇಶನ ಮನೆಗಳನ್ನು ರಸ್ತೆ ಹೆಸರಿನಲ್ಲಿ ಕಿತ್ತುಕೊಳ್ಳಲಾಗುತ್ತಿದೆ ಎಂದರು.

ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಯು. ಬಸವರಾಜ ಅವರು ಮಾತನಾಡಿ, ಬಗರ್ ಹುಕುಂ ಸಾಗುವಳಿ ಪ್ರಶ್ನೆಯಲ್ಲಿ ಸರಕಾರವು ಅರ್ಜಿ ನಮೂನೆ 50, 53, 57 ಅನ್ನು ಹಾಕಿರುವ ರೈತರಿಗೆ ಭೂಮಿ ಹಕ್ಕು ನೀಡದೇ ತಿರಸ್ಕರಿಸುತ್ತಿರುವುದನ್ನು ನಾವು ಒಪ್ಪುವುದಿಲ್ಲ. ಅರ್ಜಿಗಳನ್ನು ಪುರಸ್ಕರಿಸಬೇಕು. ರಾಜ್ಯದಲ್ಲಿ 18 ಲಕ್ಷ ಜನರು ವಸತಿ ಹೀನರಿದ್ದಾರೆ. ಅವರಿಗೆ ಮನೆ ನಿವೇಶನಗಳನ್ನು ನೀಡಬೇಕು ಎಂದು ಒತ್ತಾಯಿಸಿದರು. ಕೇರಳದಲ್ಲಿ ಪಕ್ಕಾ ಮನೆ ಜೊತೆಗೆ 2.5 ಗುಂಟೆ ಜಾಗವನ್ನು ಕೊಡಲಾಗುತ್ತಿದೆ. ಇ.ಎಂ. ಎಸ್. ನಂಬೂದರಿಯವರ ಆಡಳಿತ ಕಾಲದಲ್ಲಿ ಕುಟುಂಬಕ್ಕೆ 7.5 ಸೆಂಟ್ ಭೂಮಿ ನೀಡಲಾಗಿತ್ತು. ಈಗ ಒಂದು ಎಕರೆ ಭತ್ತಕ್ಕೆ 20 ಸಾವಿರ ರೂಪಾಯಿ ಸಹಾಯಧನ, ಪಂಚಾಯಿತಿಗಳಿಂದ 1,000 ರೂಪಾಯಿ ಪ್ರೋತ್ಸಾಹಧನ, ವಯಸ್ಸಾದವರಿಗೆ ಪಿಂಚಣಿ, 1.5 ರಿಂದ 2 ಲಕ್ಷ ಕಲ್ಯಾಣ ನಿಧಿ



ಇತ್ಯಾದಿ ನೀಡಲಾಗುತ್ತಿದೆ.

ಮತ್ತೊಂದೆಡೆ ರಾಜ್ಯದಲ್ಲಿ ಬ್ರಹ್ಮಣೀಸ್, ಮಿತ್ತಲ್, ಎಂ.ಎನ್.ಡಿ.ಸಿ., ಮುಂತಾದ ಕಂಪನಿಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ಭೂಮಿ ಕಿತ್ತುಕೊಳ್ಳಲಾಗಿದೆ. ಜಿಂದಾಲ್ ಕಂಪನಿಗೆ 25 ಸಾವಿರ ಎಕರೆ ಭೂಮಿಯನ್ನು ನೀಡಲಾಗಿದೆ. ಎಕರೆಗೆ 1 ರಿಂದ 2 ಕೋಟಿ ಬೆಲೆ ಇರುವ ಭೂಮಿಯನ್ನು ಎಕರೆಗೆ ಕೇವಲ 36 ಸಾವಿರ ರೂಗಳಿಗೆ ಅತ್ಯಂತ ಅಗ್ಗವಾಗಿ ನೀಡಲಾಗಿದೆ. ಇಂತಹವರಿಗೆ ಸರಕಾರ ಸಹಾಯಧನ, ಬಡ್ಡಿರಹಿತ ಸಾಲ ಇತ್ಯಾದಿ ನೀಡುತ್ತದೆ. ಗಣಿಗಾರಿಕೆಗೆ ಭೂಮಿ ನೀಡುತ್ತದೆ ಎಂದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚೆನ್ನರಾಯಪಟ್ಟಣದ 13 ಹಳ್ಳಿಗಳ ರೈತರ ಭೂಮಿ, ದೇವನಹಳ್ಳಿ, ಹೊಸಕೋಟೆ ಮುಂತಾದ ಕಡೆಗಳಲ್ಲಿ ಸುಮಾರು 50 ಸಾವಿರ ಎಕರೆ ಭೂಮಿ ವಶಕ್ಕೆ ಪಡೆಯಲು ಹೊರಟಿದ್ದಾರೆ. ಕಾಂಗ್ರೆಸ್ ಮುಖಂಡ ಕೆ.ಸಿ.ಕೊಂಡಯ್ಯ ಅವರಿಗೆ 6 ಹಳ್ಳಿಗಳ 1400 ಎಕರೆ ಭೂಮಿ ನೀಡಿ 35 ವರ್ಷವಾದರೂ ಅಲ್ಲಿ ಇನ್ನೂ ಫ್ಯಾಕ್ಟರಿ ಹಾಕಿಲ್ಲ. ಮಿತ್ತಲ್ ಕಂಪನಿಗೆ 2010 ರಲ್ಲಿ ಭೂ ಸ್ವಾಧೀನ ಮಾಡಿಕೊಟ್ಟಿದ್ದರೂ ಇನ್ನೂ ಕಾಂಪೌಂಡ್ ಕೂಡ ಕಟ್ಟಿಲ್ಲ. ಭೂಸುಧಾರಣಾ ಕಾಯ್ದೆಯನ್ನು ತಿದ್ದುಪಡಿ ಮಾಡಿ 25 ಲಕ್ಷ ಆದಾಯ ಇರುವವರೂ ಭೂಮಿ ಖರೀದಿ ಮಾಡಬಹುದು ಎಂದು ಮಾಡಿದರು. ಯಡಿಯೂರಪ್ಪನವರು ಇನ್ನೂ ಮುಂದೆ ಹೋಗಿ ಯಾರಾದರೂ ಭೂಮಿ ಖರೀದಿ ಮಾಡಬಹುದು ಎಂದು ತಿದ್ದುಪಡಿ ಮಾಡಿದರು. ಇದರಿಂದ ವ್ಯವಸಾಯ ಮಾಡದವರ ಕೈಗೆ ಭೂಮಿ ಹೋಗುತ್ತಿದೆ. ಕಂಪನಿ ಬೇಸಾಯದ ಕುತಂತ್ರ ಇದು ಎಂದರು. ರೈತ ವಿರೋಧಿ ಭೂಸ್ವಾಧೀನ ಕಾಯ್ದೆ, ಗೋಹತ್ಯಾ ನಿಷೇಧ ಕಾಯ್ದೆ ವಾಪಸಾಗಬೇಕು. ಇದಲ್ಲದೇ ಅರಣ್ಯ ಇಲಾಖೆಯ ಪೋಲಿಸರು ರೈತರ ಮೇಲೆ ಹಲ್ಲೆ ದೌರ್ಜನ್ಯ ನಡೆಸುತ್ತಿದ್ದಾರೆ, ಅದು ತಪ್ಪಬೇಕು ಎಂದೂ ಬಸವರಾಜ್ ಆಗ್ರಹಿಸಿದರು.

ಬೇಡಿಕೆ ಈಡೇರುವವರೆಗೆ ಧರಣ ಬಿಟ್ಟು ಏಳುವುದಿಲ್ಲ

ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ ಮಾತನಾಡಿ, ಪೆರಿಪೆರಿಯಲ್ ರಿಂಗ್ ರಸ್ತೆ ಹೆಸರಿನಲ್ಲಿ 20 ವರ್ಷದ ಹಿಂದೆ ಅಧಿಸೂಚನೆ ಹೊರಡಿಸಿ ಈಗ ಭೂಮಿ ಕೇಳುತ್ತಿದ್ದಾರೆ. ಇದು ಅನ್ಯಾಯ. ತುಮಕೂರಿನಲ್ಲಿ ಅರಣ್ಯ ಇಲಾಖೆಯವರು ರೈತರ ಮೇಲೆ ಹಲ್ಲೆ ಮಾಡಿದ್ದಾರೆ. ಶ್ರೀನಿವಾಸಪುರದಲ್ಲಿ 200 ವರ್ಷಗಳ ಹಿಂದೆ ಹಿಂದಿನ ದಾಖಲೆ ನೆಪದಲ್ಲಿ ಬೆಳೆಗೆ ಹಾನಿ ಮಾಡಲಾಗಿದೆ. ಇಂತಹ ಅನ್ಯಾಯಗಳನ್ನು ಸರಿಪಡಿಸಿ, ರೈತ ಕೂಲಿಕಾರರ ಬೇಡಿಕೆಗಳ ಬಗೆಗೆ ಸರಕಾರ ಲಿಖಿತ ಭರವಸೆ ನೀಡುವವರೆಗೆ ಧರಣ ಬಿಟ್ಟು ಏಳುವುದಿಲ್ಲ ಎಂದರು.

ಭ್ರಷ್ಟಾಚಾರ ಹತ್ತಿಕ್ಕಿ

ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಎಂ.ಪಿ. ಮುನಿವೆಂಕಟಪ್ಪ ಅವರು ಮಾತನಾಡಿ ತಾಲ್ಲೂಕು ಕಚೇರಿಗಳಲ್ಲಿ ಭೂಮಿ ದಾಖಲೆಗಳೆಲ್ಲವನ್ನೂ ಕಂಪ್ಯೂಟರೀಕರಣ ಮಾಡುತ್ತಿದ್ದೇವೆ ಎನ್ನುತ್ತಿದ್ದಾರೆ. ಅದು ಉಳುವವರಿಗೆ ಭೂಮಿ ಕೊಡಲು ಅಲ್ಲ. ಬಂಡವಾಳಗಾರರಿಗೆ ಭೂಮಿ ಕೊಡಲು ಎಂದರು. ಈಗಿನ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರ ತಂದೆ ಸಿ. ಭೈರೇಗೌಡ ಪ್ರಾಂತ ರೈತ ಸಂಘದ ಮುಖಂಡರಾಗಿದ್ದು, ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಜೋಡಿದಾರಿ ಪದ್ಧತಿಯ ವಿರುದ್ಧದ ರೈತಪರ ಹೋರಾಟದಿಂದ ಶಾಸಕರೂ ಆಗಿದ್ದರು ಎಂದು ನೆನಪಿಸಿದ ಮುನಿವೆಂಕಟಪ್ಪ ಅವರು ಕಂದಾಯ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು ಹತ್ತಿಕ್ಕಿ ರೈತರು ಕೂಲಿಕಾರರ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಅನ್ನದಲ್ಲೂ ಲಾಭ ಮಾಡಿಕೊಳ್ಳಲು ಬಂದಿದ್ದಾರೆ

ಡಾ. ಅನಿಲ್ ಕುಮಾರ್ ಅಳುವಪ್ಪ ಅವರು ಮಾತನಾಡಿ ಪ್ರಸ್ತುತ ಬೀಜ, ಗೊಬ್ಬರ, ಮುದ್ದು, ಪಂಪ್‌ಸೆಟ್ ಮೋಟಾರು, ಕೇಬಲ್, ವಿದ್ಯುತ್ ಎಲ್ಲವು ಕಂಪನಿಗಳ ವಶದಲ್ಲಿವೆ. ಈ ಕ್ಷೇತ್ರದಲ್ಲಿ ಈಗ ಕಡಿಮೆ. ಹೀಗಾಗಿ ಈಗ ಬಂಡವಾಳಗಾರರು ಅನ್ನದಲ್ಲೂ ಲಾಭ ಮಾಡಿಕೊಳ್ಳಲು ಬಂದಿದ್ದಾರೆ. ಎಚ್ಚರಿಕೆ ವಹಿಸಬೇಕು ಎಂದರು.

ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಪುಟ್ಟಮಾದು ಹಾಗೂ ವೆಂಕಟಾಚಲಯ್ಯ ಅಧ್ಯಕ್ಷತೆ ವಹಿಸಿದ್ದರು. ಪುಟ್ಟಮಾದು ಅವರು ಮಾತನಾಡಿ ಉದ್ಯೋಗ ಖಾತ್ರಿ ಯೋಜನೆಯಿಂದ 12 ಲಕ್ಷ ಕುಟುಂಬಗಳನ್ನು ಹೊರಗಿಡಲಾಗಿದೆ. ಆಧಾರ್ ಕಾರ್ಡ್ ಆಧಾರದಲ್ಲಿ ವೇತನ ಪಾವತಿ ಎಂಬ ನೀತಿ ಸಮಸ್ಯೆ ತಂದಿದೆ. ಅದನ್ನು ನಾವು ಒಪ್ಪುವುದಿಲ್ಲ. ಪೋಟೋ ಸಹಿತ ದಿನಕ್ಕೆರಡು ಬಾರಿ ಹಜರಾತಿ ಕೊಡಬೇಕೆಂಬ ನೀತಿ ಹೋಗಬೇಕು. ಸಮಯಕ್ಕೆ ಸರಿಯಾಗಿ ಕೂಲಿ ಕೊಡಬೇಕು, 94ಸಿ ಹಾಗೂ 94ಸಿಸಿ ಅಡಿಯಲ್ಲಿ ವಾಸದ ಮನೆ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿರುವ ಬಡವರಿಗೆ ಹಕ್ಕು ಪತ್ರ ನೀಡಬೇಕು ಎಂದು ಆಗ್ರಹಿಸಿದರು. ಆರಂಭದಲ್ಲಿ ಪ್ರಾಂತ ರೈತ ಸಂಘದ ರಾಜ್ಯ ಮುಖಂಡರಾದ ಎಚ್.ಆರ್. ನವೀನ ಕುಮಾರ್, ದವಲ್ ಸಾಬ್ ನದಾಫ್ ಅವರು ಕಾರ್ಯಕ್ರಮ ನಿರೂಪಿಸಿದರು. ಮಲ್ಲಮ್ಮ ಕೋಡ್ಲೆ ಮುಂತಾದ ಸಂಗಾತಿಗಳು ಕ್ರಾಂತಿಗೀತೆಗಳನ್ನು ಹಾಡಿದರು.

ವರದಿ: **ಆರ್. ರಾಮಕೃಷ್ಣ**



ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಮಾತುಕತೆಗೆ ಒಪ್ಪಿಗೆ ಫೆ-24 ರಂದು ಶಾಸಕರ ಮನೆ ಮುಂದೆ ಪ್ರತಿಭಟನೆ

ಮೊದಲ ದಿನದ ಹೋರಾಟದ ಸಂದರ್ಭದಲ್ಲಿಯೇ ರಾಜ್ಯದ ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆಯ ಕಾರ್ಯದರ್ಶಿಗಳು ಧರಣ ಸ್ಥಳಕ್ಕೆ ಬಂದು ಚಳುವಳಿಗಾರರೊಂದಿಗೆ ಚರ್ಚಿಸಿ, ತಮ್ಮ ಇತಿಮಿತಿಯಲ್ಲಿ ತಾವೇ ಪರಿಹರಿಸಬಹುದಾದ ಸಮಸ್ಯೆಗಳನ್ನು ಪರಿಹರಿಸುವುದಾಗಿ ಭರವಸೆ ನೀಡಿದ್ದರು. ಫೆಬ್ರವರಿ 11 ರಂದು ಚಳುವಳಿಯ ಎರಡನೆಯ ದಿನ ಮುಖ್ಯಮಂತ್ರಿಗಳ ಪರವಾಗಿ, ಸರಕಾರದ ಕಡೆಯಿಂದ ಉನ್ನತ ಹಂತದಲ್ಲಿ ಇತ್ಯರ್ಥವಾಗಬೇಕಾದ ಸಮಸ್ಯೆಗಳು ಹಾಗೂ ನೀತಿ ನಿರೂಪಣೆಗಳ ಸಂಬಂಧ ಸ್ವತಃ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಎಲ್ಲ ಇಲಾಖೆಗಳ ಸಚಿವರು ಹಾಗೂ ಹಿರಿಯ ಅಧಿಕಾರಿಗಳ ಸಭೆ ಕರೆಯುವುದಾಗಿ, ಸಮಸ್ಯೆಗಳನ್ನು ಪರಿಹರಿಸುವ ಸಂಬಂಧ ಚರ್ಚೆ ಏರ್ಪಡಿಸುವುದಾಗಿ ಸ್ಪಷ್ಟವಾದ ಭರವಸೆ ಸಿಕ್ಕ ಹಿನ್ನೆಲೆಯಲ್ಲಿ ಫೆಬ್ರವರಿ 11ರ ಸಂಜೆ ರೈತ-ಕೂಲಿಕಾರರ ಅನಿರ್ದಿಷ್ಟಾವಧಿ ಸಾಮೂಹಿಕ ಧರಣವನ್ನು ವಾಪಸ್ ಮುಕ್ತಾಯಗೊಳಿಸಲಾಯಿತು. ಇದೇ ಸಮಯದಲ್ಲಿ ಸರಕಾರವು ರೈತ-ಕೂಲಿಕಾರರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸುವಂತೆ ಆಗ್ರಹಿಸಲು ಫೆಬ್ರವರಿ 24, 2025 ರಂದು ರಾಜ್ಯವ್ಯಾಪಿಯಾಗಿ ಎಲ್ಲ ಶಾಸಕರ ಮನೆಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲು ಸಹ ನಿರ್ಧರಿಸಲಾಯಿತು.

ಆನಂದ ವಿಕಟನ್ ವೆಬ್‌ಸೈಟ್ ಮೇಲಿನ ನಿರ್ಬಂಧ: ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಸರ್ವಾಧಿಕಾರಿ ದಾಳಿ

ಫೆಬ್ರವರಿ 17, 2025; ಪ್ರಧಾನಿ ಮೋದಿ ಅವರ ಕಾರ್ಟೂನ್ ಬಗ್ಗೆ ಬಿಜೆಪಿ ದೂರು ನೀಡಿದ ನಂತರ ತಮಿಳು ಡಿಜಿಟಲ್ ನಿಯತಕಾಲಿಕೆಯ ವೆಬ್‌ಸೈಟ್ 'ನಿರ್ಬಂಧಿಸಲಾಗಿದೆ' ಎಂದು ವರದಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎದುರು ಕೈಗಳನ್ನು ಸರಪಳಿಯೊಂದಿಗೆ ಕುಳಿತಿರುವುದನ್ನು ಚಿತ್ರಿಸುವ ತಮಿಳು ಡಿಜಿಟಲ್ ನಿಯತಕಾಲಿಕೆಯ ಕಾರ್ಟೂನ್ ವಿರುದ್ಧ ತಮಿಳುನಾಡಿನ ಬಿಜೆಪಿ ದೂರು ನೀಡಿದ ನಂತರ ಹಲವಾರು ಬಳಕೆದಾರರು ಆ ತಮಿಳು ಡಿಜಿಟಲ್ ನಿಯತಕಾಲಿಕೆಯ ವೆಬ್ ಸೈಟ್ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ ಎಂದು ದೂರಿದ್ದಾರೆ.

ಟ್ರಂಪ್ ಆಡಳಿತವು ಭಾರತೀಯ ವಲಸಿಗರನ್ನು ಕೈಕೋಳ ಮತ್ತು ಸರಪಳಿಗಳಲ್ಲಿ ಗಡೀಪಾರು ಮಾಡಿದ ಬಗ್ಗೆ ಮೋದಿ ಅವರ ಮೌನವನ್ನು ಈ ಕಾರ್ಟೂನ್ ಸ್ಪಷ್ಟವಾಗಿ ಟೀಕಿಸಿದೆ. ಈ ಚಿತ್ರ ವ್ಯಾಪಕವಾಗಿ ಹಂಚಿಕೆಯಾಗುತ್ತಿದೆ.

ತಮಿಳುನಾಡು ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ, ಎಕ್ಸ್ ನಲ್ಲಿ ಮಾಡಿದ ಪೋಸ್ಟ್ ಒಂದರಲ್ಲಿ, ಬಿಜೆಪಿಯ ರಾಜ್ಯ ಘಟಕವು ಭಾರತದ ಪತ್ರಿಕಾ ಮಂಡಳಿ ಮತ್ತು ಮಾಹಿತಿ ಮತ್ತು ಪ್ರಸಾರ ರಾಜ್ಯ ಸಚಿವ ಎಲ್. ಮುರುಗನ್ ಅವರಿಗೆ ಎರಡು ಪ್ರಾತಿನಿಧ್ಯಗಳನ್ನು ಕಳುಹಿಸಿದೆ ಎಂದು ಹೇಳಿದ್ದಾರೆ, "ನಮ್ಮ ಗೌರವಾನ್ವಿತ ಪ್ರಧಾನಿ ಶ್ರೀ ನರೇಂದ್ರ ಮೋದಿ ವಿರುದ್ಧ ಆಕ್ರಮಣಕಾರಿ ಮತ್ತು ಆಧಾರರಹಿತ ವಿಷಯವನ್ನು ಪ್ರಕಟಿಸಿದ್ದಕ್ಕಾಗಿ ವಿಕಟನ್ ನಿಯತಕಾಲಿಕೆಯ ವಿರುದ್ಧ ತ್ವರಿತ ಕ್ರಮ ಕೈಗೊಳ್ಳುವಂತೆ ಕೋರಿದೆ" ಎಂದು ಹೇಳಿದ್ದಾರೆ. ಫೆಬ್ರವರಿ 15 ರಂದು ಅಣ್ಣಾಮಲೈ ಅವರ ದೂರಿನಲ್ಲಿ ಡಿಜಿಟಲ್ ನಿಯತಕಾಲಿಕೆ ಪ್ರಕಟಿಸಿದ ಕಾರ್ಟೂನ್ ಅನ್ನು "ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆಯನ್ನು ಮೆಚ್ಚಿಸಲು ನಮ್ಮ ಗೌರವಾನ್ವಿತ ಪ್ರಧಾನಿಯವರ ಸಂಪೂರ್ಣ ರಾಜತಾಂತ್ರಿಕ ಪ್ರವಾಸದ ನಕಾರಾತ್ಮಕ ಚಿತ್ರವನ್ನು ಚಿತ್ರಿಸಲು" ಉದ್ದೇಶಪೂರ್ವಕ ಪ್ರಯತ್ನವಾಗಿದೆ ಎಂದು ಹೇಳಿದ್ದಾರೆ.

ಇದಾದ ಹೇಳಿದ ಕೆಲವೇ ಗಂಟೆಗಳ ನಂತರ, ಶನಿವಾರ ಸಂಜೆ ರಾಜ್ಯದಾದ್ಯಂತ ಮತ್ತು ಹೊರಗಿನ ಹಲವಾರು ಬಳಕೆದಾರರಿಗೆ ತನ್ನ ಡಿಜಿಟಲ್ ಪ್ರಕಟಣೆಯಾದ ವಿಕಟನ್ ಪ್ಲಸ್ ಪ್ರವೇಶಿಸಲು ಸಾಧ್ಯವಾಗುತ್ತಿಲ್ಲ ಎಂದು ರಾಜ್ಯದ 100 ವರ್ಷ ಹಳೆಯ ನಿಯತಕಾಲಿಕೆ ಆನಂದ ವಿಕಟನ್ ಹೇಳಿಕೊಂಡಿದೆ. ಆದಾಗ್ಯೂ, ವೆಬ್‌ಸೈಟ್ ನಿರ್ಬಂಧಿಸುವ ಬಗ್ಗೆ ಕೇಂದ್ರದಿಂದ ಯಾವುದೇ ಅಧಿಕೃತ ಪ್ರಕಟಣೆ ಬಂದಿಲ್ಲ.

ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿ ದಾಳಿ

ಅಭಿವ್ಯಕ್ತಿ ಸ್ವಾತಂತ್ರ್ಯವೇ ಪ್ರಜಾಪ್ರಭುತ್ವದ ಉಸಿರು. ಅದರ ಮೇಲಿನ ಪ್ರತಿಯೊಂದು ದಾಳಿಯೂ ಪ್ರಜಾಪ್ರಭುತ್ವದ ಮೇಲಿನ ದಾಳಿಯೇ ಆಗಿರುತ್ತದೆ. ಆನಂದ ವಿಕಟನ್ ವೆಬ್ ಸೈಟ್ ಅನ್ನು ನಿರ್ಬಂಧಿಸುವುದು ಕೇವಲ ತಾಂತ್ರಿಕ ಕ್ರಮವಲ್ಲ; ಇದು ಪ್ರಜಾಪ್ರಭುತ್ವದ ಮೇಲಿನ ನೇರ ದಾಳಿಯಾಗಿದೆ.

ಅಮೆರಿಕದಲ್ಲಿ ಭಾರತೀಯ ನಾಗರಿಕರ ಕೈಕೋಳ, ಸರಪಳಿ ಹಾಕಿ ಗಡೀಪಾರು ಮಾಡುವಿಕೆಯ ದುಃಸ್ಥಿತಿಯನ್ನು ಪ್ರಶ್ನಿಸುವ ವ್ಯಂಗ್ಯಚಿತ್ರವು ಬಿಜೆಪಿ ಆಡಳಿತಗಾರರ ಕೋಪಕ್ಕೆ ಗುರಿಯಾಗಿದೆ. ಶತಮಾನಗಳಷ್ಟು ಹಳೆಯದಾದ ಸಂಪ್ರದಾಯವನ್ನು ಹೊಂದಿರುವ ಮಾಧ್ಯಮ ಸಂಸ್ಥೆಯ ಧ್ವನಿಯನ್ನು ಹತ್ತಿಕ್ಕಲು ಪ್ರಯತ್ನಿಸುವುದು ಮೋದಿ ಸರ್ಕಾರದ ಸರ್ವಾಧಿಕಾರಿ ಪ್ರವೃತ್ತಿಯ ಮತ್ತೊಂದು ಅಭಿವ್ಯಕ್ತಿಯಾಗಿದೆ.

ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತ 180 ದೇಶಗಳ ಪೈಕಿ 159ನೇ ಸ್ಥಾನಕ್ಕೆ ಕುಸಿದಿರುವುದು ಕಾಕತಾಳೀಯವಲ್ಲ. ನ್ಯೂಸ್‌ಕ್ಲಿಕ್ ನಿಂದ ಆನಂದ ವಿಕಟನ್ ವರೆಗೆ – ಪ್ರತಿದಿನ ವಿಮರ್ಶಾತ್ಮಕ ಧ್ವನಿಗಳು ಕೇಳಿಬರುತ್ತಿವೆ.

ಇದು ಚಳುವಳಿಯನ್ನು ಹತ್ತಿಕ್ಕುವ ಪ್ರಯತ್ನದ ಮುಂದುವರಿಕೆಯಾಗಿದೆ. ಸಾಮಾಜಿಕ ಮಾಧ್ಯಮಗಳ ನಿಯಂತ್ರಣ ಮತ್ತು ಸುದ್ದಿ ಸಂಸ್ಥೆಗಳ ಬೆದರಿಕೆ ಸೇರಿದಂತೆ ಮಾಧ್ಯಮ ಸ್ವಾತಂತ್ರ್ಯದ ಮೇಲಿನ ದಾಳಿಗಳು ಹೆಚ್ಚುತ್ತಿವೆ.

ತನ್ನ ಜನರ ಘನತೆಯನ್ನು ರಕ್ಷಿಸಲು ಸಾಧ್ಯವಾಗದ ಆಡಳಿತವು, ತನ್ನನ್ನು ಟೀಕಿಸುವ ಧ್ವನಿಗಳನ್ನು ಹತ್ತಿಕ್ಕುವ ಬಗ್ಗೆ ಮಾತ್ರ ಗಂಭೀರವಾಗಿರುತ್ತದೆ. ಈ ದಬ್ಬಾಳಿಕೆಯ ವಿರುದ್ಧ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಿ ಹೋರಾಡುವ ಸಮಯ ಇದು.

ಈ ಹಿಂದೆಯೂ ವಿವಿಧ ಮಾಧ್ಯಮಗಳ ಮೇಲೆ ಇಂತಹ ದಾಳಿಗಳು ನಡೆದಿವೆ. ಆದರೆ ಪ್ರತಿ ಬಾರಿಯೂ ಅಂತಹ ದಾಳಿಗಳು ವಿಫಲವಾಗಿವೆ. ಏಕೆಂದರೆ ಸತ್ಯದ ಧ್ವನಿಗಳನ್ನು ಶಾಶ್ವತವಾಗಿ ಮೌನಗೊಳಿಸಲು ಸಾಧ್ಯವಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯವು ಸಂವಿಧಾನವು ನೀಡಿರುವ ಮೂಲಭೂತ ಹಕ್ಕು. ಅದನ್ನು ಕಸಿದುಕೊಳ್ಳಲು ಪ್ರಯತ್ನಿಸುವುದು ಪ್ರಜಾಪ್ರಭುತ್ವದ ಮೂಲ ಮೌಲ್ಯಗಳನ್ನು ನಾಶಮಾಡಿದಂತೆ.

ಇದಲ್ಲದೆ, ಇಂತಹ ದಮನಗಳು ಜನರಲ್ಲಿ ಹೆಚ್ಚಿನ ಪ್ರತಿರೋಧ ಮತ್ತು ಜಾಗೃತಿಯನ್ನು ಸೃಷ್ಟಿಸುತ್ತವೆ. ಪ್ರಜಾಪ್ರಭುತ್ವದಲ್ಲಿ, ಅಭಿಪ್ರಾಯ ಭಿನ್ನಾಭಿಪ್ರಾಯಗಳನ್ನು ಒಪ್ಪಿಕೊಳ್ಳುವುದು ಮತ್ತು ಚರ್ಚೆಗೆ ಅವಕಾಶ ನೀಡುವುದು ಅತ್ಯಗತ್ಯ. ಅದನ್ನು ನಿರಾಕರಿಸುವುದು ಆಧುನಿಕ ಫ್ಯಾಸಿಸಂನ ಅಭಿವ್ಯಕ್ತಿ. ಈ ಪರಿಸ್ಥಿತಿಯಲ್ಲಿ, ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಆನಂದ ವಿಕಟನ್ ಅನ್ನು ಬೆಂಬಲಿಸಿ ಧ್ವನಿ ಎತ್ತುವುದು ಅತ್ಯಗತ್ಯ.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ಮಾರ್ಕ್ಸ್‌ವಾದಿ ಪಕ್ಷ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಾಮಾಜಿಕ ಸಂಘಟನೆಗಳು ಈ ದಾಳಿಯನ್ನು ಖಂಡಿಸುತ್ತಿವೆ. ಆದರೆ ಕೇಂದ್ರ ಸರ್ಕಾರ ಇನ್ನೂ ಯಾವುದೇ ವಿವರಣೆಯನ್ನು ನೀಡಿಲ್ಲ. ಈ ದಬ್ಬಾಳಿಕೆಯ ವಿರುದ್ಧ ಎಲ್ಲರೂ ಒಗ್ಗೂಡಿ ಹೋರಾಡುವುದು ಅವಶ್ಯಕ.

ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ: ಡಬಲ್ ಎಂಜಿನ್ ಸರ್ಕಾರದ ದಿವಾಳಿತನವನ್ನು ಎತ್ತಿ ತೋರಿಸುತ್ತದೆ

ಎರಡು ವರ್ಷಗಳಿಂದ ಹಿಂಸಾಚಾರಗಳಿಂದ ಅಲ್ಲೋಲಕಲ್ಲೋಲಗೊಂಡಿರುವ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆಯು ಬಿಜೆಪಿ ಡಬಲ್ ಎಂಜಿನ್ ಸರ್ಕಾರದ ಸಂಪೂರ್ಣ ದಿವಾಳಿತನವನ್ನು ಎತ್ತಿ ತೋರಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ರಾಷ್ಟ್ರಪತಿ ಆಳ್ವಿಕೆಯನ್ನು ಮಣಿಪುರದ ಹಿತಾಸಕ್ತಿಗಾಗಿ ಅಲ್ಲ, ಬದಲಾಗಿ ಆಳುವ ಕೂಟದೊಳಗಿನ ಆಂತರಿಕ ಸಂಘರ್ಷಗಳನ್ನು ಪರಿಹರಿಸಲು ಸಮಯ ಪಡೆಯಲು ವಿಧಿಸಲಾಗಿದೆ ಎಂದಿರುವ ಅದು, ಪ್ರಮುಖ ಅಪರಾಧಿಯಾಗಿರುವ ಬಿಜೆಪಿ–ಆರ್‌ಎಸ್‌ಎಸ್‌ನಿಂದ ಬೆಂಬಲಿತರಾಗಿದ್ದ ಮುಖ್ಯಮಂತ್ರಿ, ನ್ಯಾಯಾಲಯವು ಅವರ ಪಕ್ಷಪಾತದ ಪಾತ್ರವನ್ನು ಪರಿಶೀಲಿಸುತ್ತಿದ್ದ ಕಾರಣ ರಾಜೀನಾಮೆ ನೀಡಬೇಕಾಯಿತು, ಅಲ್ಲಿ ಅವರ ಪಕ್ಷಪಾತದ ಪಾತ್ರದ ಪುರಾವೆಗಳನ್ನು ಪ್ರಸ್ತುತಪಡಿಸಲಾಯಿತು, ಇದರಿಂದಾಗಿ ಅವರಿಗೆ ರಾಜೀನಾಮೆ ನೀಡುವುದನ್ನು ಬಿಟ್ಟು ಬೇರೆ ದಾರಿಯಿರಲಿಲ್ಲ ಎಂದು ಹೇಳಿದೆ.

ಈ ಎಲ್ಲಾ ಬೆಳವಣಿಗೆಗಳಲ್ಲಿ, ಆಳುವ ಪಕ್ಷದ ಕೇಂದ್ರ ನಾಯಕತ್ವ ಮತ್ತು ಕೇಂದ್ರ ಸರ್ಕಾರ ಮಣಿಪುರದ ಜನರ ಮೇಲೆ ಹೇರಿದ ಆಳವಾದ ಸಂಕಟವನ್ನು ನಿವಾರಿಸಲು ಅಗತ್ಯವಾದ ಕ್ರಮ ತೆಗೆದುಕೊಳ್ಳಲು ನಿರಾಕರಿಸಿತು. ಪ್ರಧಾನಿಯವರು ತೊಂದರೆಗೊಳಗಾದ ಈ ರಾಜ್ಯಕ್ಕೆ ಭೇಟಿ ನೀಡಲು ಸಹ ನಿರ್ದಯವಾಗಿ ನಿರಾಕರಿಸಿರುವುದು ಇದರ ಪ್ರತೀಕ. ಇದು ತನ್ನ ಸ್ವಂತ ರಾಜಕೀಯ ಹಿತಾಸಕ್ತಿಗಳನ್ನು ರಾಜ್ಯ ಮತ್ತು ಅದರ ಜನರ ಹಿತಾಸಕ್ತಿಗಳಿಗಿಂತ ಮೇಲಿರಿಸಿಕೊಳ್ಳುವ ಆಳುವ ಪಕ್ಷದ ಮತ್ತು ಅದರ ನೇತೃತ್ವದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಂಕುಚಿತ ನಿಲುವನ್ನು ಬಯಲಿಗೆಳೆಯುತ್ತದೆ ಎಂದು ಸಿಪಿಐ(ಎಂ) ಖಂಡಿಸಿದೆ.

ರಾಷ್ಟ್ರಪತಿ ಆಳ್ವಿಕೆ ಯಾವುದೇ ಪರಿಹಾರವಲ್ಲ. ಆದಾಗ್ಯೂ, ಈಗ ಕೇಂದ್ರ ಸರ್ಕಾರವು ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ವಿವಿಧ ಸಮುದಾಯಗಳ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸುವ ಮೂಲಕ ಆಳವಾದ ವಿಭಜನೆಗಳನ್ನು ಸರಿಪಡಿಸಲು ಕ್ರಮಗಳನ್ನು ತಕ್ಷಣವೇ ಪ್ರಾರಂಭಿಸಬೇಕು, ಎಲ್ಲಾ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆಗಳನ್ನು ಒಂದು ಸಮಯ ಚೌಕಟ್ಟಿನೊಳಗೆ ನಡೆಸುವುದೂ ಸೇರಿದಂತೆ, ರಾಜ್ಯದ ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವುದರ ಜೊತೆಗೆ ಸಾಮಾನ್ಯ ಸ್ಥಿತಿ, ಶಾಂತಿ ಮತ್ತು ಸಾಮರಸ್ಯವನ್ನು ತರಲು ನ್ಯಾಯಯುತ ಪರಿಹಾರಗಳನ್ನು ತಲುಪಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ.

‘ಉಚಿತ ಪಡಿತರ’, ‘ಉಚಿತ ಕೊಡುಗೆ’ ಇತ್ಯಾದಿ ಟಿಪ್ಪಣಿಗಳಿಂದ ಬಡವರ ಘನತೆಯನ್ನು ಕಳಚಿ ಹಾಕಬಾರದು–ಬೃಂದಾ ಕಾರಟ್

ಸುಪ್ರಿಂ ಕೋರ್ಟ್ ನ ನ್ಯಾಯಮೂರ್ತಿ ಗೆ ಬರೆದ ಬಹಿರಂಗ ಪತ್ರ

ಬಡವರಿಗೆ, ಅದರಲ್ಲೂ ಮಹಿಳೆಯರಿಗೆ ಸ್ವಲ್ಪಮಟ್ಟಿಗಾದರೂ ಪರಿಹಾರ ಒದಗಿಸುವ ಸ್ಕೀಮುಗಳನ್ನು ‘ಉಚಿತ ಕೊಡುಗೆಗಳು’ ಎನ್ನುತ್ತ, ಅವುಗಳಿಂದಾಗಿ ಮತ್ತು ಉಚಿತ ಪಡಿತರದಿಂದಾಗಿ ಜನರು, ಅದರಲ್ಲೂ ಮಹಿಳೆಯರು ಶ್ರಮಪಡಲು, ಕೆಲಸ ಮಾಡಲು ಸಿದ್ಧರಾಗುತ್ತಿಲ್ಲ, ಕೃಷಿಕರಿಗೆ ಕೂಲಿಯಾಳುಗಳು ಸಿಗುತ್ತಿಲ್ಲ ಎಂದು ಸುಪ್ರಿಂ ಕೋರ್ಟಿನ ನ್ಯಾಯಮೂರ್ತಿ ಬಿ.ಆರ್.ಗವಾಯಿ ಟಿಪ್ಪಣಿ ಮಾಡಿದರು ಎಂದು ವರದಿಯಾಗಿವೆ.

ಈ ಟಿಪ್ಪಣಿಗಳು ಸತ್ಯದೂರವಾದವುಗಳು ಎಂದು ಮಾಜಿ ರಾಜ್ಯಸಭಾ ಸದಸ್ಯೆ ಮತ್ತು ಸಿಪಿಐ(ಎಂ)ನ ಹಿರಿಯ ಮುಖಂಡರಾದ ಬೃಂದಾಕಾರಟ್ ಈ ಕುರಿತು ನ್ಯಾಯಮೂರ್ತಿಗಳಿಗೆ ಬರೆದಿರುವ ಬಹಿರಂಗ ಪತ್ರದಲ್ಲಿ ಹೇಳಿದ್ದಾರೆ.

“ನಿಮ್ಮ ಟಿಪ್ಪಣಿಗಳು ಭಾರತದ ಶ್ರಮಪಟ್ಟು ದುಡಿಯುವ ಮಹಿಳೆಯರಿಗೆ ನ್ಯಾಯ ಒದಗಿಸುವುದಿಲ್ಲ. ಅಷ್ಟೇ ಅಲ್ಲ, ವ್ಯಾಪಕವಾಗಿರುವ ನಿರುದ್ಯೋಗ, ಲಭ್ಯವಿರುವ ಕೆಲಸದ ಅನಿಶ್ಚಿತ ಸ್ವರೂಪ ಮತ್ತು ಕಡಿಮೆ ಕೂಲಿಗಳಿಂದಾಗಿ ಭಾರತದ ಶ್ರಮಜೀವಿ ಜನರು ಬದುಕುಳಿಯಲು ಎದುರಿಸುತ್ತಿರುವ ಕಠಿಣ ಹೋರಾಟವನ್ನು ಅವು ಗುರುತಿಸುವುದಿಲ್ಲ. ದೇಶದ ಅತ್ಯುನ್ನತ ನ್ಯಾಯಾಲಯವು ಮಾಡಿರುವುದೆಂದು ವರದಿಯಾಗಿರುವ ಟಿಪ್ಪಣಿಗಳ ಮೂಲಕ ಬಡವರ ಘನತೆಯನ್ನು ಕಳಚಿ ಹಾಕಬಾರದು” ಎಂದಿರುವ ಬೃಂದಾ ಕಾರಟ್ ಅವನ್ನು ಮರುಪರಿಶೀಲಿಸುವಂತೆ ಮನವಿ ಮಾಡಿದ್ದಾರೆ.

ಉಚಿತ ಕೊಡುಗೆಗಳು ಎಂದು ಕರೆಯಲ್ಪಡುವವುಗಳು ಕನಿಷ್ಠ ಕೂಲಿ ಮತ್ತು ಇತರ ಕಾರ್ಮಿಕರ ಹಕ್ಕುಗಳ ಅನುಷ್ಠಾನವಾಗದಿರುವುದಕ್ಕೆ ಒಂದು ಕಳಪೆ ಪರಿಹಾರವಾಗಿವೆಯಷ್ಟೇ. ಇವು ಸಾಮಾಜಿಕ ಮತ್ತು ಆರ್ಥಿಕ ನ್ಯಾಯಕ್ಕಾಗಿ, ವಿಶೇಷವಾಗಿ ವಿಶ್ವದ ಅತ್ಯಂತ ಅಸಮಾನ ಸಮಾಜಗಳಲ್ಲಿ ಒಂದಾದ ನಮ್ಮಂತಹ ದೇಶದಲ್ಲಿ, ಪೂರೈಸಬೇಕಾದ ಸಾಂವಿಧಾನಿಕ ಅವಶ್ಯಕತೆಗಳು ಎಂದೂ ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ನೆನಪಿಸಿದ್ದಾರೆ.

ಅವರ ಬಹಿರಂಗ ಪತ್ರದ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:

“ಶ್ರಮಿಕ ವರ್ಗಗಳಲ್ಲಿ ನಡುವೆ, ವಿಶೇಷವಾಗಿ ಬಡ ಮಹಿಳೆಯರ ನಡುವೆ ಸಾಮಾಜಿಕ ಮತ್ತು ರಾಜಕೀಯ ಕೆಲಸಗಳಲ್ಲಿ ವಿವಿಧ ರೀತಿಗಳಲ್ಲಿ ತೊಡಗಿಸಿಕೊಂಡಿರುವ ಒಬ್ಬ ವ್ಯಕ್ತಿಯಾಗಿ ನಾನು ನಿಮಗೆ ಈ ಬಹಿರಂಗ ಪತ್ರವನ್ನು ಬರೆಯುತ್ತಿದ್ದೇನೆ. ವಸತಿಹೀನರ ಹಕ್ಕುಗಳ ಕುರಿತ ಅರ್ಜಿಯ ವಿಚಾರಣೆಯ ಸಮಯದಲ್ಲಿ ನೀವು "ಉಚಿತ ಕೊಡುಗೆಗಳ" ಬಗ್ಗೆ ಮಾಡಿದಿರಿ ಎಂದು ವರದಿಯಾಗಿರುವ ಟಿಪ್ಪಣಿಗಳಿಗೆ ಇದು ಸಂಬಂಧಿಸಿದೆ. ಪತ್ರಿಕೆಗಳಲ್ಲಿ ವ್ಯಾಪಕವಾಗಿ ಪ್ರಕಟವಾಗಿರುವ ಈ ಟಿಪ್ಪಣಿಗಳು ನೀವು "ಉಚಿತ ಕೊಡುಗೆಗಳು" ಎಂದು ಉಲ್ಲೇಖಿಸಿರುವುದನ್ನು ಪಡೆಯುವವರ ವಿರುದ್ಧ ಸಾಮಾಜಿಕ ಅಭಿಪ್ರಾಯವನ್ನು ಪೂರ್ವಾಗ್ರಹ-ಪೀಡಿತಗೊಳಿಸಬಹುದು ಎಂಬ ಕಾರಣಕ್ಕೆ ಈ ಪತ್ರ ಅಗತ್ಯವಾಗಿದೆ. ಈ ವಿಷಯದ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಒಂದು ಅರ್ಜಿ ಬಾಕಿ ಉಳಿದಿದೆ ಮತ್ತು ತೀರ್ಪಿಗಾಗಿ ಕಾಯುತ್ತಿದೆ ಎಂದು ನನಗೆ ತಿಳಿದಿದೆ. ಆದರೆ ಕೆಲವು ಟಿಪ್ಪಣಿಗಳ ಮರುಪರಿಶೀಲನೆಗಾಗಿ. ಈ ಪತ್ರದ ಮೂಲಕ ನನ್ನ ಮನವಿ.



ಸರ್, ನೀವು "ದುರದೃಷ್ಟವಶಾತ್, ಚುನಾವಣೆಗಳ ಸಂದರ್ಭದಲ್ಲಿ ಬರುವ ಈ ಉಚಿತ ಕೊಡುಗೆಗಳು... ಯಾವುದೋ ಲಾಡ್ಕಿ ಬಹಿನ್ ಮತ್ತು ಇತರ ಯಾವುದೋ ಯೋಜನೆಯಿಂದಾಗಿ, ಜನರು ಕೆಲಸ ಮಾಡಲು ಸಿದ್ಧರಾಗುತ್ತಿಲ್ಲ. ಅವರಿಗೆ ಉಚಿತ ಪಡಿತರ ಸಿಗುತ್ತಿದೆ, ಅವರಿಗೆ ಯಾವುದೇ ಕೆಲಸವಿಲ್ಲದೆ ಹಣ ಸಿಗುತ್ತಿದೆ, ಅವರು ಏಕೆ ಕೆಲಸ ಮಾಡಬೇಕು?... ಬದಲಿಗೆ ಅವರನ್ನು ಸಮಾಜದ ಮುಖ್ಯವಾಹಿನಿಯ ಭಾಗವನ್ನಾಗಿ ಮಾಡಿ ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡಲು ಅವಕಾಶ ನೀಡುವುದು ಉತ್ತಮವಲ್ಲವೇ?" ಎಂದೂ, "ನಾನು ನಿಮಗೆ ಪ್ರಾಯೋಗಿಕ ಅನುಭವಗಳ ಬಗ್ಗೆ ಹೇಳುತ್ತಿದ್ದೇನೆ... ಈ ಉಚಿತ ಕೊಡುಗೆಗಳಿಂದಾಗಿ, ಕೆಲವು ರಾಜ್ಯಗಳು ನೀಡುತ್ತಿರುವ ಉಚಿತ ಪಡಿತರದಿಂದಾಗಿ ಜನರು ಕೆಲಸ ಮಾಡಲು ಬಯಸುವುದಿಲ್ಲ. ನಾನು ಕೃಷಿಕ ಕುಟುಂಬದಿಂದ ಬಂದಿದ್ದೇನೆ. ಮಹಾರಾಷ್ಟ್ರದಲ್ಲಿ ಚುನಾವಣೆಗೆ ಮುನ್ನವಷ್ಟೇ ಪ್ರಕಟಿಸಿದ ಉಚಿತ ಕೊಡುಗೆಗಳಿಂದಾಗಿ, ರೈತರಿಗೆ ಕೂಲಿಯಾಳುಗಳು ಸಿಗುತ್ತಿಲ್ಲ. ಎಲ್ಲರೂ ಮನೆಯಲ್ಲಿ ಉಚಿತವಾಗಿ ಕೊಡುಗೆಗಳನ್ನು ಪಡೆಯುತ್ತಿರುವಾಗ, ಅವರು ಏಕೆ ಕೆಲಸ ಮಾಡಲು ಬಯಸುತ್ತಾರೆ?" ಎಂದೂ ಹೇಳಿರುವುದಾಗಿ ವರದಿಯಾಗಿದೆ.

ನೀವು ಹೇಳಿರುವ "ಲಾಡ್ಕಿ-ಬೆಹೆನ್ ಯೋಜನೆ" ಬಹುಶಃ ಒಂಬತ್ತು ರಾಜ್ಯ ಸರ್ಕಾರಗಳು ನೀಡುತ್ತಿರುವ 1000 ರಿಂದ 2000 ರೂಪಾಯಿಗಳವರೆಗಿನ ನೇರ ನಗದು ಪ್ರಯೋಜನ ವರ್ಗಾವಣೆಯನ್ನು ಸೂಚಿಸುತ್ತದೆ; ಚುನಾವಣಾ ಪೂರ್ವ ಭರವಸೆಗಳನ್ನು ನೋಡಿದರೆ, ಇಂತಹ ರಾಜ್ಯಗಳ ಸಂಖ್ಯೆ, ಕನಿಷ್ಠ 12ಕ್ಕೆ ಏರುವ ನಿರೀಕ್ಷೆಯಿದೆ. ಈ ಹಣದ ಕಾರಣದಿಂದಾಗಿ, ಜನರು-ಮಹಿಳಾ ಸಂಬಂಧಿ ಯೋಜನೆಗಳ ಸಂದರ್ಭದಲ್ಲಿ, ಮಹಿಳೆಯರು- ಕೆಲಸ ಮಾಡಲು ಸಿದ್ಧರಿಲ್ಲ ಎಂದು ನೀವು ಹೇಳಿದ್ದೀರಿ ಎಂದು ವರದಿಯಾಗಿದೆ. ಇದು ವಾಸ್ತವಿಕವಾಗಿ ತಪ್ಪಾಗಿದೆ. ಏಕೆಂದರೆ ಹೆಚ್ಚಿನ ಮಹಿಳೆಯರು ಈಗಾಗಲೇ ಕೆಲಸ ಮಾಡುತ್ತಿದ್ದಾರೆ-ಮನೆಕೆಲಸದಲ್ಲಿ ಮತ್ತು ಕೃಷಿ ಕಾರ್ಯಾಚರಣೆಗಳು ಸೇರಿದಂತೆ ಕುಟುಂಬ ಉದ್ಯಮಗಳಲ್ಲಿಯೂ ಸಹ ಸಂಬಳವಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಅವರು ಕೆಲಸ ಮಾಡುತ್ತಿಲ್ಲ ಎಂಬುದಲ್ಲ ಇಲ್ಲಿ ಪ್ರಶ್ನೆ, ಬದಲಿಗೆ ಅವರು ಯಾವುದೇ ಸಂಭಾವನೆ ಇಲ್ಲದೆ ಕೆಲಸ ಮಾಡುತ್ತಿದ್ದಾರೆ ಎಂಬುದೇ ಪ್ರಶ್ನೆ. ಸರಾಸರಿ ಭಾರತೀಯ ಮಹಿಳೆಯರು ಪ್ರತಿದಿನ 7.2 ಗಂಟೆಗಳ ಕಾಲ ಸಂಬಳ-ರಹಿತ ಮನೆಕೆಲಸದಲ್ಲಿ ಕಳೆಯುತ್ತಾರೆ. ಇದು ವಾರಕ್ಕೆ ಸುಮಾರು 50 ಗಂಟೆಗಳವರೆಗಿನ ಕೆಲಸವಾಗುತ್ತದೆ ಮನೆಯ ಹೊರಗೆ ಸಂಭಾವನೆ ಪಡೆಯುವ ಕೆಲಸ ಮಾಡುವ ಮಹಿಳೆಯರಿಗೆ, ಮನೆಕೆಲಸದ ಹೊರೆಯು ಅವರು ಪ್ರತಿದಿನ ಕೆಲಸ ಮಾಡುವ ಗಂಟೆಗಳ ಸಂಖ್ಯೆಗೆ ಸೇರುತ್ತದೆ.

2023-24ರ ಎಸ್‌ಬಿಐ ಸಮೀಕ್ಷೆಯ ಪ್ರಕಾರ, ಮಹಿಳೆಯರ ಸಂಬಳ-ರಹಿತ ಕೆಲಸದ ಪ್ರಮಾಣವನ್ನು ಹಣದ ರೂಪಕ್ಕೆ ಪರಿವರ್ತಿಸಿದರೆ, ಅದು ವರ್ಷಕ್ಕೆ 22 ಲಕ್ಷ ಕೋಟಿ ರೂಪಾಯಿಗಳಷ್ಟಾಗುತ್ತದೆ, ಇದು ಆ ವರ್ಷದ ದೇಶದ ಜಿಡಿಪಿಯ ಸುಮಾರು 7 ಶೇ. ಎಂದು ಅಂದಾಜಿಸಲಾಗಿದೆ. ಕುಟುಂಬದ ಉಳಿವಿಗೆ ಮುಖ್ಯವಾಗಿರುವ ಭಾರತದ ಮಹಿಳೆಯರ ಈ ಸಂಬಳರಹಿತ ಕೆಲಸದ ಪ್ರಮಾಣ ವಿಶ್ವದಲ್ಲೇ ಅತ್ಯಧಿಕವಾಗಿದೆ. ಮಹಿಳೆಯರ ಈ ಕೆಲಸವನ್ನು ಸಾಮಾಜಿಕವಾಗಿ ಗುರುತಿಸಲಾಗಿಲ್ಲ ಮತ್ತು "ಮಹಿಳೆಯರು ಕೆಲಸ ಮಾಡುತ್ತಿಲ್ಲ" ಎಂದು ಕೀಳಾಗಿ ಕಾಣಲಾಗುತ್ತಿದೆ. ವಿಷಾದದ ಸಂಗತಿಯೆಂದರೆ, ನಿಮ್ಮ ವರದಿಯಾದ ಟಿಪ್ಪಣಿಗಳು ಇಂತಹ ಕಲ್ಪನೆಗಳನ್ನು ಹೆಚ್ಚಿಸುತ್ತದೆ. ಈ ಯೋಜನೆಗಳ ಮೂಲಕ ಮಹಿಳೆಯರಿಗೆ ನೀಡುವ ಅಲ್ಪ ಮತ್ತು ಅಸಮರ್ಪಕ ಸ್ಟೈಫಂಡ್ ಅವರ ಹಕ್ಕು, ಸಾಮಾಜಿಕ ಪರಿಹಾರವಾಗಿ ಅದನ್ನು ಪರಿಗಣಿಸಬೇಕೇ ಹೊರತು, ಒಂದು ಔದಾರ್ಯ ಅಥವಾ ಉಚಿತ ಕೊಡುಗೆಯೆಂದಲ್ಲ. ರಾಜಕೀಯ ಪಕ್ಷಗಳು ಸಿನಿಕತನದಿಂದ, ಒಂದು ಹಕ್ಕನ್ನು ಒಂದು ಪ್ರಯೋಜನವೆಂದು ತಿರುಗಿಸಬಹುದು ಎಂಬುದು ಬೇರೆ ವಿಷಯ. ಕೇವಲ ಚುನಾವಣೆಯ ಮುನ್ನಾದಿನವಷ್ಟೇ ಮಹಿಳೆಯರ ಮತ ಪಡೆಯಲು ಯಾವುದೇ ರಾಜಕೀಯ ಪಕ್ಷ ಒಂದು ಯೋಜನೆಯನ್ನು ಆರಂಭಿಸುವುದನ್ನು ಟೀಕಿಸಿದರೆ ಅದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಮಹಿಳೆಯರು ಇಂತಹ ಯೋಜನೆಗಳಿಂದಾಗಿ "ಕೆಲಸ ಮಾಡಬಯಸುವುದಿಲ್ಲ" ಎಂದು ಆಪಾದಿಸುವುದು ಸತ್ಯಸಂಗತಿಯಲ್ಲ, ಅದು ಮಹಿಳೆಯರಿಗೆ ಮಾಡುವ ಅನ್ಯಾಯವಾಗಿದೆ.

ಎತ್ತಿರುವ ಮತ್ತೊಂದು ಪ್ರಶ್ನೆಯೆಂದರೆ "ಉಚಿತ ಪಡಿತರ". "ಬಹುಶಃ ಗೌರವಾನ್ವಿತ ನ್ಯಾಯಾಧೀಶರಿಗೆ ಸತ್ಯಸಂಗತಿಗಳ ಅರಿವಿಲ್ಲದಿರಬಹುದು. ಅವರು ಹೇಳುವ ಉಚಿತ ಪಡಿತರವು ಇಡೀ ತಿಂಗಳಿಗೆ ಒಬ್ಬ ವ್ಯಕ್ತಿಗೆ ಕೇವಲ 5 ಕೆಜಿ, ಅದು ಧಾನ್ಯಗಳು ಮಾತ್ರ, ಭಾರತದಲ್ಲಿ ಸರಾಸರಿ ತಲಾ ಧಾನ್ಯ ಬಳಕೆ ತಿಂಗಳಿಗೆ 9 ಕೆಜಿ ಎಂದು ಅಂದಾಜಿಸಲಾಗಿದೆ, ಇದು ಅದಕ್ಕಿಂತ ಕಡಿಮೆ. ನಿಜ ಹೇಳಬೇಕೆಂದರೆ, ಆಹಾರ ಹಣದುಬ್ಬರವು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿದೆ, ಇದು ಕುಟುಂಬ ಬಜೆಟ್‌ಗಳನ್ನು ಅಲ್ಲೋಲಕಲ್ಲೋಲ ಮಾಡುತ್ತಿದೆ. ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಅಪೌಷ್ಟಿಕ ಜನಸಂಖ್ಯೆಯನ್ನು ಹೊಂದಿದೆ. ಈ ಕಾರಣಗಳಿಂದಾಗಿಯೇ ಕಾಳಜಿ ಹೊಂದಿರುವ ನಾಗರಿಕರಿಗೆ ಮತ್ತು ಸಂಸ್ಥೆಗಳು ಪಡಿತರ ವ್ಯವಸ್ಥೆಯಲ್ಲಿ ಕೈಗೆಟುಕುವ ಬೆಲೆಗಳಲ್ಲಿ ಪ್ರೋಟೀನ್‌ಗಳು ಮತ್ತು ಹೆಚ್ಚು ಪೌಷ್ಟಿಕ ಆಹಾರವನ್ನು ಖಚಿತಪಡಿಸಲು ಇನ್ನಷ್ಟು ವಸ್ತುಗಳನ್ನು ಪಡಿತರ ವ್ಯವಸ್ಥೆಯಲ್ಲಿ ಸೇರಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಅದೇನೇ ಇರಲಿ, ಉಚಿತ ಪಡಿತರದಿಂದಷ್ಟೇ ಯಾರೂ ಬದುಕುಳಿಯಲು ಸಾಧ್ಯವಿಲ್ಲ.

ಸರ್, ನೀವು ಒಬ್ಬ ರೈತನಾಗಿ ನಿಮ್ಮ ವೈಯಕ್ತಿಕ ಅನುಭವವನ್ನು ಉಲ್ಲೇಖಿಸಿ "ಕೃಷಿಕರಿಗೆ ಕೂಲಿಯಾಳುಗಳು ಸಿಗುತ್ತಿಲ್ಲ, ಏಕೆಂದರೆ ಅವರು ಅದನ್ನು ಉಚಿತವಾಗಿ ಪಡೆಯುತ್ತಿದ್ದರೆ ಅವರು ಏಕೆ ಕೆಲಸ ಮಾಡುತ್ತಾರೆ?" ಎಂಬ ತೀರ್ಮಾನವನ್ನು ಹೇಳಿದ್ದೀರಿ. 100 ದಿನಗಳ ಖಾತರಿ ಕೆಲಸದ ಕಾನೂನನ್ನು ವಿರೋಧಿಸುವವರು, ವಿಶೇಷವಾಗಿ ಮಹಾರಾಷ್ಟ್ರದವರು ನೀಡುವ ಕಾರಣಗಳಲ್ಲಿ ಇದು ಒಂದು. ಈ ಯೋಜನೆಯು ಕೂಲಿಯಾಳುಗಳನ್ನು ಆಕರ್ಷಿಸುತ್ತದೆ, ಅದರಿಂದಾಗಿ ಕೃಷಿಕರಿಗೆ ಬೇಕಾದ ಆಳುಗಳು ಸಿಗುತ್ತಿಲ್ಲ ಎಂದು ಹೇಳಲಾಗುತ್ತದೆ. ವಾಸ್ತವವಾಗಿ ಮನರೇಗ ಸೈಟ್‌ಗಳಲ್ಲಿನ ಕೆಲಸ ನೋಡಿದರೆ, ಮುಖ್ಯವಾಗಿ ಮಣ್ಣೆತ್ತುವ ಕೆಲಸವು ಕೃಷಿ ಕೆಲಸಕ್ಕಿಂತ ಹೆಚ್ಚು ಕಷ್ಟಕರವಾಗಿರುತ್ತದೆ. ಇದು ತುಂಡು ದರದ ಕೆಲಸವಾಗಿರುವುದರಿಂದ ಕೆಲವೊಮ್ಮೆ ಉತ್ಪಾದಕತೆಯ ಮಾನದಂಡವು ತುಂಬಾ ಹೆಚ್ಚಾಗಿರುತ್ತದೆ, ಒಬ್ಬ ವ್ಯಕ್ತಿಯು ದಿನಕ್ಕೆ 2000 ಕೆಜಿ ಮಣ್ಣನ್ನು ಅಗೆಯಬೇಕಾಗುತ್ತದೆ. ಆದಾಗ್ಯೂ ಪುರುಷರು ಮತ್ತು ಮಹಿಳೆಯರ ನಡುವೆ ಸಮಾನ ವೇತನವನ್ನು ಕಾನೂನು ಖಚಿತಪಡಿಸುತ್ತದೆ. ಕೃಷಿಯಲ್ಲಿ ಹಾಗಲ್ಲ. ಕೂಲಿಯಾಳುಗಳು ಉಚಿತ ಪಡಿತರ ಅಥವಾ ಇತರ ಉಚಿತ ಕೊಡುಗೆಗಳನ್ನು ಪಡೆಯುತ್ತಿರುವುದರಿಂದ ಕೆಲಸ ಮಾಡುವುದಿಲ್ಲ ಎಂದೇನೂ ಅಲ್ಲ. ಬದಲಿಗೆ, ಕೃಷಿ ಕೂಲಿಕಾರರಿಗೆ ಕೂಲಿಗಳು ಹೆಚ್ಚಿಲ್ಲವಾದ್ದರಿಂದ ಅಥವ ಕಡಿಮೆಯಾಗಿರುವುದರಿಂದಾಗಿ. ಇತ್ತೀಚಿನ ಆರ್ಥಿಕ ಸಮೀಕ್ಷೆಯೇ ಗ್ರಾಮೀಣ ಕೂಲಿಗಳು ಸ್ಥಗಿತಗೊಂಡಿವೆ ಅಥವಾ ಕಡಿಮೆಯಾಗಿವೆ ಎಂದು ಸೂಚಿಸುತ್ತದೆ. ಆದ್ದರಿಂದ, ಕಾರ್ಮಿಕರು ಉಚಿತ ಕೊಡುಗೆಗಳನ್ನು ಪಡೆಯುತ್ತಿದ್ದಾರೆ ಎಂಬ ಕಾರಣಕ್ಕಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳುವುದು ಮತ್ತೆ ವಾಸ್ತವಿಕವಾಗಿ ಸರಿಯಲ್ಲ. ಇದಕ್ಕೆ ಬದಲಾಗಿ ಉಚಿತ ಕೊಡುಗೆಗಳು ಎಂದು ಕರೆಯಲ್ಪಡುವವುಗಳು ಕನಿಷ್ಠ ಕೂಲಿ ಮತ್ತು ಇತರ ಕಾರ್ಮಿಕರ ಹಕ್ಕುಗಳ ಅನುಷ್ಠಾನವಾಗದಿರುವುದಕ್ಕೆ ಒಂದು ಕಳಪೆ ಪರಿಹಾರವಾಗಿದೆ.

ಭಾರತ ಸರ್ಕಾರದ ಕಲ್ಯಾಣ ಯೋಜನೆಗಳು ಸಾಮಾಜಿಕ ಮತ್ತು ಆರ್ಥಿಕ ನ್ಯಾಯಕ್ಕಾದ ಸಾಂವಿಧಾನಿಕ ಅವಶ್ಯಕತೆಗಳು, ವಿಶೇಷವಾಗಿ ವಿಶ್ವದ ಅತ್ಯಂತ ಅಸಮಾನ ಸಮಾಜಗಳಲ್ಲಿ ಒಂದಾದ ನಮ್ಮಂತಹ ದೇಶದಲ್ಲಿ.

ಸರ್, ನಿಮ್ಮ ಟಿಪ್ಪಣಿಗಳು ಭಾರತದ ಶ್ರಮಪಟ್ಟು ದುಡಿಯುವ ಮಹಿಳೆಯರಿಗೆ ನ್ಯಾಯ ಒದಗಿಸುವುದಿಲ್ಲ. ಅಷ್ಟೇ ಅಲ್ಲ, ವ್ಯಾಪಕವಾಗಿರುವ ನಿರುದ್ಯೋಗ, ಲಭ್ಯವಿರುವ ಕೆಲಸದ ಅನಿಶ್ಚಿತ ಸ್ವರೂಪ ಮತ್ತು ಕಡಿಮೆಕೂಲಿ ಭಾರತದ ಶ್ರಮಜೀವಿ ಜನರು ಬದುಕುಳಿಯಲು ಎದುರಿಸುತ್ತಿರುವ ಕಠಿಣ ಹೋರಾಟವನ್ನು ಅವು ಗುರುತಿಸುವುದಿಲ್ಲ. ದೇಶದ ಅತ್ಯುನ್ನತ ನ್ಯಾಯಾಲಯವು ಮಾಡಿರುವುದೆಂದು ವರದಿಯಾಗಿರುವ ಟಿಪ್ಪಣಿಗಳ ಮೂಲಕ ಬಡವರ ಘನತೆಯನ್ನು ಕಳಚಿ ಹಾಕಬಾರದು.

ದಯವಿಟ್ಟು ನಿಮ್ಮ ಟಿಪ್ಪಣಿಗಳನ್ನು ಮರು ಪರಿಶೀಲಿಸಿ ಎಂದು ನಾನು ವಿನಂತಿಸುತ್ತೇನೆ.



ಜನಶಕ್ತಿ ಕನ್ನಡ ವಾರಪತ್ರಿಕೆ ಫೆಬ್ರವರಿ 17–23, 2025 11 February 17–23, 2025 JANASHAKTHI KANNADA VARA PATRIKE

‘ಅಮೆರಿಕಾವನ್ನು ಮಹಾನ್‌ಗೊಳಿಸಲು’ ಭಾರತದ ಧಾವಂತ!

ಇದು ಅಮೃತ ಕಾಲ

ತಮ್ಮ ಪರಮ ಗೆಳೆಯ ಮತ್ತೆ ಅಮೆರಿಕಾದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ಮೂರೇ ವಾರದೊಳಗೆ ನಮ್ಮ ಪ್ರಧಾನಿಗಳು ವಾಶಿಂಗ್ಟನ್‌ಗೆ ಧಾವಿಸಿದ್ದಾರೆ.

ಒಂದು ವಾರದೊಳಗೇ, ಟ್ರಂಪ್‌ರೊಡನೆ ತಾನು ದೂರವಾಣಿ ಸಂವಾದ ನಡೆಸಿರುವುದಾಗಿ ಅವರು ಹೇಳಿದರು. ಮರುದಿನವೇ, ಯುಎಸ್ ಅಧ್ಯಕ್ಷರು ಪ್ರಮುಖ ದೇಶಗಳೊಂದಿಗೆ ವ್ಯಾಪಾರ ಸಂಬಂಧಗಳಲ್ಲಿ ‘ಅಮೆರಿಕಾ ಮೊದಲು’ ಧೋರಣೆಯನ್ನು ಅನುಸರಿಸಬೇಕು ಎಂದು ಕರೆ ನೀಡುತ್ತ ಆ ದೇಶಗಳ ಮೇಲೆ ‘ಟ್ಯಾರೀಫ್’(ಆಮದುಸುಂಕ)ಗಳನ್ನು ಹಾಕುತ್ತೇವೆ ಎಂದೂ ಬೆದರಿಸಿದರು. ಈ ಸಂದರ್ಭದಲ್ಲಿ ಅವರು ಉಲ್ಲೇಖಿಸಿದ ದೇಶಗಳಲ್ಲಿ ಚೀನಾ, ಬ್ರೆಝಿಲ್ ಮಾತ್ರವಲ್ಲ, ಭಾರತವೂ ಇತ್ತು.

ತಮ್ಮ ವಾಶಿಂಗ್ಟನ್ ಭೇಟಿ ಕಾಲದಲ್ಲಿ ಈ ಬಗ್ಗೆ ನಮ್ಮ ಪ್ರಧಾನಿಗಳು ಟ್ರಂಪ್‌ರೊಡನೆ ಮಾತನಾಡಲಿದ್ದಾರೆ ಎಂದು ಅವರ ಅನುಯಾಯಿಗಳು ಹೇಳಿದರು. ಆದರೆ ಅದರ ಮೊದಲೇ ಭಾರತದ ಅಕ್ರಮ ವಲಸಿಗರು ಎಂಬವರನ್ನು ವಾಪಾಸು ಕಳಿಸಿದ್ದೇಕೆ, ಅವರ ಕೈಕಾಲುಗಳಿಗೆ ಕೋಳ ಹಾಕಿ ಮಿಲಿಟರಿ ವಿಮಾನದಲ್ಲಿ ಕ್ರಿಮಿನಲ್‌ಗಳಂತೆ ನಡೆಸಿಕೊಂಡದ್ದೇಕೆ ಎಂಬ ಪ್ರಶ್ನೆಗೆ ಭಾರತೀಯ ಅಧಿಕಾರಿಗಳು ಉತ್ತರಿಸಲು ನಿರಾಕರಿಸಿದರು ಎಂದೂ ವರದಿಯಾಯಿತು. ಪ್ರಧಾನಿಗಳಂತೂ ಈ ಬಗ್ಗೆ ಚಕಾರವೆತ್ತಲಿಲ್ಲ.

ಟ್ರಂಪ್ ಅಲ್ಲಿಗೇ ನಿಲ್ಲಲಿಲ್ಲ. ಪ್ರಧಾನಿಗಳು ಇನ್ನೇನು ವಾಶಿಂಗ್ಟನ್ ಭೇಟಿಗೆ ಹೊರಡುತ್ತಾರೆ ಎಂದಿದ್ದಾಗಲೇ ಯುಎಸ್ ಆಮದು ಮಾಡಿಕೊಳ್ಳುವ ಎಲ್ಲ ಉಕ್ಕು ಮತ್ತು ಅಲ್ಯುಮಿನಿಯಂ ಸಾಮಗ್ರಿಗಳ ಮೇಲೆ ಶೇ. 25ರಷ್ಟು ಸುಂಕ ಹಾಕುವುದಾಗಿ ಗುಡುಗಿದರು. ಇದು ಭಾರತಕ್ಕೂ ತಟ್ಟುವ ಕ್ರಮ. ಆದರೆ ಈ ಬಗ್ಗೆಯೂ ಭಾರತದ ಕಡೆಯಿಂದ ದಿವ್ಯ ಮೌನ! ಯುಎಸ್‌ಗೆ ಭಾರತದ ಉಕ್ಕು ಮತ್ತು ಅಲ್ಯುನಿಯಂ ರಫ್ತು ಬಹಳೇನೂ ಇಲ್ಲ ಎಂದೊಬ್ಬ ವಕ್ತಾರರು ಗೊಣಗಿದರಂತೆ. ಆದರೆ ಈಗಾಗಲೇ ಕಳೆದ 12 ತಿಂಗಳಿಂದ ಉಕ್ಕು ರಫ್ತು ಮಂದಗೊಂಡಿರುವಾಗ, ಈ ಸುಂಕದಿಂದ ಭಾರತದ ಉಕ್ಕು ರಫ್ತುದಾರರ ಮುಂದೆ ಹೊಸ ಸವಾಲುಗಳು ಬಂದು ನಿಂತಿವೆ ಎಂದು ಮಾರುಕಟ್ಟೆ ವೀಕ್ಷಕರು ಹೇಳುತ್ತಿದ್ದಾರೆ.

ಟ್ರಂಪ್‌ರವರ ಟಾರೀಫ್ ಸಮರ ಭಾರತದ ಮಾಹಿತಿ ತಂತ್ರಜ್ಞಾನ, ಜವಳಿ ಮತ್ತು ಔಷಧಿ ವಲಯಕ್ಕೂ ಸಂಚಕಾರ ತರುವ ಸಂಭವವಿದೆ ಎಂದೂ ಹೇಳಲಾಗುತ್ತಿದೆ.

ಎಲ್ಲವೂ ಟ್ರಂಪ್ ಪ್ರೀತ್ಯರ್ಥ!

ಈ ಮೊದಲು ಬಜೆಟಿನಲ್ಲಿ ಪರಮಾಣು ಶಕ್ತಿ ಕಾಯ್ದೆ ಮತ್ತು ಪರಮಾಣು ಹಾನಿಗೆ ನಾಗರಿಕ ಬಾಧ್ಯತೆ ಕಾಯ್ದೆ (ಸಿಎಲ್‌ಎನ್‌ಡಿಎ)ಗೆ ತಿದ್ದುಪಡಿಗಳನ್ನು ತರುವುದಾಗಿ ಹಣಕಾಸು ಮಂತ್ರಿಗಳು ಸಾರಿದ್ದರು. ಇದು ಫ್ರಾನ್ಸಿನ ಮತ್ತು ಯುಎಸ್‌ನ ಪ್ರೀತ್ಯರ್ಥ ಎಂದು ಬೇರೆ ಹೇಳಬೇಕಾಗಿಲ್ಲ. ಯುಎಸ್ ಅಧ್ಯಕ್ಷರನ್ನು ಮತ್ತು ಅದಕ್ಕೆ ಮೊದಲು ತನ್ನ ಪ್ರಧಾನಿಗಳ ಮತ್ತೊಬ್ಬ ಗೆಳೆಯರಾದ ಫ್ರಾನ್ಸಿನ ಅಧ್ಯಕ್ಷರ ಭೇಟಿಗೆ ಇದು ಪೂರ್ವ ಸಿದ್ಧತೆ ಎಂದು ಹಲವು ವಿಶ್ಲೇಷಕರು ಹೇಳಿದ್ದರೆ, ಅತ್ತ ‘ಯುಎಸ್–ಭಾರತ ಆಯಕಟ್ಟಿನ ಭಾಗೀದಾರಿಕೆ ವೇದಿಕೆ’(ಯುಎಸ್‌ಐಎಸ್‌ಪಿಎಫ್)ನ ಅಧ್ಯಕ್ಷ ಮುಕೇಶ್ ಅಘಿ, ಅಮೆರಿಕನ್ ರಕ್ಷಣಾ ಉಪಕರಣಗಳನ್ನು ಮತ್ತು ಇಂಧನವನ್ನು ಭಾರತ ಖರೀದಿಸಬೇಕೆಂಬುದು ಯುಎಸ್ ಅಧ್ಯಕ್ಷರ ಆದ್ಯತೆ ಎಂದು ಹೇಳಿದ್ದಾರೆ.

ಈಗ ಟ್ರಂಪ್ ಪ್ರೀತ್ಯರ್ಥ ಮೋದಿ ಸರಕಾರ ಅಮೆರಿಕಾ ಭಾರತಕ್ಕೆ ರಫ್ತು ಮಾಡುವ ಪೆಕನ್(ಕ್ಯಾಲಿಫೋರ್ನಿಯ ವಾಲ್‌ನಟ್–ಭಾರತದಲ್ಲಿ ಇದನ್ನು ಶಿವಪ್ಲಾಆಖ್ರೋಟ್ ಎನ್ನುತ್ತಾರೆ) ಮೇಲಿನ ಆಮದು ಸುಂಕವನ್ನು ಇಳಿಸುವುದಾಗಿ ಹೇಳಿದೆ ಎಂದೂ ವರದಿಯಾಗಿದೆ(ದಿ ಹಿಂದು, ಫೆ.11). “ಕೈಗಾರಿಕಾ ಸಾಮಾನುಗಳಿಗೆ ಸಂಬಂಧಪಟ್ಟಂತೆ ಭಾರತ ಈಗ ಬಹಳ ಸ್ನೇಹಪರವಾಗಿದೆ. ಕೃಷಿಯಲ್ಲಿ ಕೆಲವು ಇಕ್ಕಟ್ಟುಗಳಿರಬಹುದು, ಆದರೆ ನಾವು ಈಗಾಗಲೇ ಬಾದಾಮಿ ಮುಂತಾದ ಐಟಂಗಳ ಮೇಲೆ ಸುಂಕಗಳನ್ನು ಇಳಿಸಿದ್ದೇವೆ. ಪೆಕನ್ ನಟ್ ಮೇಲೆ ಕ್ರಮೇಣ ಸುಂಕ ಇಳಿಸುತ್ತೇವೆ” ಎಂದೊಬ್ಬ ಉನ್ನತ ಸರಕಾರೀ ಅಧಿಕಾರಿ ಹೇಳಿರುವುದಾಗಿ ಈ ವರದಿ ಹೇಳುತ್ತದೆ.

2023ರ ವರೆಗೆ ಈ ಪೆಕನ್‌ನಟ್ ಮೇಲೆ 100% ಸುಂಕ ಹಾಕಲಾಗಿತ್ತು, 2023ರಲ್ಲಿ ಶೇ. 30ಕ್ಕೆ ಇಳಿಸಲಾಗಿತ್ತು, ಈಗ ಟ್ರಂಪ್‌ರ ಟಾರಿಫ್–ಟಾರಿಫ್ ರಂಪಾಟದ ಎದುರು ತಲೆಬಾಗಿ, ಮತ್ತಷ್ಟು ಇಳಿಸುವ ಆಶ್ವಾಸನೆಯೊಂದಿಗೆ, ಈಗಾಗಲೇ ಅತಿ ಕಡಿಮೆ ಅಥವ ಸೊನ್ನೆ ಸುಂಕ ಹಾಕಿರುವ ಯುಎಸ್‌ನಿಂದ ಆಮದು ಮಾಡುವ ಹಲವಾರು ಕೈಗಾರಿಕಾ ಸರಕುಗಳ ಒಂದು ಪಟ್ಟಿಯನ್ನೂ ಮುಂದಿಟ್ಟು ಭಾರತವೇನೂ ಸುಂಕ ಪಟ್ಟಿಗಳ ದುರುಪಯೋಗ ಮಾಡುವ ದೇಶವಲ್ಲ ಎಂದು ಅವರನ್ನು ಸಮಾಧಾನ ಪಡಿಸಲು ಪ್ರಯತ್ನಿಸಲಾಗವುದಂತೆ.

ಇಷ್ಟೊಂದು ಹಲ್ಲು ಗಿಂಜಬೇಕೇ?

ಸಹಜವಾಗಿಯೇ, ಭಾರತದಂತಹ, ಮೂರನೇ ಜಗತ್ತಿನ ಮುಖಂಡನಾಗಿರುವಂತಹ ದೊಡ್ಡ ದೇಶ ಯುಎಸ್ ಅಧ್ಯಕ್ಷರ ರಂಪಾಟಗಳ ಎದುರು ಇಷ್ಟೊಂದು ಹಲ್ಲು ಗಿಂಜಬೇಕೇ ಎಂದು ಈಗ ಹಲವಾರು ವಿಶ್ಲೇಷಕರು ಕೇಳಲಾರಂಭಿಸಿದ್ದಾರೆ.


ನಮ್ಮ ಪ್ರಧಾನಿಗಳು ಅಧ್ಯಕ್ಷ ಟ್ರಂಪ್‌ರ 2ನೇ ಅಧಿಕಾರಾವಧಿಯಲ್ಲಿ ಅವರನ್ನು ಭೇಟಿಯಾಗುತ್ತಿರುವ ಮೂರನೇ ಜಾಗತಿಕ ಮುಖಂಡರು. ಅವರಿಗೆ ಮೊದಲು ಇಸ್ರೇಲಿನ ಪ್ರಧಾನಿ ನೆತನ್ಯಾಹು ಮತ್ತು ಜಪಾನಿನ ಪ್ರಧಾನಿ ಇಶಿಬ ಭೇಟಿಯಾಗಿದ್ದರು. ಇಸ್ರೇಲ್ ಅಂತೂ ಯುಎಸ್‌ನ ಬಾಲಬಡುಕ ದೇಶ, ಜಪಾನಿನ ಪ್ರಧಾನಿಗೆ ಟ್ರಂಪ್ ಚೀನಾದ ಅಧ್ಯಕ್ಷರಿಗೆ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲು ಆಹ್ವಾನ ನೀಡಿದ್ದರಿಂದ ನಡುಕ ಉಂಟಾಗಿರಬಹುದು.

ಆದರೆ **ಭಾರತದ ಪ್ರಧಾನಿ ಇಷ್ಟೊಂದು ತರಾತುರಿಯಲ್ಲಿ ಟ್ರಂಪ್ ಬಗ್ಗೆ ಪ್ರೀತಿಯನ್ನು ಸಾರುವ ಅಗತ್ಯವಾದರೂ ಏನಿದೆ, ಎಂದು ಪ್ರಶ್ನಿಸುತ್ತಾರೆ ಅರ್ಥಶಾಸ್ತ್ರಜ್ಞ, ಪತ್ರಿಕಾ ಸಂಪಾದಕ ಹಾಗೂ ಲೇಖಕರೂ ಆಗಿರುವ ಮತ್ತು ಮಾಜಿ ಪ್ರಧಾನಿ ಮನಮೋಹನ ಸಿಂಗ್‌ರವರು ಸಲಹಾಗಾರರೂ ಆಗಿದ್ದ ಸಂಜಯ ಬರು** (ದಿ ವೈರ್, ಫೆ. 10). ಈಗ ಎಬ್ಬಿಸಿರುವ ರಾಜತಾಂತ್ರಿಕ ಧೂಳು ತಿಳಿಯಾಗುವವರೆಗೆ ಕಾದಿದ್ದರೆ ಭಾರತಕ್ಕೆ ತೊಂದರೆಯೇನೂ ಆಗುತ್ತಿರಲಿಲ್ಲ ಎನ್ನುತ್ತಾರೆ ಅವರು.

ಇಸ್ರೇಲ್ ಮತ್ತು ಜಪಾನ್ ಟ್ರಂಪ್‌ರವರ ಬಗ್ಗೆ ಅಧೀರರಾಗಲು ಕಾರಣಗಳಿವೆ. ಅವು ಬಹಳ ವರ್ಷಗಳಿಂದಲೂ ತಾವು ಯುಎಸ್‌ನ ಅಡಿಯಾಳು ಪ್ರಭುತ್ವಗಳು ಎಂಬಂತೆ ವರ್ತಿಸುತ್ತ ಬಂದಿವೆ, ಅವುಗಳ ರಾಷ್ಟ್ರೀಯ ಭದ್ರತೆ ಮತ್ತು ರಕ್ಷಣೆ ಅಮೆರಿಕಾದೊಂದಿಗೆ ಅವರ ಸಂಬಂಧಗಳನ್ನು ಅವಲಂಬಿಸಿದೆ. ಆದರೆ ಭಾರತ ಹಾಗಲ್ಲವಲ್ಲ. ಅಧ್ಯಕ್ಷ ಟ್ರಂಪ್‌ರ ಬಗ್ಗೆ ನಾವೂ ನಮ್ಮ ಅಧೀರತೆಯನ್ನು ಪ್ರದರ್ಶಿಸುತ್ತಿರುವುದೇಕೆ, ಇದು ಭಾರತದ ಜಾಗತಿಕ ಸ್ಥಾನಮಾನಕ್ಕೆ ತಕ್ಕುದಾದುದಲ್ಲ ಎನ್ನುತ್ತಾರೆ ಸಂಜಯ್ ಬರು.

“ಪ್ರಧಾನ ಮಂತ್ರಿಗಳು ಒಬ್ಬ ಬಲಿಷ್ಟ ಜಾಗತಿಕ ಮುಖಂಡನೆಂಬ ಇಮೇಜ್ ತೋರ್ಪಡಿಸುತ್ತಾರೆ. ಅದರೆ ಪರಮಾಣು ಬಾಧ್ಯತಾ ಕಾಯ್ದೆಯ ಬಗ್ಗೆ ಸರಕಾರದ ಪ್ರಕಟಣೆ ಆ ಇಮೇಜಿನ ಬಗ್ಗೆ ಬಹಳಷ್ಟು ದೊಡ್ಡ ಟಿಪ್ಪಣಿ. ಯುಎಸ್‌ನ ಕಾರ್ಪೊರೇಟ್‌ಗಳ ಲಾಭವೇ ಎಲ್ಲಕ್ಕೂ ಮಿಗಿಲಾಗಿರುವ ಯುಎಸ್ ಸರಕಾರದ ಒತ್ತಡ ಎದುರಾದಾಗ ಮೋದಿಯವರ ಸರಕಾರ ಭಾರತೀಯರ ಸುರಕ್ಷತೆಯ ಮೂಲಭೂತ ಹುಕ್ಕುಗಳ ಪರವಾಗಿ ನಿಲ್ಲಲು ಅಸಮರ್ಥವಾಗುವಂತೆ ಕಾಣುತ್ತದೆ” ಎಂದಿದ್ದಾರೆ ‘ಪರಮಾಣು ನಿಶ್ಶಸ್ತ್ರೀಕರಣ ಮತ್ತು ಶಾಂತಿ ಮೈತ್ರಿಕೂಟ’(ಸಿಎನ್‌ಡಿಪಿ) ದೊಡನೇ ಸಹಯೋಗ ಇರುವ ಭೌತ ಶಾಸ್ತ್ರಜ್ಞರಾದ ಎಂ.ವಿ.ರಮಣ ಮತ್ತು ಸುವ್ರತ ರಾಜು (ದಿ ಹಿಂದು, ಫೆ. 13).

ಟ್ರಂಪ್ ರವರ ಅರಚಾಟ, ರಂಪಾಟಗಳು ಅವರ ‘ಮೇಕ್ ಅಮೆರಿಕ ಗ್ರೇಟ್ ಅಗೇನ್’(‘ಮಗ’) ಎಂಬುದರ ನಿಜ ಅರ್ಥ ಏನು ಎಂದು ಸ್ಪಷ್ಟವಾಗಿ ತೋರಿಸಿವೆ ಮತ್ತು ಇವಕ್ಕೆ ಚೀನಾ ಮತ್ತು ಕ್ಯೂಬಾ ಮಾತ್ರವಲ್ಲ ಕೊಲಂಬಿಯ, ಪೆರು, ಮೆಕ್ಸಿಕೊ, ಪನಾಮಾ, ಗ್ರೀನ್‌ಲ್ಯಾಂಡ್ ಮತ್ತು ಗಾಝಾ ಕೂಡ ತಕ್ಕ ಉತ್ತರ ನೀಡಲು ಹಿಂಜರಿದಿಲ್ಲ, 56 ಅಂಗುಲ ಎದೆಯ ಪ್ರಧಾನಿಯನ್ನು ಹೊಂದಿರುವ ಭಾರತ ಮಾತ್ರವೇ ಏಕೆ ಅಧೀರಗೊಳ್ಳಬೇಕು ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿದೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಅಮೆರಿಕಾವನ್ನು ಮತ್ತೆ ಮಹಾನ್‌ಗೊಳಿಸುವಲ್ಲಿ ಭಾರತಕ್ಕಿರುವ ಸಾಮರ್ಥ್ಯ ಅಪಾರ! –ಟ್ರಂಪ್ ಉವಾಚ



ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

“ಮಗ+ಮಿಗ=ಮೆಗಾ

ಈ ನಡುವೆ ನಮ್ಮ ಪ್ರಧಾನಿಗಳು ವಾಶಿಂಗ್ಟನ್ ಭೇಟಿ ಮುಗಿಸಿ ಮರಳಿದ್ದಾರೆ. ಬಹುಶಃ ಈ ಭೇಟಿಯ ಮುಖ್ಯ ಫಲಶೃತಿಯೆಂದರೆ, ಅವರು ತಮ್ಮ ‘ವಿಕಸಿತ ಭಾರತ’ವನ್ನು ಟ್ರಂಪ್‌ರವರ ‘ಮಗ’ಕ್ಕೆ ಲಗತ್ತಿಸಿ, ‘ಮಿಗ’, ಅಂದರೆ ‘ಮೇಕ್ ಇಂಡಿಯ ಗ್ರೇಟ್ ಅಗೇನ್’ ಎಂದು ಭಾಷಾಂತರಿಸಿರುವುದು ಎಂದು ಮೇಲ್ನೋಟಕ್ಕೆ ಕಾಣಿಸುತ್ತಿದೆ.

ಇದೊಂದು ‘ಎಕ್ಸಲೆಂಟ್ ಮೀಟಿಂಗ್’ ಎಂದು ಪ್ರಧಾನಿಗಳು ತಮ್ಮ ಎಕ್ಸ್ ಹ್ಯಾಂಡಲ್‌ನಲ್ಲಿ ಬರೆದುಕೊಂಡಿದ್ದಾರೆ. “ಇದು ಭಾರತ–ಯುಎಸ್ ಸ್ನೇಹಕ್ಕೆ ಮಹತ್ವದ ಗತಿಶೀಲತೆ ನೀಡುತ್ತದೆ.... ಅಧ್ಯಕ್ಷ ಟ್ರಂಪ್ ತಮ್ಮ ಮಾತುಗಳಲ್ಲಿ ‘ಮಗ’ ಬಗ್ಗೆ ಹೇಳುತ್ತಿರುತ್ತಾರೆ... ಭಾರತದಲ್ಲಿ ನಾವು ವಿಕಸಿತ ಭಾರತದತ್ತ ಕೆಲಸ ಮಾಡುತ್ತಿದ್ದೇವೆ, ಇದು ಅಮೆರಿಕನ್ ಸಂದರ್ಭದಲ್ಲಿ ‘ಮಿಗ’ ಎಂದು ಭಾಷಾಂತರಗೊಳ್ಳುತ್ತದೆ. ಜೊತೆಯಾಗಿ ಭಾರತ–ಯುಎಸ್ ಸಮೃದ್ಧಿಗೆ ಒಂದು ಮೆಗಾ ಭಾಗೀದಾರಿಕೆ ಹೊಂದುತ್ತಾರೆ” ಎಂದು ಪ್ರಧಾನಿಗಳು ಬರೆದುಕೊಂಡಿದ್ದಾರೆ.

ಯುಎಸ್ ಅಧ್ಯಕ್ಷರು ಮತ್ತು ಭಾರತದ ಪ್ರಧಾನಿಗಳ ಮಾತುಗಳಿಂದ ತಿಳಿದುಬರುವಂತೆ ಈ ‘ಮೆಗಾ ಭಾಗೀದಾರಿಕೆ’ಯ ಮುಖ್ಯ ಅಂಶ, ನಿರೀಕ್ಷಿಸಿದಂತೆ, 2025ರಿಂದ ಭಾರತಕ್ಕೆ ಅಮೆರಿಕಾದ ಮಿಲಿಟರಿ ಮಾರಾಟಗಳಲ್ಲಿ ಹೆಚ್ಚಳ, ಅಂತಿಮವಾಗಿ ಎಫ್–35 ಫೈಟರ್ ಜೆಟ್‌ಗಳ ಮಾರಾಟ, ಮತ್ತು ಭಾರತಕ್ಕೆ ಅಮೆರಿಕಾದಿಂದ ತೈಲ ಮತ್ತು ಇಂಧನಗಳ ಆಮದು ಹೆಚ್ಚಿಸುವುದು!

ಬಹುಶಃ ‘ವಿಕಸಿತ ಭಾರತ’ ಎಂಬುದು ‘ಮಿಗ’ ಆಗಿರುವುದರ ಮತ್ತು ‘ಮೆಗಾ ಭಾಗೀದಾರಿಕೆ’ಯ ಸಾರಾಂಶ ಇದರಲ್ಲಿ ಅಡಗಿದೆ.

ನಮ್ಮ ಪ್ರಧಾನಿಗಳ ‘ತಾರೀಫ್ ಪೆ ತಾರೀಫ್’ ಅಲ್ಲಿಯೂ ಮುಂದುವರೆಯಿತು, ಅದರ ಹಿನ್ನೆಲೆಯಲ್ಲಿ ಯುಎಸ್ ಅಧ್ಯಕ್ಷರ ‘ಟ್ಯಾರಿಫ್–ಟ್ಯಾರಿಫ್’ ಮಂತ್ರೋಚ್ಚಾರಣೆಯ ಯಾವ ಮಟ್ಟದಲ್ಲಿತ್ತು ಎಂದು ತಿಳಿದಿಲ್ಲ, ಮುಂದಿನ ದಿನಗಳಲ್ಲಿ ಬೆಳಕಿಗೆ ಬರಬಹುದು.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಫೇಸ್‌ಬುಕ್

ದುಡಿಯುವ ಬಡಜನರ ಬಗ್ಗೆ ನಾಚಿಕೆಗೆಟ್ಟ ಸಿನಿಕತನದ ಬಜೆಟ್



ಭಾರತದಲ್ಲಿ ಆಳುವ ಪಕ್ಷಗಳು ತಾವು ಏನು ಮಾಡುತ್ತಿದ್ದರೂ ಅವೆಲ್ಲ ಬಡವರ ಒಳಿತಿಗಾಗಿ ಎಂದು ಸದಾ ಹೇಳಿಕೊಂಡು ಬಂದಿವೆ. ಆದರೆ, ಈಗ, ಮಧ್ಯಮ ವರ್ಗಕ್ಕೆ ಬಹಿರಂಗವಾಗಿ ಆದ್ಯತೆ ನೀಡುವ ಮತ್ತು ಹಾಗೆ ಮಾಡುವಾಗ ದುಡಿಯುವ ಬಡವರನ್ನು ಶಿಕ್ಷಿಸಲೂ ಹೇಸದ ಒಂದು ಸರ್ಕಾರವಿದೆ. ಇಂತಹ "ನಾವೀನ್ಯತೆ"ಯನ್ನು ಹೊರತುಪಡಿಸಿದರೆ, 2025–26ರ ಬಜೆಟ್, ಹಿಂದಿನ ನವ ಉದಾರವಾದಿ ಬಜೆಟ್‌ಗಳು ಸಾಮಾನ್ಯವಾಗಿ ಅನುಸರಿಸಿದ, ತುಳಿದು ತುಳಿದು ಸವೆದಿರುವ ಹಾದಿಯನ್ನೇ ಅನುಸರಿಸಿದೆ. ಆದರೆ ಜನರ ಒಂದು ಜನವಿಭಾಗದ ವಿರುದ್ಧವಾಗಿ ಮತ್ತೊಂದು ಜನವಿಭಾಗವನ್ನು ಸಿನಿಕತನದಿಂದ ಬಳಸಿಕೊಳ್ಳುವುದು, ಅದು ಸರ್ಕಾರದ ಪರ ಜನಾಭಿಪ್ರಾಯವನ್ನು ರೂಪಿಸುವಲ್ಲಿ ಸಹಾಯ ಮಾಡಬಹುದಾದರೂ ಸಹ, ಯಾವುದೇ ಆರ್ಥಿಕ ಬಿಕ್ಕಟ್ಟನ್ನೂ ಪರಿಹರಿಸುವುದಿಲ್ಲ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಫೆಬ್ರವರಿ 1, 2025 ರಂದು ಮಂಡಿಸಿದ ಬಜೆಟ್ ಬಹಿರಂಗವಾಗಿ ದುಡಿಯುವ ಜನರ ಜೀವನದ ಬಗ್ಗೆ ತೋರಿದಂತಹ ಸಿನಿಕತನ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಇದುವರೆಗೆ ಯಾವ ಬಜೆಟಿನಲ್ಲೂ ಕಂಡು ಬಂದಿರಲಿಲ್ಲ. ತೆರಿಗೆ ಕಡಿತದಿಂದ ಮಧ್ಯಮ ವರ್ಗದ ಬಳಕೆಯನ್ನು ಹೆಚ್ಚಿಸುವ ಮೂಲಕ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವುದು ಬಜೆಟ್‌ನ ತಂತ್ರವಾಗಿದೆ ಎಂದು ಹಣಕಾಸು ಸಚಿವರಿಂದ ಹಿಡಿದು ಕೆಳಗಿನವರೆಗೆ ಎಲ್ಲ ಪಂಡಿತರೂ ಒಪ್ಪುತ್ತಾರೆ. ಈ ತೆರಿಗೆ ಕಡಿತವನ್ನು ಸರಿದೂಗಿಸಲು ಅದಕ್ಕೆ ಸಮನಾಗಿ ಸರ್ಕಾರದ ಯಾವುದೇ ಖರ್ಚು–ವೆಚ್ಚಗಳನ್ನು ಕಡಿತ ಮಾಡದೇ, ಮಧ್ಯಮ ವರ್ಗದ ಬಳಕೆಯ ಹೆಚ್ಚಳವನ್ನು ಉಂಟುಮಾಡುವುದು ಸಾಧ್ಯವಾದರೆ ಮಾತ್ರ ಈ ತಂತ್ರವು ಅರ್ಥಪೂರ್ಣವಾಗುತ್ತದೆ. ಅಂತಹ ಒಂದು ಸಂದರ್ಭದಲ್ಲಿ, ಮಧ್ಯಮ ವರ್ಗದ ಬಳಕೆಯ ಹೆಚ್ಚಳವು ಒಟ್ಟು ಬೇಡಿಕೆಯ ಮಟ್ಟವನ್ನು ಹೆಚ್ಚಿಸುತ್ತದೆ ಮತ್ತು ಆ ಮೂಲಕ ಅರ್ಥವ್ಯವಸ್ಥೆಯು ಉತ್ತೇಜನಗೊಳ್ಳುತ್ತದೆ. ಆದರೆ, ಬಜೆಟ್ ಪ್ರಕಾರ, ಈ ತೆರಿಗೆ ಕಡಿತಗಳ ಮೂಲಕ ಬಿಟ್ಟುಕೊಡಲಾದ ಸಂಪನ್ಮೂಲಗಳನ್ನು ಸರ್ಕಾರದ ವೆಚ್ಚಗಳ ಕಡಿತದ ಮೂಲಕ ಸರಿದೂಗಿಸಿಕೊಳ್ಳಲಾಗುವುದು: ಕೇಂದ್ರ ಸರ್ಕಾರದ ಒಟ್ಟು ಖರ್ಚು 2024–25ಕ್ಕಿಂತ (ಪರಿಷ್ಕೃತ ಅಂದಾಜು) ನಾಮಮಾತ್ರವಾಗಿ ಕೇವಲ ಶೇ. 7.4ರಷ್ಟು ಹೆಚ್ಚಲಿದೆ ಎಂದು ನಿರೀಕ್ಷಿಸಲಾಗಿದೆ. ಅಂದರೆ, ವಾಸ್ತವಿಕವಾಗಿ (ಹಣದುಬ್ಬರವನ್ನು ಪರಿಗಣನೆಗೆ ತಗೊಂಡರೆ) ಯಾವುದೇ ಹೆಚ್ಚಳವಿರುವುದಿಲ್ಲ ಮತ್ತು ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ಕುಸಿತವೇ ಇರುತ್ತದೆ.

ಸರ್ಕಾರದ ವೆಚ್ಚಗಳ ಈ ಕಡಿತದಲ್ಲಿ ಬಹುಪಾಲನ್ನು ಆಹಾರ ಅನುದಾನದಲ್ಲಿ ಮಾಡಲಾಗಿದೆ. 2024–25ರ ಪರಿಷ್ಕೃತ ಅಂದಾಜಿಗಿಂತ ಕೇವಲ ಶೇ. 3ರಷ್ಟನ್ನು ನಾಮಮಾತ್ರವಾಗಿ ಏರಿಕೆಮಾಡಲಾಗಿದೆಯಾದರೂ ಆಹಾರದ 2023–24ರ ವಾಸ್ತವಿಕ ಖರ್ಚುಗಳಿಗೆ ಹೋಲಿಸಿದರೆ ಈ ವರ್ಷದ ಅನುದಾನದಲ್ಲಿ ಕುಸಿತವಾಗಿದೆ. ಉದ್ಯೋಗ ಖಾತ್ರಿ ಯೋಜನೆಯಡಿಯ 86,000 ಕೋಟಿ ರೂ.ಗಳ ವೆಚ್ಚಗಳು, 2024–25ರ ಪರಿಷ್ಕೃತ ಅಂದಾಜಿನ ಮಟ್ಟದಲ್ಲೇ ಉಳಿದಿವೆ ಮತ್ತು 2023–24ರ 89,154 ಕೋಟಿ ರೂ.ಗಳ ವಾಸ್ತವಿಕ ಖರ್ಚುಗಳಿಗೆ ಹೋಲಿಸಿದರೆ, ಕುಸಿದಿವೆ. ಈ ವರ್ಷದ ಜನವರಿ 25ರಂದು ಈ ಯೋಜನೆಯಡಿಯಲ್ಲಿ 6,950 ಕೋಟಿ ರೂ.ಗಳ ವೇತನ ಪಾವತಿ ಬಾಕಿ ಉಳಿದಿರುವುದರಿಂದ, ವಾಸ್ತವಿಕ ಮೊತ್ತವು ಇನ್ನೂ ಕಡಿಮೆಯೇ.

ಸಾಮಾಜಿಕ ವಲಯವನ್ನು ಒಟ್ಟಾಗಿ ತೆಗೆದುಕೊಂಡರೆ, ಅದಕ್ಕಾಗಿ ಮಾಡಿದ ಹಂಚಿಕೆಗಳಲ್ಲಿ ವಾಸ್ತವವಾಗಿ ಕಡಿತವಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯಕ್ಕೆ 2025–26ರ ಹಂಚಿಕೆಯು 2024–25ರ ಪರಿಷ್ಕೃತ ಅಂದಾಜು ಹಂಚಿಕೆಗಿಂತ ಸುಮಾರು ಶೇ. 9.5ರಷ್ಟು ಹೆಚ್ಚುವ ನಿರೀಕ್ಷೆಯಿದೆ. ಆದರೆ ಇದು ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ಇಳಿಕೆಯಾಗಿದೆ. ಶಾಲಾ ಶಿಕ್ಷಣಕ್ಕಾಗಿ ಬಜೆಟ್‌ನಲ್ಲಿ ಕಳೆದ ವರ್ಷ ಒದಗಿಸಿದ್ದ 73,000 ಕೋಟಿ ರೂ.ಗಳ (ಪರಿಷ್ಕೃತ ಅಂದಾಜು) ನಾಮಮಾತ್ರ ಹಂಚಿಕೆಯು ಈ ವರ್ಷ 78,600 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಈ ವಿಷಯದಲ್ಲಿಯೂ ಸಹ, ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ಇಳಿಕೆಯಾಗಿದೆ. ಸಕ್ಷಮ್ ಅಂಗನವಾಡಿ ಮತ್ತು ಪೋಷಣ್–2 ಇಂತಹ ಇತರ ಹಲವಾರು ಯೋಜನೆಗಳ ಬಗ್ಗೆಯೂ ಇದೇ ಮಾತನ್ನು ಹೇಳಬಹುದು. ಪಿಎಂ–ಪೋಷಣ್ ವಿಷಯದಲ್ಲಿ ಕಳೆದ ವರ್ಷದ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ಈ ವರ್ಷದ ಹಂಚಿಕೆ ನಿಶ್ಚಲವಾಗಿದೆ ಮತ್ತು ಪೋಷಣ್–2 ವಿಷಯದಲ್ಲಿ ಕಳೆದ ವರ್ಷದ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ಶೇ. 3.6ರಷ್ಟು ನಾಮಮಾತ್ರ ಹೆಚ್ಚಳವಿದೆ.

"ಬಂಡವಾಳ ಕೇಂದ್ರೀಕರಣ"ದ ಪ್ರಕ್ರಿಯೆ

ಸಂಬಳದಾರರಿಗೆ ನೀಡಿದ ತೆರಿಗೆ ಕಡಿತವನ್ನು, ಆಹಾರದ ಮೇಲಿನ ಸಹಾಯಧನ ಕಡಿತ, ಉದ್ಯೋಗ ಖಾತ್ರಿ ಯೋಜನೆ ಮುಂತಾದ ಸಾಮಾಜಿಕ ವಲಯವನ್ನು ಹಿಂಡುವ ಮೂಲಕ ಸರಿಹೊಂದಿಸಿಕೊಳ್ಳುವ ಕ್ರಮವು ಬಡವರು ಮತ್ತು ಅಪಾರ ಸಂಖ್ಯೆಯ ದುಡಿಯುವ ಜನರ ಕೊಳ್ಳುವ ಶಕ್ತಿಯನ್ನು ಮಧ್ಯಮ ವರ್ಗದ ಒಂದು ಭಾಗಕ್ಕೆ ಮರುಹಂಚಿಕೆ ಮಾಡಿದಂತಾಗಿದೆ. ಹಾಗಾಗಿ, 2025–26ರ ಬಜೆಟ್ ಒಟ್ಟಾರೆಯಾಗಿ ಅರ್ಥವ್ಯವಸ್ಥೆಗೆ ಯಾವುದೇ ಉತ್ತೇಜನವನ್ನು ನೀಡುವುದಿಲ್ಲ ಮಾತ್ರವಲ್ಲ, ದುಡಿಯುವ ಬಡವರಿಗೆ ನಷ್ಟವನ್ನುಂಟುಮಾಡಿ ಸಂಬಳದಾರರಿಗೆ ರಿಯಾಯಿತಿಗಳನ್ನು ನೀಡಿದೆ. ಇದು ಶ್ರೀಮಂತರನ್ನು ಮುಟ್ಟದೆ, ದುಡಿಯುವ ಬಡವರಿಂದ ಕೊಳ್ಳುವ ಶಕ್ತಿಯನ್ನು ಸಂಬಳದಾರರಿಗೆ ಮರುಹಂಚಿಕೆ ಮಾಡುತ್ತದೆ. ಅದೇ ಸಮಯದಲ್ಲಿ ಜಾಗತೀಕರಣಗೊಂಡ ಹಣಕಾಸು ವ್ಯವಸ್ಥೆಯನ್ನು ಸಮಾಧಾನಪಡಿಸಲು ವಿತ್ತೀಯ ಕೊರತೆಯನ್ನು ಹೆಚ್ಚು–ಕಡಿಮೆ ಅದು ವಿಧಿಸಿದ ಮಿತಿಯೊಳಗೇ ಇಡುತ್ತದೆ. ಅರ್ಥವ್ಯವಸ್ಥೆಯಲ್ಲಿ ಸಂಭವಿಸುತ್ತಿರುವ ಹಣದುಬ್ಬರ ಏರಿಕೆಯ ಹಿನ್ನೆಲೆಯಲ್ಲಿ ಸಂಬಳದಾರರಿಗೆ ಹಣಕಾಸು ಬೆಂಬಲವನ್ನು ನೀಡಬಾರದು ಎಂಬುದು ಇದರ ಅರ್ಥವಲ್ಲ. ಈ ಬೆಂಬಲವು, 2025–26ರ ಬಜೆಟ್‌ನಲ್ಲಿ ಒಳಗೊಂಡಿರುವ ತಂತ್ರದ ರೀತಿಯಲ್ಲಿ, ದುಡಿಯುವ ಬಡವರಿಗೆ ನಷ್ಟವನ್ನುಂಟುಮಾಡುವ ಮೂಲಕ ಬರಬಾರದು ಎಂಬುದೇ ಇಲ್ಲಿರುವ ಮುಖ್ಯವಾದ ಆಶಯ.

ಈ ಕಾರ್ಯತಂತ್ರವು ಅರ್ಥವ್ಯವಸ್ಥೆಯ ನಿಧಾನಗತಿಯನ್ನು ನಿವಾರಿಸದಿದ್ದರೂ, ಎನ್‌ಡಿಎ



ಸರ್ಕಾರದ ಮೂರು ಆಕರ್ಷಕ ವೈಶಿಷ್ಟ್ಯಗಳನ್ನು ಹೊಂದಿದೆ. ಮೊದಲನೆಯದು, ದುಡಿಯುವ ಬಡವರನ್ನು ಹಿಂಡುವುದರಿಂದಾಗಿ ಸಾರಭೂತವಾಗಿ ಕಿರು ಉತ್ಪಾದನಾ ವಲಯದಲ್ಲಿ ತಯಾರಿಸುವ ವಿವಿಧ ಸರಕುಗಳಿಗೆ ಬೇಡಿಕೆ ಇಳಿಕೆಯಾಗುತ್ತದೆ. ಆದರೆ, ಕೊಳ್ಳುವ ಶಕ್ತಿಯನ್ನು ಸಂಬಳದಾರರಿಗೆ ಮತ್ತು ಮಧ್ಯಮ ವರ್ಗಕ್ಕೆ ಸಾಮಾನ್ಯವಾಗಿ ಹಸ್ತಾಂತರಿಸುವುದರಿಂದ ಸಂಘಟಿತ ವಲಯದಲ್ಲಿ, ಅದರಲ್ಲೂ ಮುಖ್ಯವಾಗಿ ಏಕಸ್ವಾಮ್ಯ ಬಂಡವಾಳ ವಲಯದಲ್ಲಿ ತಯಾರಿಸುವ ಸರಕುಗಳಿಗೆ ಬೇಡಿಕೆ ಹೆಚ್ಚುತ್ತದೆ. ಈ ಕಾರ್ಯತಂತ್ರವು ಮಾರ್ಕ್ಸ್ ಯಾವುದನ್ನು "ಬಂಡವಾಳದ ಕೇಂದ್ರೀಕರಣ" ಪ್ರಕ್ರಿಯೆ ಎಂದು ಕರೆದಿದ್ದರೋ, ಆ ಪ್ರಕ್ರಿಯೆಯನ್ನು ಉತ್ತೇಜಿಸುವ ಮೂಲಕ ಏಕಸ್ವಾಮ್ಯ ಬಂಡವಾಳದ ಹಿತಾಸಕ್ತಿಗಳ ಈಡೇರಿಕೆಯಾಗುತ್ತದೆ. ಈ ಮೂಲಕ ಹಿರಿ ಬಂಡವಾಳವು ಕಿರು ಬಂಡವಾಳದ ವೆಚ್ಚದಲ್ಲಿ ಬೆಳೆಯುತ್ತದೆ. ಕಾರ್ಪೊರೇಟ್–ಹಿಂದುತ್ವ ಮೈತ್ರಿಕೂಟದ ಪ್ರಾಬಲ್ಯ ಇಂದಿನ ಭಾರತದ ರಾಜಕೀಯದ ಮುಖ್ಯಲಕ್ಷಣವಾಗಿದ್ದು, ಎನ್‌ಡಿಎ ಸರ್ಕಾರವು ಈ ಬಜೆಟ್ ಮೂಲಕ ತನ್ನನ್ನು ಬೆಂಬಲಿಸುವ ಕಾರ್ಪೊರೇಟ್ ಸ್ತಂಭದ ಹಿತಾಸಕ್ತಿಗಳನ್ನು ಈಡೇರಿಸುತ್ತಿದೆ.

ಸ್ವಪ್ರತಿಷ್ಠೆಯ ಗೀಳೇ ಮುಖ್ಯವಾದಾಗ..

ಎರಡನೆಯದು, ಅಸಂಘಟಿತ ವಲಯದಲ್ಲಿ ಬೇಡಿಕೆಯ ಕುಸಿತ ಮತ್ತು ಅದರಿಂದಾಗಿ ಅಲ್ಲಿನ ಉತ್ಪಾದನೆಯ ಕುಸಿತವನ್ನು ನಮ್ಮ ಅಧಿಕೃತ ಅಂಕಿ–ಸಂಖ್ಯೆಗಳ ವ್ಯವಸ್ಥೆಯು ಸರಿಯಾಗಿ ಪರಿಗಣಿಸುವುದಿಲ್ಲ. ಅಲ್ಪಾವಧಿಗಾಗಿ ಮಾಡುವ ಜಿಡಿಪಿಯ ತ್ವರಿತ ಮತ್ತು ಪ್ರಾಥಮಿಕ ಅಂದಾಜುಗಳನ್ನು ಮಾಡುವಾಗ ಅಸಂಘಟಿತ ವಲಯವನ್ನು ಪರಿಗಣಿಸುವುದಿಲ್ಲ ಮತ್ತು ಈ ಉದ್ದೇಶಕ್ಕಾಗಿ ಕಾರ್ಪೊರೇಟ್ ವಲಯದಿಂದ ಬಂದ ಅಂಕಿ–ಸಂಖ್ಯೆಗಳನ್ನೇ ಇಡೀ ಅರ್ಥವ್ಯವಸ್ಥೆಯ ಫಲಿತಾಂಶ ಎಂದೇ ಪರಿಗಣಿಸಲಾಗುತ್ತದೆ. ಹಾಗಾಗಿ, ಈ ಕಾರ್ಯತಂತ್ರವು ಅರ್ಥವ್ಯವಸ್ಥೆಯನ್ನು ಅದು ನಿಜವಾಗಿ ಇರುವುದಕ್ಕಿಂತ ಸುಂದರವಾಗಿ ಕಾಣುವಂತೆ ಬಿಂಬಿಸುತ್ತದೆ. ನಮ್ಮ ಅಂಕಿಅಂಶಗಳ ವ್ಯವಸ್ಥೆಯ ಈ ವಿಶಿಷ್ಟ ಸಂದರ್ಭದಲ್ಲಿ ಈ ಅಂಶವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಕಾರ್ಪೊರೇಟ್ ಸಾಧನೆಯ ಉತ್ತಮ ಅಂಕಿಅಂಶಗಳೇ ಇಡೀ ಅರ್ಥವ್ಯವಸ್ಥೆಯ ಉತ್ತಮ ಸಾಧನೆಯಾಗಿ ಬಿಂಬಿಸಲ್ಪಡುತ್ತವೆ. ಹಾಗಾಗಿ, ಸರ್ಕಾರವು ತನ್ನ ಬೆಂಬಲಿಗ ಕಾರ್ಪೊರೇಟ್‌ಗಳನ್ನು ಖುಷಿಪಡಿಸುವ ಹೊತ್ತಿನಲ್ಲೇ, ಅರ್ಥವ್ಯವಸ್ಥೆಯನ್ನು ತಾನು ಉತ್ತಮಪಡಿಸಿದ್ದೇನೆ ಎಂದು ಬೀಗಬಹುದು. ತನ್ನ ಸ್ವಂತ ಪ್ರತಿಷ್ಠೆಯ ಗೀಳು ಹತ್ತಿಕೊಂಡಿರುವ ಸರ್ಕಾರಕ್ಕೆ ಇದು ಎಲ್ಲಕ್ಕಿಂತ ಹೆಚ್ಚು ಮುಖ್ಯವಾಗುತ್ತದೆ.

ಮೂರನೆಯದು, ಮಧ್ಯಮ ವರ್ಗಕ್ಕೆ ಒದಗಿಸಿದ ತೆರಿಗೆ ರಿಯಾಯಿತಿಗಳು ಸ್ಪಷ್ಟವಾಗಿವೆ. ಅವು ಎದ್ದು ಕಾಣುತ್ತಿದ್ದರೂ ಸಹ, ಇನ್ನೊಂದು ಬದಿಯಲ್ಲಿ ಅಂದರೆ, ಈ ರಿಯಾಯಿತಿಗಳ ಹೊರೆ ಯಾರನ್ನು ಹಿಂಡುತ್ತದೆ ಎಂಬುದು ಹೊರನೋಟಕ್ಕೆ

ಪುಟ 14 ಕ್ಕೆ



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ನ್ಯಾಯ ಬಯಸುವವರಿಗೆ ನ್ಯಾಯ ನಿರಾಕರಿಸುವ ದೇಶವಾಗಿ ಬದಲಾಗುತ್ತಿದೆ

ಎ.ಎ. ರಹೀಮ್
ರಾಜ್ಯ ಸಭಾ ಸದಸ್ಯರು

ನಮ್ಮ ದೇಶವು ನ್ಯಾಯ ಕೇಳುವವರಿಗೆ ನ್ಯಾಯ ನಿರಾಕರಿಸಲ್ಪಡುವ ದೇಶವಾಗುತ್ತಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ರಾಜ್ಯಸಭಾ ಸದಸ್ಯ ಎ.ಎ. ರಹೀಮ್ ಹೇಳಿದ್ದಾರೆ. ಫೆಬ್ರವರಿ 4 ರಂದು ರಾಜ್ಯಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಮಾತನಾಡಿದ ಅವರು ಹೀಗೆ ಹೇಳಿದ್ದಾರೆ. ಅವರ ಮಾತುಗಳು ಹೀಗಿವೆ:

ನಾಲ್ವರು ಮಹಿಳೆಯರಿಗೆ ಸಮರ್ಪಣೆ

ರಾಷ್ಟ್ರಪತಿಯವರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ನನ್ನ ಭಾಷಣವನ್ನು ಮಹಿಳಾ ರಾಷ್ಟ್ರಪತಿ ಮತ್ತು ನಾಲ್ವರು ಮಹಿಳೆಯರಿಗೆ ಅರ್ಪಿಸುತ್ತೇನೆ. ಮೊದಲ ಮಹಿಳೆ, ಗುಜರಾತ್‌ನಲ್ಲಿ ನಡೆದ ಮುಸ್ಲಿಂ ವಿರೋಧಿ ಹತ್ಯಾಕಾಂಡದ ಬಲಿಪಶು ಮತ್ತು ಹತ್ಯೆಗೀಡಾದ ಮಾಜಿ ಸಂಸತ್ ಸದಸ್ಯ ಇಸಾನ್ ಜಾಫ್ರಿ ಅವರ ಪತ್ನಿ ಝಕಿಯಾ ಜಾಫ್ರಿ.

ಝಾಕಿಯಾ ಜಾಫ್ರಿ ತನ್ನ ಪತಿ ಮತ್ತು ಹತ್ಯೆಗೀಡಾದ ಮುಸ್ಲಿಂ ಜನರಿಗೆ ನ್ಯಾಯಕ್ಕಾಗಿ ತನ್ನ ಬದುಕಿನ ಅಂತ್ಯದವರೆಗೂ ಹೋರಾಡುತ್ತಲೇ ಇದ್ದಳು. ಎರಡನೆಯವರು ಮತ್ತು ಮೂರನೆಯವರು ಮಣಿಪುರದಲ್ಲಿ ನಡೆದ ಮೆರವಣಿಗೆಯಲ್ಲಿ ಬೆತ್ತಲೆಯಾಗಿ ಎಳೆದೊಯ್ದ ಮಹಿಳೆಯರಿಗಾಗಿ ತಮ್ಮನ್ನು ತಾವು ಅರ್ಪಿಸಿಕೊಳ್ಳಲು ಮುಂದಾದ ಮಹಿಳೆಯರು.

ನಾಲ್ಕನೇಯದು, ನಿನ್ನೆ ಅಯೋಧ್ಯೆಯಲ್ಲಿ ಅಮಾನುಷವಾಗಿ ಅತ್ಯಾಚಾರ ಮತ್ತು ಕೊಲೆಗೀಡಾಗಿ ಕಾಲುವೆಗೆ ಎಸೆಯಲ್ಪಟ್ಟ ದಲಿತ ಮಹಿಳೆಗೆ ಅರ್ಪಣೆ.

ಈ ದಬ್ಬಾಳಿಕೆ ಎಷ್ಟು ದಿನ ಮುಂದುವರಿಯುತ್ತದೆ?

ಹೀಗೆ, ನಮ್ಮ ದೇಶ ನ್ಯಾಯವನ್ನು ಬಯಸುವವರಿಗೆ ನ್ಯಾಯವನ್ನು ನಿರಾಕರಿಸುವ ದೇಶವಾಗಿದೆ. ನಮ್ಮ ದೇಶವು ಈಗ ಬುಲ್ಡೋಜರ್ ಸಾಮ್ರಾಜ್ಯದಲ್ಲಿ ಜೀವಗಳನ್ನು ಬಲಿಕೊಡುವ ದೇಶವಾಗಿದೆ. ಅಲ್ಪಸಂಖ್ಯಾತರು ಶಾಂತಿಯಿಂದ ಬದುಕಲು ಸಾಧ್ಯವಾಗದ ದೇಶವಾಗಿ ಮಾರ್ಪಟ್ಟಿದೆ.

ಮಣಿಪುರದ ಬೀದಿಗಳಲ್ಲಿ ಮಹಿಳೆಯರನ್ನು ಬೆತ್ತಲೆಯಾಗಿ ಎಳೆದುಕೊಂಡು ಹೋಗುವಾಗ ನಾವು ಜಗತ್ತಿನ ಮುಂದೆ ಎಷ್ಟು ದಿನ ನಿಲ್ಲುತ್ತೇವೆ? ಇದರ ಬಗ್ಗೆ ನಾನು ಒಂದು ಪ್ರಶ್ನೆ ಕೇಳಲು ಬಯಸುತ್ತೇನೆ. ಆ ಸಂಬಂಧ ದಾಖಲಾಗಿರುವ ಪ್ರಕರಣದ ಪ್ರಸ್ತುತ ಸ್ಥಿತಿ ಏನು? ಇಂತಹ ಹೇಯ ಕೃತ್ಯ ಎಸಗಿದವರ ವಿರುದ್ಧ ನ್ಯಾಯ ದೊರಕಿಸಿಕೊಡಲು ಸರ್ಕಾರ ಏನಾದರೂ ಮಾಡಿದೆಯೇ? ನಾನು ಮತ್ತೆ ಹೇಳುತ್ತೇನೆ: ಈ ದೇಶವು ನ್ಯಾಯವನ್ನು ಬಯಸುವವರಿಗೆ ನ್ಯಾಯವನ್ನು ನಿರಾಕರಿಸುವ ದೇಶವಾಗಿದೆ.

ನೀವು ಮಣಿಪುರಕ್ಕೆ ಏಕೆ ಹೋಗಲಿಲ್ಲವೇಕೆ?

ದೆಹಲಿಯಲ್ಲಿ ಚುನಾವಣೆ ನಡೆಯುತ್ತಿದ್ದಾಗ, ಪ್ರಧಾನಿ ಮೋದಿ ಕುಂಭಮೇಳದಲ್ಲಿ ಸ್ನಾನ ಮಾಡುತ್ತಿದ್ದಾರೆ ಎಂಬ ವರದಿಗಳು ಹರಡುತ್ತಿದ್ದವು. ಆದರೆ ಪ್ರಧಾನಿ ಮಣಿಪುರಕ್ಕೆ ಏಕೆ ಹೋಗಲಿಲ್ಲ? ಕುಂಭಮೇಳದಲ್ಲಿ ಮಡಿದವರ ಸಂಖ್ಯೆ ಲೆಕ್ಕಕ್ಕೆ ಸಿಗುವುದಿಲ್ಲ.

ಡೇಟಾ ಕೊರತೆ...

ಅದೇ ರೀತಿ, ಮಣಿಪುರ ಗಲಭೆಯಲ್ಲಿ ಸತ್ತವರ ಸಂಖ್ಯೆಯೂ ಲೆಕ್ಕವಿಲ್ಲದಷ್ಟು. ಈ ನಿಟ್ಟಿನಲ್ಲಿ ದತ್ತಾಂಶವನ್ನು ನಾಶಪಡಿಸಲಾಗುತ್ತಿದೆ. ಸಂಸತ್ತಿನಲ್ಲಿಯೂ ಸಹ, ಪ್ರಮುಖ ದತ್ತಾಂಶಗಳು ಕಣ್ಮರೆಯಾಗುತ್ತಿವೆ. ಕ್ರಿಶ್ಚಿಯನ್ ಚರ್ಚ್‌ಗಳ ಮೇಲಿನ ಹಿಂಸಾಚಾರದ ಘಟನೆಗಳ ಬಗ್ಗೆ ನಾನು ಸಂಸತ್ತಿನಲ್ಲಿ ಪ್ರಶ್ನೆ ಕೇಳಿದ್ದೆ. ನನಗೆ ಸಿಕ್ಕ ಉತ್ತರವೆಂದರೆ ಫೆಡರಲ್ ಸರ್ಕಾರಕ್ಕೆ ಇದರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು.

ದುಷ್ಕೃತ್ಯಗಳನ್ನು ಬೆಂಬಲಿಸುವ ಸರ್ಕಾರ

ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರು ಮತ್ತು ಅಂಚಿನಲ್ಲಿರುವ ಜನರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ. ಇವುಗಳನ್ನು ತಡೆಯುವ ಬದಲು, ಸರ್ಕಾರ ಈ ದೌರ್ಜನ್ಯಗಳನ್ನು ಬೆಂಬಲಿಸುತ್ತಿದೆ. ಉತ್ತರ ಪ್ರದೇಶದಲ್ಲಿ ಗಲಭೆಯನ್ನು ಪ್ರಚೋದಿಸುವ ಪ್ರಯತ್ನಗಳನ್ನು ತಡೆಯಲು ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಬೇಕಾಯಿತು.

ದೇಶಾದ್ಯಂತ ಗಲಭೆಗಳು ಮತ್ತು ಅಭದ್ರತೆ ಹೆಚ್ಚುತ್ತಲೇ ಇದ್ದರೆ, ದೇಶವು ಆರ್ಥಿಕವಾಗಿ ಹೇಗೆ ಪ್ರಗತಿ ಹೊಂದಲು ಸಾಧ್ಯ? ದೇಶದ ಬೆಳವಣಿಗೆ ದರ ಕುಸಿಯುತ್ತಲೇ ಇದೆ ಎಂದು ಆರ್ಥಿಕ ಸಮೀಕ್ಷೆ ಹೇಳಿದೆ. ಗಲಭೆ, ಹಿಂಸಾತ್ಮಕ ಉಗ್ರವಾದಕ್ಕೆ ಪ್ರಚೋದನೆ ನೀಡುವ ಬದಲು ದೇಶದ ಆರ್ಥಿಕ ಅಭಿವೃದ್ಧಿಯತ್ತ ಸರಕಾರ ಗಮನಹರಿಸಬೇಕು.

ಅಸಡ್ಡೆ ಸರ್ಕಾರ

ಅಧ್ಯಕ್ಷೀಯ ಭಾಷಣವು ಪೊಳ್ಳು ಭರವಸೆಗಳಿಂದ ತುಂಬಿದೆ. ಬೆಲೆ ಏರಿಕೆಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ನಿರುದ್ಯೋಗದ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ದೇಶದಲ್ಲಿ ಹೆಚ್ಚುತ್ತಿರುವ ಅಸಮಾನತೆಯ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ಹವಾಮಾನ ಬದಲಾವಣೆ ಅಥವಾ ಅದನ್ನು ಎದುರಿಸುವ ಯಾವುದೇ ಯೋಜನೆಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ.

ನಮ್ಮ ಯುವಕರಿಗೆ ಶಾಶ್ವತ ಉದ್ಯೋಗಗಳು ಬೇಕು. ನಮಗೆ ಒಳ್ಳೆಯ ಸಂಬಳ ಬೇಕು. ದೇಶದ ಜನರು ಗಗನಕ್ಕೇರುತ್ತಿರುವ ಹಣದುಬ್ಬರ, ನಿರುದ್ಯೋಗ ಮತ್ತು ಹೆಚ್ಚುತ್ತಿರುವ ಅಸಮಾನತೆಯಿಂದ ತೀವ್ರವಾಗಿ ಬಳಲುತ್ತಿದ್ದಾರೆ. ಆದರೂ ಈ ಸರ್ಕಾರ ಯಾವುದರ ಬಗ್ಗೆಯೂ ಕಾಳಜಿ ವಹಿಸುತ್ತಿಲ್ಲ ಎಂದು ಎ.ಎ. ರಹೀಮ್ ಹೇಳಿದರು.

ರೆಡ್ ಬುಕ್ ಡೇ... ಪುಟ 16 ರಿಂದ

ಗುಣಲಕ್ಷಣಗಳನ್ನು ಹೊಂದಿದೆ. ಆ ಅಭಿವೃದ್ಧಿಯ ವಿವಿಧ ಅಂಶಗಳನ್ನು ಗುರುತಿಸುವುದು ಅವಶ್ಯಕ. ಆ ಅಭಿವೃದ್ಧಿಯ ಪ್ರಯಾಣವು ಸರಳ ರೇಖೆಯಲ್ಲಿ ಸಾಗುವುದಿಲ್ಲ. ಈ ಅಭಿವೃದ್ಧಿಯ ಪ್ರಯಾಣವು ಪ್ರಗತಿ ಮತ್ತು ಹಿನ್ನಡೆಗಳಿಂದ ತುಂಬಿದೆ. ಆದರೆ, ವರ್ಗ ಹೋರಾಟವು ನಿರಂತರವಾಗಿ ಮುಂದುವರಿದರೂ, ಕಮ್ಯುನಿಸ್ಟ್ ಸಾಮಾಜಿಕ ವ್ಯವಸ್ಥೆಯ ಗುರಿಯತ್ತ ಪ್ರಯಾಣ, ಅದರ ಮೊದಲ ಹಂತ ಸಮಾಜವಾದ, ಎಂದಿಗೂ ಕೊನೆಗೊಳ್ಳುವುದಿಲ್ಲ. ಇತಿಹಾಸದ ಈ ದೀರ್ಘ ದೃಷ್ಟಿಕೋನದಿಂದಲೇ ಮಾರ್ಕ್ಸ್‌ವಾದಿ ಮೂಲಗಳು ಜರ್ಮನಿ ಮತ್ತು ರಷ್ಯಾದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ದಾಖಲಿಸಿವೆ. ಸಾಮಾಜಿಕ–ರಾಜಕೀಯ ಮತ್ತು ಆರ್ಥಿಕ ವಿದ್ಯಮಾನಗಳ ಬಗ್ಗೆ ಮಾರ್ಕ್ಸ್ ಮತ್ತು ಎಂಗೆಲ್ಸ್ ರ ವಿಧಾನವನ್ನು ಅರ್ಥಮಾಡಿಕೊಳ್ಳುವುದು ಉಪಯುಕ್ತವಾಗಿದೆ.

ಭಾರತದಲ್ಲಿ ಬಂಡವಾಳಶಾಹಿ ಊಳಿಗಮಾನ್ಯ ಪ್ರಾಬಲ್ಯ ಮತ್ತು ಅಂತರರಾಷ್ಟ್ರೀಯ ಬಂಡವಾಳದ ಶೋಷಣೆ ಮುಂದುವರೆದಿದೆ. ಜೀವನ ಮಟ್ಟ ಕುಸಿಯುತ್ತಿರುವಾಗ ಈ ದೇಶದ ಸಂಪತ್ತನ್ನು ಕೆಲವರು ದೋಚುತ್ತಿದ್ದಾರೆ. ಅವರು ರಾಷ್ಟ್ರೀಯ ಸಂಪತ್ತಾಗಿರುವ ನೈಸರ್ಗಿಕ ಸಂಪನ್ಮೂಲಗಳನ್ನು ತಮ್ಮ ಖಾಸಗಿ ಸ್ವತ್ತುಗಳಾಗಿ ಮಾಡಿಕೊಂಡಿದ್ದಾರೆ. ಆದ್ದರಿಂದಲೇ ಮತ್ತೊಮ್ಮೆ ಕಮ್ಯುನಿಸ್ಟ್ ಪ್ರಣಾಳಿಕೆ ಜನರಿಗೆ ಅದರಲ್ಲೂ ಯುವಕರಿಗೆ ಹತ್ತಿರವಾಗಬೇಕು.

–ಸಿಚಿ

ದುಡಿಯುವ ಬಡಜನರ ಬಗ್ಗೆ....... ಪುಟ 13 ರಿಂದ

ಕಾಣಿಸುವುದಿಲ್ಲ. ಆದ್ದರಿಂದ, ದುಡಿಯುವ ಬಡವರ ಬೆಂಬಲವನ್ನು ದೂರಮಾಡದೇ, ಈ ತೆರಿಗೆ ರಿಯಾಯಿತಿಗಳ ಫಲಾನುಭವಿಗಳಿಂದ ಗಮನಾರ್ಹ ಬೆಂಬಲವನ್ನು ಪಡೆಯಬಹುದು ಎಂದು ಸರ್ಕಾರ ಭಾವಿಸುತ್ತದೆ. ದುಡಿಯುವ ಬಡವರ ಸಂಕಷ್ಟಗಳು ಮೂಲದಲ್ಲಿ ಹಲವಾರು ಕಾರಣಗಳನ್ನು ಹೊಂದಿರುವುದರಿಂದ, ಅವಕ್ಕೆ ಸರಕಾರದ ವಿತ್ತೀಯ ಕಾರ್ಯತಂತ್ರ ಕಾರಣ ಎಂಬ ದೂಷಣೆಯಿಂದ ಸುಲಭವಾಗಿ ತಪ್ಪಿಸಿಕೊಳ್ಳುವಂತೆ ಮಾಡಬಹುದು. ಅದಲ್ಲದೆ, ಎನ್‌ಡಿಎ ಸರ್ಕಾರದ ಆರ್ಥಿಕ ಕಾರ್ಯತಂತ್ರದ ಪರಿಣಾಮವಾಗಿ ದುಡಿಯುವ ಬಡವರ ಬೆಂಬಲದಲ್ಲಿ ಯಾವುದೇ ಇಳಿಕೆ ಕಂಡುಬಂದರೆ, ಆತುಕೊಳ್ಳಲು ಹಿಂದುತ್ವದ ಕಾರ್ಯಕ್ರಮವಂತೂ ಇದ್ದೇ ಇರುತ್ತದೆ.

ದುಡಿಯುವ ಬಡವರ ಬಗ್ಗೆ ಸಿನಿಕತನ–ಹೊಸ ವಿದ್ಯಮಾನ

2025–26ರ ಬಜೆಟ್ ಏನನ್ನು ಆಧರಿಸಿದೆಯೋ ಅದನ್ನು ನಾವು ಒಂದು "ಕಾರ್ಯತಂತ್ರ" ಎಂದು ಕರೆಯುವ ಮೂಲಕ ಸರ್ಕಾರವು ಒಂದು ಮುಂದಾಲೋಚನೆಯನ್ನು ಹೊಂದಿದೆ ಎಂದು ಭಾವಿಸುತ್ತೇವೆ ಎಂದೇನೂ ಅಲ್ಲ. ಆದರೆ ಎನ್‌ಡಿಎ ಸರ್ಕಾರವು ಇತ್ತೀಚೆಗೆ ಮಧ್ಯಮ ವರ್ಗದ ಬಗ್ಗೆ ಬಲು ಹೊಗಳಿಕೆಯ ಮಾತುಗಳನ್ನು ಪದೇ ಪದೇ ಉಲ್ಲೇಖಿಸುತ್ತಿರುವುದು ಗಮನಾರ್ಹವಾಗಿದೆ. ಪ್ರಸ್ತುತ ಬಜೆಟ್ ಅಧಿವೇಶನದ ಆರಂಭದಲ್ಲಿ ಹಲವಾರು ಸಮಕಾಲೀನ ವಿಷಯಗಳ ಕುರಿತು ಸರ್ಕಾರದ ದೃಷ್ಟಿಕೋನವನ್ನು ವ್ಯಕ್ತಪಡಿಸುವುದಕ್ಕಾಗಿ ರಾಷ್ಟ್ರಾಧ್ಯಕ್ಷೆ ಮುರ್ಮು ಅವರು ಮಾಡಿದ ಸಾಂಪ್ರದಾಯಿಕ ಭಾಷಣವು, ಮಧ್ಯಮ ವರ್ಗವನ್ನು ಹೊಗಳಿ ಹೊಗಳಿ ಅಟ್ಟಕೇರಿಸುವ ಮಾತುಗಳಿಂದ ಕೂಡಿತ್ತು. ಹಣಕಾಸು ಸಚಿವರು ಮಧ್ಯಮ ವರ್ಗವನ್ನು ಮತ್ತು ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಅದರ ಸಾಮರ್ಥ್ಯವನ್ನು ಪದೇ ಪದೇ ಶ್ಲಾಘಿಸಿದರು. ಇದೆಲ್ಲವೂ ಬಜೆಟ್ ಒಂದು ಆಕಸ್ಮಿಕ ಕಲಸುಮೇಲೋಗರವಲ್ಲ, ಅದು ಒಂದು "ಕಾರ್ಯತಂತ್ರ"ದ ಭಾಗವಾಗಿದೆ – ಕಾರ್ಪೊರೇಟ್–ಹಿಂದುತ್ವ ಮೈತ್ರಿಕೂಟದ ಪ್ರಾಬಲ್ಯವು ಮತ್ತಷ್ಟು ಬೆಂಬಲವನ್ನು ಗಳಿಸುವ ಉದ್ದೇಶದಿಂದ ದುಡಿಯುವ ಜನರು ಮತ್ತು ಮಧ್ಯಮ ವರ್ಗದ ನಡುವೆ ವಿಭಜನೆಯನ್ನು ಸೃಷ್ಟಿಸುವ ಒಂದು ತಂತ್ರವಾಗಿದೆ – ಎಂಬುದನ್ನು ಸೂಚಿಸುತ್ತದೆ. ಅದೇ ಸಮಯದಲ್ಲಿ, ಈ "ಕಾರ್ಯತಂತ್ರ"ವು ನವ ಉದಾರವಾದಿ ಸಾಂಪ್ರದಾಯಿಕತೆಗೆ ಅಂಟಿಕೊಳ್ಳುವ ಮೂಲಕ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಸಂತೋಷಪಡಿಸುತ್ತದೆ: ಶ್ರೀಮಂತರ ಮೇಲೆ ತೆರಿಗೆ ವಿಧಿಸುವುದೂ ಇಲ್ಲ ಅಥವಾ ಜಿಡಿಪಿಯ ಶೇಕಡಾವಾರು ಪ್ರಮಾಣದಲ್ಲಿ ವಿತ್ತೀಯ ಕೊರತೆಯ ಮಿತಿಯನ್ನೂ ಮೀರುವುದಿಲ್ಲ.

ಸಿನಿಕತನ ಇರುವುದು ಇಲ್ಲಿಯೇ: ಮಧ್ಯಮ ವರ್ಗದೊಳಗೆ ತನ್ನ ಬೆಂಬಲವನ್ನು ಹೆಚ್ಚಿಸಿಕೊಳ್ಳಲು ಸರ್ಕಾರವು ದುಡಿಯುವ ಬಡಜನರ ಹಿತಾಸಕ್ತಿಗಳನ್ನು ಬಲಿ ಕೊಡಲು ಸಿದ್ಧವಾಗಿದೆ. ತನಗೆ ಭಾರೀ ಬೆಂಬಲವಿದೆ ಎಂದು ಹೇಳಿಕೊಳ್ಳಲು ದುಡಿಯುವ ಬಡವರನ್ನು ನೋಯಿಸಲು ಅದು ಸಿದ್ಧವಾಗಿದೆ. ಬಂಡವಾಳಶಾಹಿ ಸಮಾಜದಲ್ಲಿ ಇದು ಸಾಮಾನ್ಯವಾಗಿ ನಡೆಯುವ ಸಂಗತಿಯೇ. ಆದರೆ, ಭಾರತದಲ್ಲಿ ಇದಂತೂ ಒಂದು ಹೊಸ ವಿದ್ಯಮಾನವೇ. ಭಾರತದಲ್ಲಿ ಆಡಳಿತ ನಡೆಸುವ ರಾಜಕೀಯ ಪಕ್ಷಗಳು ತಾವು ಏನು ಮಾಡುತ್ತಿದ್ದೇವೆಯೋ ಅದು ದುಡಿಯುವ ಬಡವರ ಒಳಿತಿಗಾಗಿ ಎಂದು ಸದಾ ಹೇಳಿಕೊಳ್ಳುತ್ತವೆ. ಆದರೆ, ಈಗ, ನಮ್ಮಲ್ಲಿ ಮಧ್ಯಮ ವರ್ಗಕ್ಕೆ ಬಹಿರಂಗವಾಗಿ ಆದ್ಯತೆ ನೀಡುವ ಮತ್ತು ಹಾಗೆ ಮಾಡುವಾಗ ದುಡಿಯುವ ಬಡವರನ್ನು ಶಿಕ್ಷಿಸುವ ಒಂದು ಸರ್ಕಾರವಿದೆ.

ಈ "ಕಾರ್ಯತಂತ್ರದ ನಾವೀನ್ಯತೆ"ಯನ್ನು ಹೊರತುಪಡಿಸಿದರೆ, 2025–26ರ ಬಜೆಟ್, ಹಿಂದಿನ ನವ ಉದಾರವಾದಿ ಬಜೆಟ್‌ಗಳು ಸಾಮಾನ್ಯವಾಗಿ ಅನುಸರಿಸಿದ, ತುಳಿದು ತುಳಿದು ಸವೆದಿರುವ ಹಾದಿಯನ್ನೇ ಅನುಸರಿಸುತ್ತದೆ: ಅಂದರೆ, ಸ್ವಾಮಿನಾಥನ್ ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ಸೂಕ್ತ ಬೆಲೆಗಾಗಿ ರೈತರ ಬೇಡಿಕೆಗಳ ಸಂಪೂರ್ಣ ನಿರ್ಲಕ್ಷ್ಯ; ವಿಮಾ ವಲಯವನ್ನು 100 ಪ್ರತಿಶತ ವಿದೇಶಿ ಮಾಲೀಕತ್ವದ ಕಂಪನಿಗಳಿಗೆ ತೆರೆಯುವ ಮೂಲಕ ವಿದೇಶಿ ಕಂಪನಿಗಳಿಗೆ ಹಾಸಿದ ರತ್ನಗಂಬಳಿಯನ್ನು ಮತ್ತಷ್ಟು ವಿಸ್ತರಿಸುವುದು; ಮತ್ತು "ಗೂಳಿ ಹುಮ್ಮಸ್ಸ"ನ್ನು ತೋರಿಸುವಂತೆ ಮತ್ತು ಬೃಹತ್ ಹೂಡಿಕೆಯನ್ನು ಕೈಗೊಳ್ಳುವಂತೆ ದೇಶೀಯ ಏಕಸ್ವಾಮ್ಯ ಬಂಡವಾಳಕ್ಕೆ ನೀತಿಬೋಧೆ (ಲಾಭದ ಪಾಲು ಹೆಚ್ಚುತ್ತಿರುವಾಗ ವೇತನದ ಸ್ಥಗಿತತೆಯಿಂದ ಉಂಟಾಗುವ ಆದಾಯದ ಅಸಮಾನ ಹಂಚಿಕೆಯಿಂದಾಗಿ ಬಳಕೆ ಸರಕುಗಳಿಗೆ ನಿಧಾನಗತಿಯ ಬೇಡಿಕೆಯೇ ಹೂಡಿಕೆಯ ಕೊರತೆಗೆ ಕಾರಣ ಎಂದು ಆರ್ಥಿಕ ಸಮೀಕ್ಷೆಯು ಸ್ಪಷ್ಟವಾಗಿ ಹೇಳಿದ್ದರೂ ಸಹ).

ವಿದೇಶಿ ಹಣಕಾಸು ಬಂಡವಾಳವನ್ನು ಆಕರ್ಷಿಸುವ ಮೂಲಕ ರೂಪಾಯಿಯ ಕುಸಿತವನ್ನು ನಿಲ್ಲಿಸಬಹುದು ಎಂದು ಸರ್ಕಾರವು ಆಶಿಸಿರಬಹುದು. ವಿದೇಶಿ ಹೂಡಿಕೆದಾರರನ್ನು ಈ ರೀತಿಯಲ್ಲಿ ಪುಸಲಾಯಿಸುವುದು ನಿರರ್ಥಕ ಎಂಬುದು ಬಜೆಟ್ ಪ್ರಕಟಗೊಂಡ ಕೇವಲ ಎರಡು ದಿನಗಳಲ್ಲಿ ಬಹಿರಂಗಗೊಂಡಿದೆ. ರೂಪಾಯಿ ಕುಸಿತ ನಿಲ್ಲಲಿಲ್ಲ. ಫೆಬ್ರವರಿ 3ರಂದು ಅದು ಒಂದು ತೀವ್ರ ಕುಸಿತವನ್ನೇ ಕಂಡಿತು. ರೂಪಾಯಿ ಮೌಲ್ಯವು ಡಾಲರ್‌ಗೆ 87 ರೂ.ಗಳಿಗಿಂತಲೂ ಕೆಳಗಿಳಿಯಿತು. ಕಥೆಯ ನೀತಿ ಎಂದರೆ, ಜನರ ಒಂದು ಗುಂಪಿನ ವಿರುದ್ಧವಾಗಿ ಸಿನಿಕತನದಿಂದ ಮತ್ತೊಂದು ಗುಂಪನ್ನು ಬಳಸಿಕೊಳ್ಳುವುದು, ಅದು ಸರ್ಕಾರದ ಪರ ಜನಾಭಿಪ್ರಾಯವನ್ನು ರೂಪಿಸುವಲ್ಲಿ ಸಹಾಯ ಮಾಡಿದರೂ ಸಹ, ಯಾವುದೇ ಆರ್ಥಿಕ ಬಿಕ್ಕಟ್ಟನ್ನೂ ಪರಿಹರಿಸುವುದಿಲ್ಲ.

ಬಜೆಟ್‌ನಲ್ಲಿ ಕೃಷಿಯನ್ನು ನಿರ್ಲಕ್ಷಿಸಲಾಗಿದೆ

ಪ್ರೊ. ಆರ್. ರಾಮಕುಮಾರ್,
ಪ್ರಾಧ್ಯಾಪಕರು, ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್, ಮುಂಬೈ.

ಯೋಜನೆಗಳು ಮತ್ತು ಕಾರ್ಯಕ್ರಮಗಳು ಸಂಪನ್ಮೂಲಗಳ ಕೊರತೆಯಿಂದ ಬಳಲುತ್ತಿವೆ ಮತ್ತು ರೈತರು ಮತ್ತು ಕೃಷಿ ವಲಯವನ್ನು ಎದುರಿಸುವ ನಿಜವಾದ ಸಮಸ್ಯೆಗಳು ಬದಿಗಿಡಲ್ಪಟ್ಟಿವೆ

ಆರ್ಥಿಕತೆಯ ಸವಾಲುಗಳಿಗೆ ಸರ್ಕಾರವು ನೀಡುವ ಪ್ರತಿಕ್ರಿಯೆಯೇ ಬಜೆಟ್. 2024–25ರ ಆರ್ಥಿಕ ಸಮೀಕ್ಷೆಯಲ್ಲಿ ಭಾರತೀಯ ಕೃಷಿಯ ಸ್ಥಿತಿಯ ಬಗ್ಗೆ ಸಕಾರಾತ್ಮಕ ನಿರೂಪಣೆಯನ್ನು ಹರಿಯಬಿಡುವ ಪ್ರಯತ್ನವನ್ನು ಸರಕಾರ ಮಾಡಿದೆ. ಉತ್ಪಾದಕತೆಯ ಹೆಚ್ಚಳ, ಬೆಳೆ ವೈವಿಧ್ಯೀಕರಣದ ವಿಸ್ತರಣೆ ಮತ್ತು ರೈತರ ಆದಾಯದಲ್ಲಿನ ಹೆಚ್ಚಳದಿಂದಾಗಿ ಭಾರತೀಯ ಕೃಷಿ ಗಮನಾರ್ಹವಾದ "ಸ್ಥಿತಿಸ್ಥಾಪಕತ್ವ"ವನ್ನು (ಭಾರೀ ವ್ಯತ್ಯಯಗಳಿಗೆ ತಾಳಿಕೆಯನ್ನು) ಹೊಂದಿದೆ ಎಂದು ಅದು ಹೇಳಿಕೊಂಡಿದೆ. ಈ ಹೇಳಿಕೆಗಳು ಅನುಮಾನಾಸ್ಪದ ಅಥವಾ ಭಾರೀ ಉತ್ಪ್ರೇಕ್ಷೆಯವು.

ಮೊದಲಿಗೆ, ಬೆಳಗಳ ಉತ್ಪಾದಕತೆಯಲ್ಲಿ ಯಾವುದೇ ಗಮನಾರ್ಹ ಜಿಗಿತವಿಲ್ಲ. ಕೆಲವು ಸೂಚ್ಯಂಕಗಳನ್ನು ಆಧರಿಸಿದ ಸರಳ ವಿಶ್ಲೇಷಣೆಯು, ಉದಾಹರಣೆಗೆ–ಆಹಾರಧಾನ್ಯ ಬೆಳೆಗಳು ಮತ್ತು ಆಹಾರೇತರ ಬೆಳೆಗಳಲ್ಲಿ 2014–15 ಮತ್ತು 2022–23ರ ನಡುವಿನ ಇಳುವರಿ ಬೆಳವಣಿಗೆಯ ದರಗಳು, 2004–05 ಮತ್ತು 2013–14ರ ನಡುವಿನ ಇಳುವರಿ ಬೆಳವಣಿಗೆಯ ದರಗಳಿಗಿಂತ ಸ್ವಲ್ಪ ಕಡಿಮೆಯಾಗಿದೆ ಎಂದು ತೋರಿಸುತ್ತದೆ. ಎರಡನೆಯದಾಗಿ, ಕೆಲವು ರಾಜ್ಯಗಳಲ್ಲಿ ದ್ವಿದಳ ಧಾನ್ಯಗಳತ್ತ ಅಲ್ಪ ಬದಲಾವಣೆಗಳನ್ನು ಹೊರತುಪಡಿಸಿ, ಭಾರತದಲ್ಲಿ ಬೆಳೆ ವೈವಿಧ್ಯೀಕರಣದ ಯಾವುದೇ ಪ್ರಮುಖ ಪುರಾವೆಗಳಿಲ್ಲ. ವೈವಿಧ್ಯೀಕರಣವು ನಿಜವಾಗಿದ್ದರೆ, ಅದು ಬೆಳೆ ವಲಯದ ಹೊರಗೆ ಜಾನುವಾರು ಮತ್ತು ಮೀನುಗಾರಿಕೆ ಕ್ಷೇತ್ರಗಳಲ್ಲಿ ಮಾತ್ರ ನಡೆದಿದೆ. ಆದರೆ ಜಾನುವಾರು ಮತ್ತು ಮೀನುಗಾರಿಕೆ ವಲಯಗಳಲ್ಲಿ ತೊಡಗಿರುವ ಕುಟುಂಬಗಳ ಪ್ರಮಾಣ ಬೆಳೆ ವಲಯದಲ್ಲಿನ ಕುಟುಂಬಗಳ ಅನುಗುಣವಾದ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಮೂರನೆಯದಾಗಿ, ಸರ್ಕಾರವು ರೈತರ ಆದಾಯದಲ್ಲಿ ಏರಿಕೆಯಾಗಿದೆಯೆಂದು ಹೇಳುತ್ತಿದ್ದರೂ, ವಾಸ್ತವದ ದತ್ತಾಂಶವು ಇದಕ್ಕೆ ವಿರುದ್ಧವಾಗಿದೆ–ಇತ್ತೀಚಿನ ವರ್ಷಗಳಲ್ಲಿ ರೈತರ ನೈಜ ಆದಾಯದಲ್ಲಿ ಸ್ಥಗಿತತೆ ಅಥವಾ ಕುಸಿತ ಕಂಡುಬಂದಿದೆ.

ಆರ್ಥಿಕ ಸಮೀಕ್ಷೆಯಲ್ಲಿ ಕೊಚ್ಚಿಕೊಂಡಿರುವ ಭಾರತೀಯ ಕೃಷಿಯ "ಸ್ಥಿತಿಸ್ಥಾಪಕತ್ವ"ವು ಯಾವುದೇ ನೀತಿಯ ಪರಿಣಾಮವಲ್ಲ,ಬದಲಿಗೆ, ಕೋವಿಡ್ ನಂತರದ ವರ್ಷಗಳಲ್ಲಿ ಅಂತರರಾಷ್ಟ್ರೀಯ ಬೆಲೆಗಳ ಸ್ಥಿರತೆ ಮತ್ತು ಅನುಕೂಲಕರ ಹವಾಮಾನ ಪರಿಸ್ಥಿತಿಗಳು ಸೇರಿದಂತೆ, ಹಲವಾರು ಆಕಸ್ಮಿಕ ಅಂಶಗಳ ಪರಿಣಾಮವಷ್ಟೇ. ಅದೇ ಸಮಯದಲ್ಲಿ, ಕಡಿಮೆ ಉತ್ಪಾದಕತೆ, ಬೆಲೆಗಳ ನಿಧಾನಗತಿಯ ಬೆಳವಣಿಗೆ,



ಲಾಭದಾಯಕತೆಯ ಕುಗ್ಗುವಿಕೆ, ನೈಜ ಆದಾಯ ಮತ್ತು ಗ್ರಾಮೀಣ ನೈಜ ವೇತನಗಳ ಕುಸಿತ ಮುಂತಾದ ಹೆಚ್ಚು ಆಳವಾಗಿ ಬೇರೂರಿರುವ ಸಮಸ್ಯೆಗಳು, ಕೃಷಿಯಿಂದ ಹೊರಹೊಮ್ಮುವ ಯಾವುದೇ ಬೆಳವಣಿಗೆಯ ಪ್ರಚೋದನೆಗೆ ತೊಡಕಾಗುವ ಪರಿಸ್ಥಿತಿಗಳನ್ನು ಸೃಷ್ಟಿಸುತ್ತಲೇ ಇವೆ.

ಕಡಿಮೆಯಾದ ಹಂಚಿಕೆಗಳು

ಬಜೆಟ್‌ಗೆ ಮುಂಚಿನ ಚರ್ಚೆಗಳಿಂದ, ಸರ್ಕಾರವು ಕೃಷಿಯ ಮೇಲಿನ ತನ್ನ ಹಿಂದಿನ ಹಣಕಾಸಿನ ನಿರ್ಲಕ್ಷ್ಯವನ್ನು ತಿರುವು ಮುರುವು ಮಾಡುತ್ತದೆ ಎಂದು ನಿರೀಕ್ಷಿಸಲಾಗಿತ್ತು, ಈ ವರೆಗಿನ ಹಣಕಾಸಿನ ನಿರ್ಲಕ್ಷ್ಯ ಹೆಚ್ಚಾಗಿ 2020 ರ ನಂತರದ ರೈತರ ಆಂದೋಲನಗಳಿಗೆ ಶಿಕ್ಷೆಯ ಕ್ರಮವೆಂದು ಪರಿಗಣಿಸಲಾಗಿತ್ತು. ಜೂನ್ 2024ರಲ್ಲಿ ಗ್ರಾಮೀಣ ಮತದಾರರು ಬಿಜೆಪಿಗೆ ನೀಡಿದ ಕಠೋರ ಆಘಾತವು, ಹಿಂದಿನ ಹಾದಿಯ ತಿದ್ದುಪಡಿಗೆ ಪ್ರೇರಣೆಯಾಗಬಹುದು ಎಂದು ಹೇಳಲಾಗಿತ್ತು. ಆದರೆ ಬಜೆಟ್ ಈ ಆಶಾವಾದಿ ನಿರೀಕ್ಷೆಗಳನ್ನು ಸುಳ್ಳು ಮಾಡುತ್ತದೆ. ಕೃಷಿಯ ಹಣಕಾಸಿನ ನಿರ್ಲಕ್ಷ್ಯ ಮುಂದುವರೆದಿದೆ.

ಕೃಷಿ ಸಂಶೋಧನೆಯೊಂದಿಗೆ ಪ್ರಾರಂಭಿಸೋಣ, ಇದು ಹವಾಮಾನ ಸ್ಥಿತಿಸ್ಥಾಪಕತ್ವವನ್ನು ಬೆಳೆಸುವುದರ ಜೊತೆಗೆ ಬೆಳೆ ಇಳುವರಿಯನ್ನು ಹೆಚ್ಚಿಸುವ ಪ್ರಯತ್ನಗಳಿಗೆ ಹೂಡಿಕೆಯ ಕೇಂದ್ರವಾಗಿರಬೇಕು. 2023–24 ಮತ್ತು 2025–26ರ ನಡುವೆ ಕೃಷಿ ಸಂಶೋಧನೆ ಮತ್ತು ಶಿಕ್ಷಣದ ಮೇಲಿನ ವೆಚ್ಚದಲ್ಲಿ ಒಟ್ಟಾರೆ ಹೆಚ್ಚಳ ಕೇವಲ ರೂ.21 ಕೋಟಿ. ಇದನ್ನು ನೈಸರ್ಗಿಕ ಕೃಷಿಯ ಮೇಲಿನ ಹುಸಿ ವೈಜ್ಞಾನಿಕ ರಾಷ್ಟ್ರೀಯ ಮಿಷನ್‌ನೊಂದಿಗೆ ಹೋಲಿಕೆ ಮಾಡಿ, ಇದಕ್ಕಾಗಿ 2023–24ರಲ್ಲಿ ರೂ.30 ಕೋಟಿ ಹಂಚಿಕೆಯಾಗಿತ್ತು. ಆದರೆ 2025–26ಕ್ಕೆ ರೂ.616 ಕೋಟಿ ಹಂಚಿಕೆಯಾಗಿದೆ. ಇದು ತಲೆಕೆಳಗಾದ ಆದ್ಯತೆಗಳ ಪ್ರತಿಬಿಂಬ ಮಾತ್ರವಲ್ಲ, ಆಘಾತಕಾರಿ ಹುಂಬತನ ಸಹ.

ಕೃಷಿಯಲ್ಲಿನ ಯೋಜನೆಗಳು ಮತ್ತು ಸಂಸ್ಥೆಗಳ ಮೇಲಿನ ವೆಚ್ಚಗಳಿಗೆ ಒಂದು ಒಟ್ಟಾರೆ ವರ್ಗವಾಗಿರುವ ಬೆಳೆ ಸಾಕಣೆಯನ್ನು ನಾವು ಪರಿಗಣಿಸಿದರೆ, 2023–24 ಮತ್ತು 2025–26ರ ನಡುವೆ ಹಂಚಿಕೆ ರೂ. 5,195 ಕೋಟಿಗಳಷ್ಟು ಕಡಿಮೆಯಾಗಿದೆ. ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಗೆ ರೂ. 3,622 ಕೋಟಿಗಳಷ್ಟು ಹಂಚಿಕೆಯಲ್ಲಿ ತೀವ್ರ ಕಡಿತವಾಗಿದೆ. 2024–25 ಮತ್ತು 2025–26ರ ನಡುವೆ, ವಿನ್ಯಾಸ ವೈಫಲ್ಯಗಳಿಂದಾಗಿ ಅನೇಕ ರಾಜ್ಯಗಳು ಈ ಯೋಜನೆಯಿಂದ ಹಿಂದೆ ಸರಿದಿವೆ. ಇತರ ಕೇಂದ್ರ ವಲಯದ ಯೋಜನೆಗಳಿಗೆ ಹಂಚಿಕೆಗಳು ಸಹ ಸ್ಥಗಿತಗೊಂಡಿವೆ ಅಥವಾ ಕುಸಿದಿವೆ.

ಹೊಸ ಬೆಳೆ ಆಧಾರಿತ 'ಮಿಶನ್' (ನಿರ್ದಿಷ್ಟ ಗುರಿಯ ಸಮಯಬದ್ಧ ಕಾರ್ಯಕ್ರಮ)ಗಳ ಕುರಿತು ಬಜೆಟ್ ಭಾಷಣದಲ್ಲಿ ಬಹಳಷ್ಟು ಹೇಳಲಾಗಿದೆ, ಆದರೆ ಇವುಗಳಿಗೆ ಹಂಚಿಕೆಗಳು ಅತ್ಯಲ್ಪವಾಗಿವೆ. ಹತ್ತಿ ತಂತ್ರಜ್ಞಾನ ಮಿಶನ್‌ಗೆ ಹಂಚಿಕೆ ರೂ. 500 ಕೋಟಿ, ದ್ವಿದಳ ಧಾನ್ಯಗಳ ಮಿಷನ್ ರೂ. 1,000 ಕೋಟಿ, ತರಕಾರಿಗಳು ಮತ್ತು ಹಣ್ಣುಗಳ ಮಿಷನ್ ರೂ. 500 ಕೋಟಿ ಮತ್ತು ಹೈಬ್ರಿಡ್ ಬೀಜಗಳ ರಾಷ್ಟ್ರೀಯ ಮಿಷನ್ ರೂ. 100 ಕೋಟಿ. ಬಿಹಾರಕ್ಕೆ ರೂ. 100 ಕೋಟಿ ಹಂಚಿಕೆಯೊಂದಿಗೆ ಹೊಸ ಮಖಾನಾ ಮಂಡಳಿಯನ್ನು ಘೋಷಿಸಲಾಗಿದೆ. ಆದರೆ ಈಗಾಗಲೇ ಅಸ್ತಿತ್ವದಲ್ಲಿರುವ ಕೃಷಿ ಸರಕು ಮಂಡಳಿಗಳು ನಗದು ಕೊರತೆಯಿಂದ ಬಳಲುತ್ತಿವೆ. ಉದಾಹರಣೆಗೆ, 2024–25 ಮತ್ತು 2025–26ರ ನಡುವೆ, ಕಾಫಿ ಮಂಡಳಿಗೆ ಹಂಚಿಕೆ ಬದಲಾಗದೆ ಉಳಿದಿದೆ, ರಬ್ಬರ್ ಮಂಡಳಿಯ ಹಂಚಿಕೆ ಕೇವಲ ರೂ. 40 ಕೋಟಿಯಷ್ಟು ಹೆಚ್ಚಾಗಿದೆ ಮತ್ತು ಮಸಾಲೆ ಮಂಡಳಿಗೆ ಹಂಚಿಕೆ ಕೇವಲ ರೂ. 24 ಕೋಟಿಯಷ್ಟು ಹೆಚ್ಚಾಗಿದೆ. ತೆಂಗಿನಕಾಯಿ ಅಭಿವೃದ್ಧಿ ಮಂಡಳಿಗೆ ಹಂಚಿಕೆಯನ್ನು 2023–24ರಲ್ಲಿ ರೂ. 39 ಕೋಟಿಯಿಂದ 2025–26ರಲ್ಲಿ ರೂ. 35 ಕೋಟಿಗೆ ಕಡಿತಗೊಳಿಸಲಾಗಿದೆ.

ಆರ್ಥಿಕವಾಗಿ ನಿರ್ಲಕ್ಷಿಸಲ್ಪಟ್ಟ ವಲಯಗಳು

ಜಾನುವಾರು ಮತ್ತು ಮೀನುಗಾರಿಕೆಯಲ್ಲಿ ವೈವಿಧ್ಯೀಕರಣದ ಬಗ್ಗೆ ಆರ್ಥಿಕ ಸಮೀಕ್ಷೆಯಲ್ಲಿ ಕೊಚ್ಚಿಕೊಂಡ ಹೊರತಾಗಿಯೂ, ಈ ವಲಯಗಳನ್ನು ಸಹ ಹಣ ಹಂಚಿಕೆಯಲ್ಲಿ ನಿರ್ಲಕ್ಷಿಸಲಾಗಿದೆ. 2024–25 ಮತ್ತು 2025–26ರ ನಡುವೆ ಮೀನುಗಾರಿಕೆಯ ಮೇಲಿನ ಒಟ್ಟು ವೆಚ್ಚವು ಕೇವಲ ರೂ. 87 ಕೋಟಿಯಷ್ಟು ಹೆಚ್ಚಾಗುತ್ತದೆ. 2024–25 ಮತ್ತು 2025–26ರ ನಡುವೆ, ಪಶುಸಂಗೋಪನೆಯ ಮೇಲಿನ ವೆಚ್ಚವು ರೂ. 407 ಕೋಟಿಯಷ್ಟು ಕಡಿಮೆಯಾಗಲಿದೆ ಮತ್ತು ಡೈರಿಯ ಮೇಲಿನ ವೆಚ್ಚವು ಕೇವಲ ರೂ. 321 ಕೋಟಿಯಷ್ಟು ಹೆಚ್ಚಾಗಲಿದೆ. ಒಟ್ಟಾರೆಯಾಗಿ ಪರಿಗಣಿಸಿದರೆ, ಪಶುಸಂಗೋಪನೆ ಮತ್ತು ಡೈರಿಯ ಎಲ್ಲಾ ಬಜೆಟ್ ವೆಚ್ಚಗಳ ಮೇಲಿನ ಒಟ್ಟಾರೆ ವೆಚ್ಚವು 2024–25 ಮತ್ತು 2025–26ರ ನಡುವೆ ಅತ್ಯಲ್ಪ (ರೂ. 319 ಕೋಟಿಯಷ್ಟು) ಹೆಚ್ಚಾಗಲಿದೆ. ಬಜೆಟ್ ಈ ವಲಯಗಳನ್ನು ಬೆಳವಣಿಗೆಯ ಎಂಜಿನ್‌ಗಳಾಗಿ ಚಿತ್ರಿಸುತ್ತದೆ, ಆದರೆ ಹಣ ಹಂಚಿಕೆಯಲ್ಲಿ ಅವುಗಳನ್ನು ಹಿಂಡುತ್ತದೆ.

ಪ್ರಧಾನ ಮಂತ್ರಿ ಧನ್–ಧಾನ್ಯ ಕೃಷಿ ಯೋಜನೆ ಎಂಬ ಹೊಸ ಯೋಜನೆಯನ್ನು ಘೋಷಿಸಲಾಗಿದೆ. ಇದು 'ಮಹತ್ವಾಕಾಂಕ್ಷೆಯ ಜಿಲ್ಲೆಗಳ ಯೋಜನೆ'ಯ ಮಾದರಿಯಲ್ಲಿ. – ಕಡಿಮೆ ಉತ್ಪಾದಕತೆ, ಮಧ್ಯಮ ಬೆಳೆ ತೀವ್ರತೆ ಮತ್ತು ಸರಾಸರಿಗಿಂತ ಕಡಿಮೆ ಸಾಲದ ನಿಯತಾಂಕಗಳನ್ನು–ಹೊಂದಿರುವ 100 ಜಿಲ್ಲೆಗಳನ್ನು ಗುರಿಯಾಗಿಸಿದ ಯೋಜನೆ. ಆದರೆ ಕೃಷಿ ರಾಜ್ಯಕ್ಕೆ ಸಂಬಂಧಿಸಿದ ವಿಷಯ. ಈ ಯೋಜನೆಯ ವಿವರಣೆಯಲ್ಲಿ ಬಜೆಟ್ ಭಾಷಣದಲ್ಲಿ "ರಾಜ್ಯಗಳೊಂದಿಗೆ ಪಾಲುದಾರಿಕೆ" ಎಂದು ಉಲ್ಲೇಖಿಸಲಾಗಿದೆಯಾದರೂ, ಅದರ ಆಡಳಿತವು ಕೇಂದ್ರೀಕೃತ, ಎಲ್ಲ ರಾಜ್ಯಗಳಿಗೂ ಒಂದೇ ರೀತಿಯ ಮತ್ತು ರಾಜ್ಯಗಳಿಗೆ ಆರ್ಥಿಕ ಹೊರೆಯಾಗುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆಯೇ ಎಂದು ಕಾದು ನೋಡಬೇಕಾಗಿದೆ.

ಬಜೆಟ್ ಭಾಷಣದಲ್ಲಿ ಕೃಷಿಯನ್ನು ಹಲವಾರು ಬಾರಿ ಉಲ್ಲೇಖಿಸಿದ್ದರೂ, ಹಣಕಾಸಿನ ಹಂಚಿಕೆಗಳು ಅದಕ್ಕೆ ಅನುಗುಣವಾಗಿಲ್ಲ. ಯೋಜನೆಗಳು ಮತ್ತು ಕಾರ್ಯಕ್ರಮಗಳು ಸಂಪನ್ಮೂಲಗಳ ಕೊರತೆಯಿಂದ ಬಳಲುತ್ತಿವೆ ಮತ್ತು ರೈತರು ಮತ್ತು ಕೃಷಿ ವಲಯವನ್ನು ಎದುರಿಸುತ್ತಿರುವ ನಿಜವಾದ ಸಮಸ್ಯೆಗಳು ಬದಿಗಿಡಲ್ಪಟ್ಟಿವೆ.

ಕನ್ನಡಕ್ಕೆ: ಜಿ.ಎಸ್.ಮಣಿ

(ಕೃಪೆ: ದಿ ಹಿಂದೂ ಫೆಬ್ರವರಿ 02, 2025)





ಕವನ

ಅಕ್ಕ ಕೇಳೇ ಕುಂಭ ಮೇಳ

ಅಂಕೆ ಸಂಖ್ಯೆಗಳ ಅಬ್ಬರದಲ್ಲಿ
ಉಬ್ಬರದ ಅಲೆಯಾದೆಯಾ ಅಕ್ಕಾ
ಕುಬೇರರು ಉಂಡೆದ್ದರು ಬಿರಿಯುವಂತೆ
ಬಡವರ ಹೊಟ್ಟೆ ಖಾಲಿ ತಟ್ಟೆ
ನಿನ್ನ ಬಡ್ಜೆಟ್ಟು ಯಾರಿಗಾಗಿ ಹೇಳೆ?

ಕುಂಭ ಮೇಳದಲಿ ಮಿಂದೆದ್ದವರು
ನನ್ನ ದೇಶದ ಮುಗ್ಧ ಜನರು
ಸ್ವರ್ಗದಾಸೆ ಹೊತ್ತು ಹೆಣವಾದರಲ್ಲಕ್ಕಾ
ಸಿರಿವಂತರಿಗೆ ಮೃಷ್ಟಾನ್ನ, ಬಡವರಿಗೆ
ಸ್ವರ್ಗಕ್ಕೆ ಕಳಿಸುವ ಮೋಸದಾಟವೇನಕ್ಕಾ.


ಬಹುದೂರದಿಂದ ಮೋಕ್ಷದಾಸೆಗೆ ಬಂದು
ಹೆಣವಾಗಿ ಊರಿಗೆ ಮರಳಿದರಲ್ಲೇ ಅಕ್ಕಾ!
ಪ್ರಜೆಗಳ ದು:ಖ ಕೇಳುವುದೇ ಇಲ್ಲ ಅರಸು
ದಿನಕ್ಕೆ ಹಲವು ವೇಷ ಬದಲಿಸುದರಲ್ಲೇ ಮಗ್ನ
ಶೋಕಿಲಾಲನ ವಿದೇಶ ಪ್ರಯಾಣ ಅನುದಿನ.

ನೀರಲ್ಲಿ ಮುಳುಗೆದ್ದರೆ ಸ್ವರ್ಗ ಮೂರೇ ಗೇಣು
ಬೊಗಳೆ ಭರವಸೆ ನೀಡುವ ರಾಜನು
ಚುನಾವಣೆ ಮುಂದೆ ಇರುವಾಗಲೆಲ್ಲ
ಗುಹೆ ಹೊಕ್ಕು, ನೀರಲ್ಲಿ ಮುಳುಗಿ
ಆಸ್ಥೆಯ ಪಾಠ ಹೇಳುವನಲ್ಲೇ ಅಕ್ಕಾ!

ನೀರ ಮುಳುಗೇಳುವ ಹುಂಬರ ಮೇಳ
ಶ್ರದ್ಧೆಯಿಂದ ಡುಬುಕಿ ಹೊಡೆದು ಡಬಾಕಿದ
ಮಂಕು ಬೂದಿ ಒರೆಸಿದ ಬಡವರ ಬುದ್ದಿಗೆ
ಸುಳ್ಳಿನ ಅಗ್ನಿ ಕುಂಡದಲಿ ಜನರ ನೂಕಿ
ಜೋಳಿಗೆ ತೋರಿಸಿ ಊರು ಕೊಳ್ಳೆ ಹೊಡೆದ.

–ಕೆ. ಷರೀಫಾ

NEW No. MAG(3)/NPP/205/2021-2022
JANASHAKTHI KANNADA VARA PATRIKE February 17-23, 2025 Price: Rs. 10/- Date of Publication: 14 February 2025 RNI No. KARKAN /2006/17926 Posted on 19-02-2025
Posted at BG PSO, BG - 560026 **Posted at Periodical Rate -** Rs. 2



ರೆಡ್ ಬುಕ್ ಡೇ

ಫೆಬ್ರವರಿ 21 ಕೆಂಪು ಪುಸ್ತಕ ದಿನ (Red Books Day). ಪ್ರಪಂಚದಲ್ಲಿ ಅತಿ ಹೆಚ್ಚು ಮುದ್ರಿತವಾಗಿರುವ ಪುಸ್ತಕಗಳ ಪಟ್ಟಿಯಲ್ಲಿ ಬೈಬಲ್ ಮೊದಲನೆಯದು, ನಂತರ ಕುರಾನ್. ಮೂರನೆಯದೆಂದರೆ, ಕಮ್ಯುನಿಸ್ಟ್ ಪ್ರಣಾಳಿಕೆ. ಮೊದಲೆರಡು ಪುಸ್ತಕಗಳು ಧಾರ್ಮಿಕ ನಂಬಿಕೆಯವು. ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ಕಮ್ಯುನಿಸ್ಟ್ ಪ್ರಣಾಳಿಕೆ ಸಮಾಜವನ್ನು ಆಮೂಲಾಗ್ರವಾಗಿ ಬದಲಾಯಿಸುವ ವೈಜ್ಞಾನಿಕ ಪುಸ್ತಕವಾಗಿದೆ. 1848ರಲ್ಲಿ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ಪ್ರಕಟಿಸಿದ ದಿನದಂದು 'ಕೆಂಪು ಪುಸ್ತಕ ದಿನ'ವನ್ನಾಗಿ ಆಚರಿಸಲಾಗುತ್ತದೆ. ಮುಂದೊಂದು ದಿನ ವೈಜ್ಞಾನಿಕ ಚಿಂತನೆಯು ಮೂಢನಂಬಿಕೆಗಳನ್ನು ಮೀರಿಸುತ್ತದೆ. ಆಗ ಜಗತ್ತು ಸುಗಮವಾಗಿ ಸಾಗುತ್ತದೆ. ಇದು ಜೋತಿಷ್ಯವೂ ಅಲ್ಲ, ಬ್ರಹ್ಮನ ಕಾಲಜ್ಞಾನವೂ ಅಲ್ಲ. ಇದು ಭವಿಷ್ಯದ ಸೂಚಕವಾಗಿದೆ.

ಕಮ್ಯುನಿಸ್ಟ್ ಪ್ರಣಾಳಿಕೆ ಒಂದು ವೈಜ್ಞಾನಿಕ ಸಿದ್ಧಾಂತದ ಪುಸ್ತಕವಾಗಿದೆ. ಕಮ್ಯುನಿಸ್ಟ್ ಪ್ರಣಾಳಿಕೆ ಕಮ್ಯುನಿಸ್ಟರಿಗೆ ಮಾತ್ರ ಒಂದು ದಾಖಲೆಯಲ್ಲ; ಬದಲಾವಣೆಯನ್ನು ಬಯಸುವ ಎಲ್ಲರಿಗೂ ಒಂದು ಆಶಾದಾಯಕ ಮಹಾಕಾವ್ಯವಾಗಿದೆ. ಬಂಡವಾಳಶಾಹಿಯಿಂದ ಸೃಷ್ಟಿಯಾದ ಹಸಿವು, ಅನಕ್ಷರತೆ, ಬಡತನ ಮುಂತಾದ ಜಡ ಸಮಸ್ಯೆಗಳನ್ನು ಮೀರಿದ ಸಮಾಜವಾದಿ ಪ್ರಕ್ರಿಯೆಯನ್ನು ನಿರ್ಮಿಸಲು ಈ ಪುಸ್ತಕವು ಜಗತ್ತಿನ ಕೋಟ್ಯಂತರ ಜನರಿಗೆ ಪ್ರೇರಣೆ ನೀಡಿದೆ. ಮಾನವ ಸಮಾಜದ ಸ್ಥಿತಿಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದ ಕಾರ್ಲ್ ಮಾರ್ಕ್ಸ್, ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ತನ್ನ ಆತ್ಮೀಯ ಗೆಳೆಯ ಎಂಗೆಲ್ಸ್ ಜೊತೆಗೂಡಿ ಬರೆದು ಜಗತ್ತಿಗೆ ಕೊಟ್ಟರು.

ದುಡಿಯುವ ವರ್ಗದ ಕಲ್ಯಾಣ ರಾಜ್ಯ ಉದಯವಾಗುವುದು ಅನಿವಾರ್ಯ ಬೆಳವಣಿಗೆಯಾಗಿದೆ ಎಂದು ಮಾರ್ಕ್ಸ್ ಹೇಳಿದರು. ಅದಕ್ಕೇ ಈ ಬಂಡವಾಳದಾರರಿಗೆ ಕಾರ್ಲ್ ಮಾರ್ಕ್ಸ್ ಎಂದರೆ, ಕಮ್ಯುನಿಸಂ ಎಂದರೆ, ಶ್ರಮಿಕ ವರ್ಗದ ರಾಜ್ಯವೆಂದರೆ, ಕಮ್ಯುನಿಸ್ಟ್ ಪ್ರಣಾಳಿಕೆ ಎಂದರೆ ಅಪಾರ ಪರಮದ್ವೇಷ. ಈ ಬಂಡವಾಳದಾರರು, ಮಾಹಿತಿ ಮತ್ತು ಪ್ರಚಾರದ ಸಾಧನಗಳ ಮೇಲಿನ ಏಕಸ್ವಾಮ್ಯದ ಸಹಾಯದಿಂದ, ಈ ಪರಮದ್ವೇಷವನ್ನು ಸಾರ್ವಜನಿಕ ದ್ವೇಷವನ್ನಾಗಿ ಮಾಡಲು ನಿರಂತರವಾಗಿ ಅಪಪ್ರಚಾರ ಮಾಡತೊಡಗಿದ್ದಾರೆ.

ವೈಜ್ಞಾನಿಕ ಕಮ್ಯುನಿಸಂ ಕಾಲ್ಪನಿಕವಲ್ಲ

ಪ್ರಸಿದ್ಧ ಇತಿಹಾಸಕಾರ ಎರಿಕ್ ಹಾಬ್ಸ್ವಾಮ್ ಅವರು, ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರನ್ನು ಕಮ್ಯುನಿಸಂಗೆ ತಡವಾಗಿ ಬಂದವರು ಎಂದು ಕರೆಯುತ್ತಾರೆ. ಈ ಎಲ್ಲಾ ತತ್ವಗಳು ಈಗಾಗಲೇ ವಿವಿಧ ರೂಪಗಳಲ್ಲಿ ಅಸ್ತಿತ್ವದಲ್ಲಿವೆ. ಕಮ್ಯುನಿಸಂ ಎಂಬ ಪದವೂ ಇದೆ. ಅದರ ಒಳಸುಳಿಗಳನ್ನು ಅಧ್ಯಯನ ಮಾಡಿ, ಸಮಾಜವನ್ನು ಬದಲಾಯಿಸುವುದೇ ನಿಜವಾದ ವಿಷಯ ಮತ್ತು ಅದಕ್ಕೆ ವೈಜ್ಞಾನಿಕ ಸಿದ್ಧಾಂತದ ಅಗತ್ಯವಿದೆ ಎಂದು ಅರಿತುಕೊಂಡ ನಂತರ ಅವರು ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ರೂಪಿಸಿದರು. ಮನುಕುಲದ ವಿಮೋಚನೆಯ ಹಾದಿ ತಿಳಿದಿದೆ. ಆ ಕರ್ತವ್ಯದ ಅನ್ವೇಷಣೆಯಲ್ಲಿ ಲೆನಿನ್ ಎಲ್ಲರಿಗಿಂತ ಮೊದಲು ಯಶಸ್ವಿಯಾದರು ಮತ್ತು ಮೊದಲ ಸಮಾಜವಾದಿ ಸಮಾಜವನ್ನು ಸ್ಥಾಪಿಸಿದರು. ಕ್ರಾಂತಿಯ ಸಿದ್ಧಾಂತದ ಸೃಜನಶೀಲ ಅಧ್ಯಯನ ಮತ್ತು ಅನ್ವಯಕ್ಕೆ ಲೆನಿನ್ ಕರೆ ನೀಡಿದರು. ವೈಜ್ಞಾನಿಕ ಕಮ್ಯುನಿಸಂ ಕಾಲ್ಪನಿಕವಲ್ಲ, ಅದು ಯಾರದೋ ಮೆದುಳಿನಲ್ಲಿ ಹುಟ್ಟಿರುವ ಕಲ್ಪನೆಯೂ ಅಲ್ಲ, ಇದು ಮಾನವ ಜ್ಞಾನದ ಎಲ್ಲಾ ಭಾಗಗಳ ನಿಖರವಾದ ವೈಜ್ಞಾನಿಕ ಸಂಗತಿಗಳನ್ನು ಆಧರಿಸಿದ ಸಮಗ್ರ ದೃಷ್ಟಿಕೋನವಾಗಿದೆ ಎಂದು ಎರಿಕ್ ಹಾಬ್ಸ್ವಾಮ್ ಅವರು ಒತ್ತಿ ಹೇಳಿದರು. ಮಾನವ ಕುಲದ ಎಲ್ಲಾ ಜ್ಞಾನ ಸಂಪತ್ತಿನಿಂದ ನಿಮ್ಮ ಆಲೋಚನಾ ಶಕ್ತಿಯನ್ನು ಪೋಷಿಸಿದರೆ ಮಾತ್ರ ನೀವು ಕಮ್ಯುನಿಸ್ಟ್ ಆಗಲು ಸಾಧ್ಯ ಎಂದು ಸ್ಪಷ್ಟಪಡಿಸಿದರು.

ಓದುವುದೆಂದರೆ ಬರೀ ಓದುವುದಲ್ಲ. ಕಮ್ಯುನಿಸ್ಟ್‌ಗೆ ಸಾಕ್ಷರತೆಯಷ್ಟೇ ಸಾಕಾಗುವುದಿಲ್ಲ ಎಂದು ಲೆನಿನ್ ಹೇಳಿದರು. ಕೇವಲ ವಿಜ್ಞಾನವನ್ನು ಅಧ್ಯಯನ ಮಾಡಿದರೆ ಸಾಕಾಗುವುದಿಲ್ಲ. ಶ್ರಮವಿಲ್ಲದೆ, ಹೋರಾಟವಿಲ್ಲದೆ ಕಮ್ಯುನಿಸಂ ಬಗೆಗಿನ ಪುಸ್ತಕಗಳ ಜ್ಞಾನವಿಲ್ಲ ಎಂದರು. ಹೀಗಾಗಿಯೇ ಅವರು ಸೋವಿಯತ್ ಒಕ್ಕೂಟದಲ್ಲಿ ಬೋಲ್ಶೆವಿಕ್ ಕ್ರಾಂತಿಯನ್ನು ಸಾಧಿಸಲು ಸಾಧ್ಯವಾಯಿತು.

ಅಕ್ಷಯವಾದ ಚಿಂತನಾ ಸಂಪತ್ತು

ಈ ಪುಸ್ತಕದಲ್ಲಿರುವ ಅನೇಕ ಸಣ್ಣ ವಾಕ್ಯಗಳು ಮತ್ತು ನುಡಿಗಟ್ಟುಗಳು ಸಹ ಅಕ್ಷಯವಾದ ಚಿಂತನಾ ಸಂಪತ್ತನ್ನು ಒದಗಿಸುತ್ತವೆ. ಮಾನವ ಸಾಮಾಜಿಕ ಚಳುವಳಿಯ ಬಗ್ಗೆ ಮಾರ್ಕ್ಸ್ ಮತ್ತು ಎಂಗೆಲ್ಸ್ ಚಿಕ್ಕ ವಯಸ್ಸಿನಲ್ಲಿ ಹೊಂದಿದ್ದ ಪ್ರತಿಭೆ ಹೇಳಿಕೆಯ ಪ್ರತಿಯೊಂದು ಪದದಲ್ಲೂ ಹೊಳೆಯುತ್ತದೆ. ದೇಶಗಳ ನಡುವಿನ ವಿವಿಧ ಅಸಮಾನತೆಗಳು ಮತ್ತು ಅಭಿವೃದ್ಧಿ ಪ್ರವೃತ್ತಿಗಳನ್ನು ಅರ್ಥಮಾಡಿಕೊಳ್ಳಲು ಮಾರ್ಕ್ಸ್‌ವಾದವು ಮಾರ್ಗದರ್ಶನ ನೀಡುತ್ತದೆ. ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ ಚರ್ಚಿಸಿದಂತೆ ಐತಿಹಾಸಿಕ ಭೌತವಾದವನ್ನು ಸಾಮಾಜಿಕ ಚಳುವಳಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಸಮಾಜವನ್ನು ಪರಿವರ್ತಿಸಲು ಸಂಶೋಧನಾ ಸಾಧನವಾಗಿ ಬಳಸಲಾಗುತ್ತದೆ.

ಪ್ರಗತಿಪರ ಸಿದ್ಧಾಂತದ ಮೇಲೆ ದಾಳಿ

ಹಿಂದಿನ ರಾಜರ ಕಾಲದಲ್ಲಿ, "ಮಹಾರಾಜ, ನಿಮ್ಮ ಕೀರ್ತಿಯು ಸದಾ ಕಾಲ ಬೆಳಗಲಿ, ನಿಮ್ಮ ವಂಶದ ಆಳ್ವಿಕೆಯು ಸಾವಿರ ವರ್ಷಗಳ ಕಾಲ ಪ್ರವರ್ಧಮಾನಕ್ಕೆ ಬರಲಿ, ನಿಮ್ಮ ವಂಶಸ್ಥರು ಎಂದೆಂದಿಗೂ ಆಡಳಿತ ಮಾಡುತ್ತಿರಲಿ" ಎಂದು ಆಸ್ಥಾನ ಕವಿಗಳು ಮತ್ತು ಹಾಡುಗಾರ ಹೊಗಳುಭಟ್ಟರುಗಳಿಂದ ರಾಜರುಗಳು ವೈಭವೀಕರಿಸಲ್ಪಟ್ಟವರು. ಈಗ ಅವು ಕೇವಲ ಇತಿಹಾಸದ ಪಾಠಗಳಾಗಿವೆ. ನಾವು ರಾಜಪ್ರಭುತ್ವಗಳನ್ನು ಕಿತ್ತೊಗೆದು ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ್ದೇವೆ. ಅಬ್ ತೋ ಸಬ್ ಟೀಕ್ ಹೈ (ಈಗ ನಾವೆಲ್ಲರೂ ಚೆನ್ನಾಗಿದ್ದೇವೆ) ಎನ್ನುತ್ತಾ ಹೊಸದಾಗಿ ಬಂದ ಬಲಿಷ್ಟವಾದ ಆಡಳಿತಗಾರರು ಮಂತ್ರವನ್ನು ಜೋರಾಗಿ ಪಠಿಸತೊಡಗಿದ್ದಾರೆ. ಜನ ಕೂಡ ಅದೇ ಸತ್ಯ ಎಂದು ನಂಬಿಕೊಂಡು ಬರುತ್ತಿದ್ದಾರೆ.

ಬದುಕಿನ ಹೋರಾಟದಲ್ಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ವಿಜ್ಞಾನವು ಒಂದು ಸಾಧನ ಮತ್ತು ಅಸ್ತ್ರವಾಗಿದೆ. ಯಥಾಸ್ಥಿತಿ ಕಾಯ್ದುಕೊಂಡು, ತಮ್ಮ ಆಡಳಿತವನ್ನು ಶಾಶ್ವತವಾಗಿ ಉಳಿಸಿಕೊಂಡು, ಶ್ರೀಮಂತರಿಗೆ ಹೆಚ್ಚಿನ ಲಾಭ ಮಾಡಿಕೊಡಲು ಬಯಸುವವರು ಜನರಲ್ಲಿ ಪ್ರಜ್ಞೆ ಮೂಡಿಸಲು ಬಯಸುವುದಿಲ್ಲ. ಅವರು ಅದನ್ನು ಮತ್ತಷ್ಟು ಹಿಂದಕ್ಕೆ ಕೊಂಡೊಯ್ಯಲು ನೋಡುತ್ತಾರೆ. ಪ್ರಗತಿಪರ ಸಿದ್ಧಾಂತದ ಮೇಲೆ ದಾಳಿ ನಡೆಸುತ್ತಾರೆ. ಯಾವುದೇ ದೇಶಕ್ಕೆ ಶಿಕ್ಷಣ ಅತ್ಯಗತ್ಯ. ಎದುರಾಳಿಗಳ ಮೇಲೆ ಸೈದ್ಧಾಂತಿಕವಾಗಿ ದಾಳಿ ಮಾಡುವುದು, ಅದಕ್ಕೆ ಬೇಕಾದ ಸಾಹಿತ್ಯವನ್ನು ಪ್ರಕಟಿಸುವುದು ಮತ್ತು ಆ ಅರಿವಿನೊಂದಿಗೆ ಜನರನ್ನು ಸಂಘಟಿಸಿ ಹೋರಾಟ ಮಾಡುವುದು ಛಲಬಿಡದ ತ್ರಿವಿಕ್ರಮನ ಕೆಲಸ. ಕಮ್ಯುನಿಸ್ಟರು ಮಾತ್ರ ಇದನ್ನು ಮಾಡುತ್ತಾರೆ. ನಿಷ್ಠೆ ಮತ್ತು ಗದ್ದಲವನ್ನು ಆಧರಿಸಿದ ಆಡಳಿತ ಪಕ್ಷಗಳ ನೀತಿಗಿಂತ ಭಿನ್ನವಾಗಿ, ಕಮ್ಯುನಿಸ್ಟ್ ಪಕ್ಷವು ಸಿದ್ಧಾಂತ, ಅಧ್ಯಯನ, ವಿಮರ್ಶೆ, ಸಾರ್ವಜನಿಕ ಜಾಗೃತಿ ಮತ್ತು ಕ್ರಾಂತಿಯನ್ನು ಸಾಧಿಸಲು ಪ್ರತಿರೋಧವನ್ನು ಆಧರಿಸಿದ ಜನರ ಪಕ್ಷವಾಗಿದೆ.

ಕ್ರಾಂತಿಗೆ ಸೂಕ್ತವಾದ ಹೋರಾಟದ ತಂತ್ರಗಳು ಮತ್ತು ವಿಧಾನಗಳು

ಅನೇಕ ಯುರೋಪಿಯನ್ ದೇಶಗಳಲ್ಲಿ, ಬಂಡವಾಳಶಾಹಿಯ ಬೆಳವಣಿಗೆಯ ಇತಿಹಾಸವನ್ನು ಊಳಿಗಮಾನ್ಯ ಪದ್ಧತಿಯ ನಾಶದಲ್ಲಿ ಕಾಣಬಹುದು. ಆದರೆ, ಭಾರತದಂತಹ ದೇಶಗಳಲ್ಲಿ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಯುರೋಪಿಯನ್ ದೇಶಗಳಲ್ಲಿ ಬಂಡವಾಳಶಾಹಿ ಅಭಿವೃದ್ಧಿಯೂ ವಿಭಿನ್ನ ಗುಣಲಕ್ಷಣಗಳೊಂದಿಗೆ ಅಭಿವೃದ್ಧಿ ಹೊಂದಿತು. ಅದೇ ಅವಧಿಯಲ್ಲಿ, ಏಷ್ಯಾದಲ್ಲಿ ಬಂಡವಾಳಶಾಹಿ ಅಭಿವೃದ್ಧಿ ಹಿಂದುಳಿದಿತ್ತು. ಈ ಬೆಳವಣಿಗೆಯ ಸಮಯದಲ್ಲಿ ಪ್ರತಿಯೊಂದು ದೇಶದಲ್ಲಿಯೂ ಶ್ರಮಜೀವಿಗಳ ಜೀವನ ಪರಿಸ್ಥಿತಿಗಳು, ಹೋರಾಟದ ಸ್ವರೂಪ ಮತ್ತು ಸಂಘಟನಾ ಪರಿಸ್ಥಿತಿಗಳು ಬದಲಾಗುತ್ತವೆ. ಇವುಗಳನ್ನು ತಿಳಿದುಕೊಂಡು, ಕಮ್ಯುನಿಸ್ಟರು ಸಮಾಜವಾದದ ಗುರಿಯತ್ತ ಸಾಗಲು ಕ್ರಾಂತಿಗೆ ಸೂಕ್ತವಾದ ಹೋರಾಟದ ತಂತ್ರಗಳು ಮತ್ತು ವಿಧಾನಗಳನ್ನು ಅಭಿವೃದ್ಧಿಪಡಿಸಬೇಕು. ಪ್ರಣಾಳಿಕೆಯ ಸಾರವು ಇದನ್ನೇ ಸೂಚಿಸುತ್ತದೆ. ಈ ಕಾರಣಕ್ಕಾಗಿ, "ನಿರ್ದಿಷ್ಟ ಪರಿಸ್ಥಿತಿಗಳನ್ನು ನಿರ್ದಿಷ್ಟ ರೀತಿಯಲ್ಲಿ ಅಧ್ಯಯನ ಮಾಡಬೇಕು" ಎಂದು ಲೆನಿನ್ ಒತ್ತಿ ಹೇಳಿದರು.

ಆಸಕ್ತಿಯಿಂದ ಓದಿದರೆ ಮಾತ್ರ ಮಾರ್ಕ್ಸ್‌ವಾದದ ತಿಳುವಳಿಕೆ ಬರುತ್ತದೆ. ವರದಿ ಮಾಡಲೆಂದೋ ಅಥವಾ ಉಪನ್ಯಾಸಕ್ಕಾಗಿಯೋ ಅಥವಾ ಯಾಂತ್ರಿಕವಾಗಿ ಓದುವುದರಲ್ಲಿ ಯಾವುದೇ ಉಪಯೋಗವಿಲ್ಲ. ಏನನ್ನು ಓದಬೇಕೆಂದು ಆಯ್ಕೆಮಾಡುವಾಗ, ವೈಯಕ್ತಿಕ ಆಸಕ್ತಿ ಹಾಗೂ ಸಮುದಾಯದ ಅಗತ್ಯಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಇದು ತಕ್ಷಣದ ಸಮಸ್ಯೆಗಳಿಗೆ ಸೀಮಿತವಾಗಿ ಅಥವಾ ಮೂಲಭೂತ ತತ್ವಗಳ ತಿಳುವಳಿಕೆಗಾಗಿ ಮಾತ್ರವಲ್ಲ, ಇವೆರಡರ ಸಂಯೋಜನೆ ಇರಬೇಕು. ನಮ್ಮ ಅರಿವನ್ನು ಹೆಚ್ಚಿಸಲು, ಜನಸಾಮಾನ್ಯರಿಗೆ ಕಲಿಸಲು, ಗೊಂದಲವನ್ನು ತೊಡೆದುಹಾಕಲು, ನಮ್ಮ ಶತ್ರುಗಳನ್ನು ಎದುರಿಸಲು ನಾವು ಓದಬೇಕು. ಕೆಲವರು ತಾವೆಲ್ಲ ಥಿಯರಿ ದಡ್ಡರೆಂದು ಭಾವಿಸಿ ಇಷ್ಟು ಓದಲು ಸಾಧ್ಯವಿಲ್ಲ ಎಂದುಕೊಳ್ಳುತ್ತಾರೆ, ಆದರೆ ಅದು ತಪ್ಪು. ಅಜ್ಞಾನವು ನಾಚಿಕೆಪಡುವಂಥದ್ದಲ್ಲ. ಅದನ್ನು ಅಧ್ಯಯನದ ದೀಪದಿಂದ ನಂದಿಸಬೇಕು. ರಾಮಾಯಣ ಭಾರತಗಳಂತಹ ವಿಷಯಗಳನ್ನು ಈಗ ಅಪಹಾಸ್ಯ ಮಾಡುವುದರಲ್ಲಿ ಅರ್ಥವಿಲ್ಲ. ಅವುಗಳ ಹಿನ್ನೆಲೆಗಳು ಸಮಾಜದ ಹಾದಿಯಲ್ಲಿ ಹೇಗೆ ವಿಕಸನಗೊಂಡಿವೆ, ಅದರಲ್ಲಿ ಅಂತರ್ಗತವಾಗಿರುವ ಸಮಾಜದ ವಿಕಾಸದ ಕುರುಹುಗಳು ಏನೆಂದು ತಿಳಿಯಬೇಕು,

ಸಾಮಾಜಿಕ–ಆರ್ಥಿಕ ವ್ಯವಸ್ಥೆಗಳ ಬಗ್ಗೆ ವಿಶಿಷ್ಟ ದೃಷ್ಟಿಕೋನ

ಸಾಮಾಜಿಕ–ಆರ್ಥಿಕ ವ್ಯವಸ್ಥೆಗಳ ಬಗ್ಗೆ ಮಾರ್ಕ್ಸ್‌ವಾದವು ವಿಶಿಷ್ಟ ದೃಷ್ಟಿಕೋನವನ್ನು ಹೊಂದಿದೆ. ಮಾರ್ಕ್ಸ್‌ವಾದಿಗಳು ಸಾಮಾನ್ಯವಾಗಿ ಸಾಮಾಜಿಕ ಅಭಿವೃದ್ಧಿಯನ್ನು ನಿರ್ದಿಷ್ಟ ಹಂತಗಳಲ್ಲಿ ನೋಡುತ್ತಾರೆ, ಉದಾಹರಣೆಗೆ ಪ್ರಾಚೀನ ಕಮ್ಯುನಿಸ್ಟ್ ಸಮಾಜ, ಗುಲಾಮ ಸಮಾಜ, ಊಳಿಗಮಾನ್ಯ ಸಮಾಜ ಮತ್ತು ಬಂಡವಾಳಶಾಹಿ ಸಮಾಜ. ಆದರೆ ಇದನ್ನು ಒಂದು ಸೂತ್ರವಾಗಿ, ಒಂದರ ನಂತರ ಒಂದರಂತೆ ತಂಡವನ್ನು ನಿರ್ಮಿಸುವ ಸಾಮಾಜಿಕ ಅಭಿವೃದ್ಧಿಯಾಗಿ ನೋಡಬಾರದು. ಈ ಶುಷ್ಕತೆಯನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ಬರಹಗಳಲ್ಲಿ ತಪ್ಪಿಸಿರುವುದನ್ನು ಕಾಣಬಹುದು. ಪ್ರತಿಯೊಂದು ದೇಶವು ತನ್ನದೇ ಆದ ವಿಶಿಷ್ಟ ಸಾಮಾಜಿಕ ಮತ್ತು ಆರ್ಥಿಕ ರಚನೆ ಮತ್ತು ವಿಶೇಷ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**